

ಗೌ ಲಂಕೇಶ್
ಜೂನ್ 10, 2009 ರೂ. 12/-

ಅಕ್ಷರ ದಾಸೋಹ ಖಾಸಗೀಕರಣ ಬೇಡ

ಶಾಲಾ ಮಕ್ಕಳಿಗೆ ಮೊಟ್ಟೆ ಬೇಡ
ಇವರಿಗೆ ಮಟನ್ ಬೇಕು!



ಚೆಡ್ಡಿಗಳ ಬಾಡೂಟ



ರೆಡ್ಡಿ+ಕಾಂಗ್ರೆಸ್

ಯಡ್ಡಿಗೆ ಚಳಿಜ್ವರ




ಯೆಯ್ ಆಲ್ವಾ ಕೊಲೆ
ಜೆಪಿ ನಾಯಕರ
ಕೈವಾಡ!



IPL
ಆಟ-ಮೈಮಾಟ
ಮಾರಾಟ



ಸಿಕ್ಕಿಬಿದ್ದ
ರಾ.ಗೌಡರ ಶಿಷ್ಯೆ



ಸರ್ವೋದಯ ಟ್ರಸ್ಟ್
ನುಂಗೋದಕ್ಕೆ
ಹೊರಟ್ಟಿ ಸ್ಕೆಚ್!


ಪರ್ಯಾಯ ಒದಗಿಸದ ಪ್ರಜಾತಂತ್ರದಲ್ಲಿ

ಗೆಲುವು ಗೆದ್ದಿಲ್ಲ, ಸೋಲು ಸೋತಿಲ್ಲ!

ಚಾರ್ವಾಕ ▸ ಶಿವಸುಂದರ್

ಈ ಬಾರಿಯ ಚುನಾವಣಾ ಫಲಿತಾಂಶಗಳನ್ನು ಚುನಾವಣಾ ಪಂಡಿತರಿರಲಿ, ಆಯಾ ರಾಜಕೀಯ ಪಕ್ಷಗಳೇ ನಿರೀಕ್ಷಿಸಿರಲಿಲ್ಲ, ಕನಸು ಮನಸಿನಲ್ಲೂ ನಿರೀಕ್ಷಿಸದಷ್ಟು ಸೀಟುಗಳನ್ನು ಪಡೆದಿರುವ ಕಾಂಗ್ರೆಸ್ ಇನ್ನೂ ಆ ಬೆರಗಿನಿಂದ ಹೊರಬಂದಿಲ್ಲ, ಈ ಪರಿಯ ಸೋಲನ್ನು ಎದುರುನೋಡದಿದ್ದ ಬಿಜೆಪಿ ಇನ್ನೂ ಆ ಶಾಕ್‌ನಿಂದ ಚೇತರಿಸಿಕೊಂಡಿಲ್ಲ, ಆಡ್ವಾನಿಯವರಂತೂ ಬಹಿರಂಗವಾಗಿ ಮುಖ ತೋರಿಸಲೂ ತಯಾರಿಲ್ಲ!

ಅದೇನೇ ಇದ್ದರೂ ಕೇಂದ್ರದಲ್ಲಿ ಬಿಜೆಪಿಯಂಥ ಕೋಮುವಾದಿ ಫ್ಯಾಸಿಸ್ಟ್ ಪಕ್ಷ ಮತ್ತೊಮ್ಮೆ ಅಧಿಕಾರ ಪಡೆಯದೇ ಇರುವುದರಿಂದ ದೇಶದ ಜನತೆಗೆ ಇನ್ನೈದು ವರ್ಷಗಳ ನೆಮ್ಮದಿಯ ಕದ ಸಿಕ್ಕಿದೆ. ಆದರೆ ಅದಕ್ಕೆ ದೇಶದ ಜನತೆ ತೆರಬೇಕಿರುವ ಬಡ್ಡಿಯೇನು ಎಂಬುದೇ ಈಗ ದೇಶದ ಮುಂದಿರುವ ಪ್ರಶ್ನೆ.



ಕಾಂಗ್ರೆಸ್‌ನ ಗೆಲುವನ್ನೂ ಮತ್ತು ಬಿಜೆಪಿಯ ಸೋಲನ್ನೂ ರಾಜಧಾನಿ ಪಂಡಿತರು ವಿಶ್ಲೇಷಿಸುತ್ತಿರುವ ಪರಿ ಮತ್ತು ಬಿತ್ತುತ್ತಿರುವ ಭ್ರಾಂತಿಗಳನ್ನು ನೋಡಿದರೆ ಐದು ವರ್ಷದ ನಂತರ ದೇಶದ ಜನತೆ ಭಾರಿ ಬಡ್ಡಿಯನ್ನೇ ತೆರಬೇಕಾಗುತ್ತದೆಂದು ಕಾಣುತ್ತಿದೆ. ಕೆಲವರ ಪ್ರಕಾರ ಈ ಫಲಿತಾಂಶ ಭಾರತದ ಚುನಾವಣಾ ಇತಿಹಾಸದಲ್ಲೇ ಅಭೂತಪೂರ್ವವಾದದ್ದು. ಏಕೆಂದರೆ 1977ರ ನಂತರ ಮೊದಲ ಬಾರಿಗೆ ಮತದಾರ ಆಡಳಿತದಲ್ಲಿ ಇದ್ದ ಪಕ್ಷಕ್ಕೆ ಪರವಾಗಿ ಮತಹಾಕಿದ್ದಾನೆ. ಕಾಂಗ್ರೆಸ್ಸನ್ನು ಎರಡನೇ ಬಾರಿಗೆ ಆಯ್ಕೆ ಮಾಡುವ ಮೂಲಕ ಕಾಂಗ್ರೆಸ್ಸಿನ ಆಡಳಿತದ ಪರವಾಗಿ ಮತಹಾಕಿದ್ದಾನೆ ಎಂಬುದು ಒಂದು ವಿಶ್ಲೇಷಣೆ. ಇದರ ತಾತ್ಪರ್ಯ ದೇಶದ ಜನ 2004-09ರ ನಡುವಿನ ಮನಮೋಹನ್ ಸಿಂಗ್ ಸರ್ಕಾರದ ನೀತಿಗಳನ್ನು ಒಪ್ಪಿಕೊಂಡಿದ್ದಾನೆ/ಳೆ ಎಂದಾಗುತ್ತದೆ. ಈ ದೇಶದ ಕಾರ್ಪೊರೇಟ್ ದೊರೆಗಳು ಇದೇ ತರ್ಕವನ್ನು ಮುಂದುವರೆಸಿ ಈ ಬಾರಿ ಎಡಪಕ್ಷಗಳ ಹಂಗಿಲ್ಲದೆ ಕಾಂಗ್ರೆಸ್, ಸರ್ಕಾರ ರಚಿಸಬಹುದಾದ್ದರಿಂದ ಇದು ಆರ್ಥಿಕ ಸುಧಾರಣೆಗಳ ಪರವಾಗಿ ಸಿಕ್ಕಿರುವ ಜನಾದೇಶವಾಗಿದೆ ಎಂದು ಬಣ್ಣಿಸುತ್ತಿದ್ದಾರೆ. ಇದರ ತಾತ್ಪರ್ಯವೇನೆಂದರೆ ಕಾಂಗ್ರೆಸ್ ಸರ್ಕಾರ ಮೊದಲಿಗಿಂತಲೂ ತೀವ್ರವಾಗಿ ಜನವಿರೋಧಿ ಸುಧಾರಣೆಗಳನ್ನು ಜಾರಿಗೆ ತರಲು ಜನರೇ ಜನಾದೇಶ ನೀಡಿದ್ದಾರೆ ಎಂದಾಗುತ್ತದೆ.

ಅದೇ ರೀತಿ ಈ ಬಾರಿಯ ಬಿಜೆಪಿಯ ಚುನಾವಣಾ ಸೋಲನ್ನು ಕೋಮುವಾದಿ ಅಜೆಂಡಾದ ಅಂತಿಮ ಸೋಲೆಂದು ವಿವರಿಸಲಾಗುತ್ತಿದೆ. ಬಿಜೆಪಿಗೆ ರಾಷ್ಟ್ರಮಟ್ಟದಲ್ಲಿ ಶೇ.3ರಷ್ಟು ಮತಗಳು ಮತ್ತು 22 ಸೀಟುಗಳು ಕಡಿಮೆಯಾಗಿರುವುದರಿಂದ ಬಿಜೆಪಿಯ ಕೋಮುವಾದಿ ಅಜೆಂಡಾಗಳು ತನ್ನ ಉಪಯುಕ್ತತೆಯ ಗರಿಷ್ಠ ಮಟ್ಟವನ್ನು ತಲುಪಲಾಗಿದೆಯೆಂದೂ, ಹೀಗಾಗಿ ಅದರ ಓಟುಗಳು ಇನ್ನು ಹೆಚ್ಚಾಗುವ ಸಂಭವ ಇಲ್ಲವೆಂದೂ ವಿಶ್ಲೇಷಿಸಲಾಗುತ್ತಿದೆ. ಇದರ ತಾತ್ಪರ್ಯವೆಂದರೆ ಬಿಜೆಪಿಯು ಇನ್ನು ಮುಂದೆ ಕೋಮುವಾದವನ್ನು ಬಿಟ್ಟು ಮಂದಗಾಮಿ ಅಜೆಂಡಾ ಅನುಸರಿಸುತ್ತದೆ ಮತ್ತು ಇನ್ನು ಮುಂದೆ ದೇಶಕ್ಕೆ ಕೋಮುವಾದದ ಅಪಾಯವಿಲ್ಲ ಎಂದಾಗುತ್ತದೆ.

ಈ ಬಗೆಯ ವಿಶ್ಲೇಷಣೆಗಳು ಕೇವಲ ಅರ್ಧ ಸತ್ಯವನ್ನು ಮಾತ್ರ ಹೇಳುತ್ತಿವೆ. ಉಳಿದರ್ಧ ಸತ್ಯ ಕಹಿಯಾಗಿಯೇ ಇದೆ.

ಕಾಂಗ್ರೆಸ್ ಜನರನ್ನು ಸೋಲಿಸುವುದು ಖಂಡಿತಾ!

ರಾಹುಲ್ ಗಾಂಧಿಯವರು ತಮ್ಮ ಭಾಷಣದುದ್ದಕ್ಕೂ ಕಾಂಗ್ರೆಸ್‌ನ ಕೈ ಬಡಜನರ ಜೊತೆಗಿರುವ ಕೈ ಎಂದು ಹೇಳುತ್ತಾ ಹಲವು ಕಡೆ ಕಾಂಗ್ರೆಸ್‌ನ ಗೆಲುವಿಗೆ ಕಾರಣರಾದರು. ಆದರೆ ಕಾಂಗ್ರೆಸ್‌ಗೆ ನಿರ್ಣಾಯಕ ವಿಜಯ ಸಿಗುವ ಸೂಚನೆ ಸಿಕ್ಕೊಡನೆ ಆ ಕೈ ಹಿಡಿದದ್ದು ಈ ದೇಶದ ಧನಾಢ್ಯ ಕಾರ್ಪೊರೇಟ್ ಧಣಿಗಳು, ಈ ದೇಶದ ಬಡಜನರ ಬರ್ಬಾದಿಗೆ ಕಾರಣವಾಗಿರುವ ಈ ಕಾರ್ಪೊರೇಟ್ ಧಣಿಗಳು ಈಗ ಕಾಂಗ್ರೆಸ್ಸಿಗೆ ಎಡಪಕ್ಷಗಳ ಹಂಗಿಲ್ಲದಿರುವುದರಿಂದ ಯಾವುದೇ ನೆಪವನ್ನು ಹೇಳದೆ ಎಲ್ಲಾ ಬಗೆಯ ಜನವಿರೋಧಿ ನೀತಿಗಳನ್ನು ಜಾರಿಗೆ ತರಬೇಕೆಂದು ಆದೇಶ ನೀಡಿವೆ. ಮಂತ್ರಿಮಂಡಳ ರಚನೆಯಾಗುವ ಮುನ್ನವೇ ಅವರೆಲ್ಲರನ್ನು ಸಂತೈಸಿರುವ ಕಾಂಗ್ರೆಸ್ ಪಕ್ಷ ಮುಂದಿನ ನೂರು ದಿನಗಳಲ್ಲಿ ಅವರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದೆ. ಆ ಬೇಡಿಕೆಗಳು ಬೇರೇನೂ ಅಲ್ಲ- ಶ್ರಮಜೀವಿಗಳಿಗೆ ಉದ್ಯೋಗ ಭದ್ರತೆಯನ್ನು ನಿರಾಕರಿಸುವ ಹೊಸ ಕಾರ್ಮಿಕ ನೀತಿ, ಶ್ರಮಜೀವಿಗಳು ಗಳಿಸಿ ಉಳಿಸಿದ ಹಣವನ್ನು ಈ ಹದ್ದುಗಳ ಪಾಲು ಮಾಡುವ ಹೊಸ ಪೆನ್ಷನ್ ಮತ್ತು ವಿಮಾ ನೀತಿ, ಲಾಭದಾಯಕ ಸರ್ಕಾರಿ ಉದ್ದಿಮೆಗಳನ್ನೂ ಖಾಸಗೀಕರಿಸುವ ನೀತಿ ಇತ್ಯಾದಿಗಳು. ಆದ್ದರಿಂದಲೇ 2004ರಲ್ಲಿ ಎಡಪಕ್ಷಗಳ ಬೆಂಬಲದೊಂದಿಗೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸಂವೇದಿ ಸೂಚ್ಯಂಕ ಸಾವಿರ ಅಂಕಗಳಷ್ಟು ಕುಸಿದಿದ್ದರೆ ಈ ಬಾರಿ ಕಾಂಗ್ರೆಸ್ ಎಡಪಕ್ಷಗಳ ಹಂಗಿಲ್ಲದೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದರಿಂದ ಸೆನ್ಸೆಕ್ಸ್ ಸೂಚ್ಯಂಕ 2000 ಅಂಕಗಳಷ್ಟು ಏರಿಕೆ ಕಂಡಿತು.



ಇದರಿಂದ ಈ ದೇಶದ ಕುಬೇರರಾದ ಅಂಬಾನಿ ಬ್ರದರ್ಸ್‌ಗಳಿಗೆ 90,000 ಕೋಟಿ ರೂ. ಲಾಭವಾಯಿತಂತೆ. ಈ ಘಟನೆಯೇ ಕಾಂಗ್ರೆಸ್‌ನ ಐದು ವರ್ಷಗಳು ಹೇಗಿರುತ್ತವೆಂಬುದಕ್ಕೆ ಸಾಂಕೇತಿಕವಾಗಿದೆ.

ಜಗತ್ತು ಆರ್ಥಿಕ ಹಿಂಜರಿತ ಎದುರಿಸುತ್ತಿರುವ ಈ ಸಂದರ್ಭದಲ್ಲಿ ಲ್ಯಾಟಿನ್ ಅಮೆರಿಕದಂಥ ದೇಶಗಳಲ್ಲಿ ಜನತೆ ಎಡಪಂಥೀಯ ನಿಲುವನ್ನು ಹೊಂದಿರುವ ಪಕ್ಷಗಳನ್ನು ಅಧಿಕಾರಕ್ಕೆ ತರುತ್ತಿವೆ. ಆದರೆ ನಮ್ಮಲ್ಲಿ ಮನಮೋಹನ ಮಾನವೀಯ ಮುಖವಾಡ ಧರಿಸಿರುವ ಪಕ್ಕಾ ಬಲಪಂಥೀಯ ಪಕ್ಷವಾದ ಕಾಂಗ್ರೆಸ್ ಅಧಿಕಾರ ಹಿಡಿಯುತ್ತಿದೆ. ಪ್ರಾಯಶಃ ಪ್ರಸ್ತುತ ಕಾಲಘಟ್ಟದಲ್ಲಿ ಬಿಜೆಪಿಯಂತೆ ಜನರ ಆಕ್ರೋಶವನ್ನು ನಿಯಂತ್ರಿಸಲಾಗದಷ್ಟು ಮಟ್ಟಿಗೆ ಹಸಿಹಸಿಯಾಗಿ ಬಡಿದೆಬ್ಬಿಸುವ ಬಿಜೆಪಿಗಿಂತ ಅದನ್ನು ಉಪಾಯವಾಗಿ ಶಮನ ಮಾಡುತ್ತಲೇ ತಮ್ಮ ಸೇವೆಯನ್ನು ಮಾಡುವ ಕಾಂಗ್ರೆಸ್ಸೇ ವಾಸಿ ಎಂದು ಕಾರ್ಪೊರೇಟ್ ಕಮ್ಯೂನಿಟಿ ಭಾವಿಸಿರಬೇಕು. ಹೀಗಾಗಿ ಜನ ಯಾರಿಗೇ ಓಟು ಹಾಕಿದರೂ ಸಾರಾಂಶದಲ್ಲಿ ಜನಾದೇಶ ಜನಪರವಾದ ಆಡಳಿತ ಎಂಬುದೇ ಆಗಿದ್ದರೂ ಈ ದೇಶದ ಟಾಟಾ, ಬಿರ್ಲಾ, ಅಂಬಾನಿಗಳು ಜನಾದೇಶವನ್ನು ಮತ್ತು ಸರ್ಕಾರವನ್ನು ಹೈಜಾಕ್ ಮಾಡುತ್ತಿವೆ.

ಈ ಬಾರಿಯೂ ಅಧಿಕಾರ ಕಳೆದುಕೊಂಡ ಪೆಟ್ಟಿನಿಂದ ಬಿಜೆಪಿ ಇನ್ನೂ ಹೊರಬಂದಿಲ್ಲ, ಹಿಂದುತ್ವ, ಮೋದಿತ್ವ ಹಂತ ದಾಟಿರುವ ಬಿಜೆಪಿ ಯಾವ ಹೊಸ ಮಾರ್ಗ ಹಿಡಿಯುತ್ತದೆ ಎಂಬುದನ್ನು ಕಾದು ನೋಡಬೇಕು. ಆದರೆ ಕಾಂಗ್ರೆಸ್ಸಿನೊಳಗೇ ಬಿಜೆಪಿಯಿದೆಯೆಂಬುದನ್ನು ಮಾತ್ರ ಮರೆಯುವಂತಿಲ್ಲ, ಆದ್ದರಿಂದಲೇ ಕಾಂಗ್ರೆಸ್ಸಿನ ಗೆಲುವಲ್ಲಿ ಜನತೆಯ ಗೆಲುವಿಲ್ಲ, ಪರ್ಯಾಯ ಒದಗಿಸದ ಪ್ರಜಾತಂತ್ರದಲ್ಲಿ ಗೆಲುವು ಗೆದ್ದಿಲ್ಲ, ಸೋಲು ಸೋತಿಲ್ಲ, ಜನಪರ ಪರ್ಯಾಯ ಈ ಚೌಕಟ್ಟಿನೊಳಗೆ ಕಾಣುತ್ತಲೂ ಇಲ್ಲ. ■

(ಚುನಾವಣೆಯ ಫಲಿತಾಂಶ ಕುರಿತ ಇತರೆ ವಿಶ್ಲೇಷಣೆಗೆ ಪುಟ 7 ನೋಡಿ)

No Comments

"ಕೇಂದ್ರ ಸರ್ಕಾರ ರಸ್ತೆ ನಿರ್ಮಾಣಕ್ಕೆ ಕೊಡುತ್ತಿರುವ ಅನುದಾನದಲ್ಲಿ ಶೇ.75ರಷ್ಟನ್ನಾದರೂ ರಾಜ್ಯ ಸರ್ಕಾರ ಪ್ರಾಮಾಣಿಕವಾಗಿ ಬಳಸಿಕೊಂಡಿದ್ದರೆ ಈಗ ರಸ್ತೆಗಳಿಗೆ ಸುಂಕ ವಿಧಿಸುವ ಪರಿಸ್ಥಿತಿ ಬರುತ್ತಿರಲಿಲ್ಲ."

ನ್ಯಾ. ಹೆಚ್. ರಮೇಶ್, ಹೈಕೋರ್ಟ್ ನ್ಯಾಯಾಧೀಶ

"ಕಾಂಗ್ರೆಸ್ ಪಕ್ಷ 1991-96ರ ನಡುವೆ ಆರ್ಥಿಕ ಸುಧಾರಣೆಗಳನ್ನು ತೀವ್ರಗತಿಯಲ್ಲಿ ಅನುಷ್ಠಾನಕ್ಕೆ ತಂದಿತು. ಆದರೆ ಚುನಾವಣೆಯಲ್ಲಿ ಸೋತಿತು. ಆದರೆ 2004-09ರ ನಡುವೆ ಅದೇ ಸುಧಾರಣೆಗಳನ್ನು ಮಂದಗತಿಯಲ್ಲಿ ಜಾರಿಗೆ ತಂದಿತು. ಆದರೆ ಚುನಾವಣೆಯಲ್ಲಿ ಗೆದ್ದಿತು. ಹೀಗಾಗಿ ಈಗ ಕಾಂಗ್ರೆಸ್ ಯಾವ ದಾರಿ ಹಿಡಿಯಬಹುದು?"

ಸುಭೀರ್ ಗೋಕರ್ಣ, ಅರ್ಥಶಾಸ್ತ್ರಜ್ಞ


"ಈ ಬಾರಿಯ ಚುನಾವಣೆಯಲ್ಲಿ ಆಡಳಿತ ವಿರೋಧಿ ಅಲೆ ಇರಲಿಲ್ಲ ಎಂದು ಚುನಾವಣಾ ಪಂಡಿತರು ಏನೇ ಹೇಳಿದರೂ ವಾಸ್ತವ ಅದಕ್ಕಿಂತ ಭಿನ್ನವಾಗಿದೆ. ಉದಾಹರಣೆಗೆ 2004ರ ಚುನಾವಣೆಯಲ್ಲಿ ಶೇ.50ರಷ್ಟು ಸಂಸದರು ಪುನರಾಯ್ಕೆ ಆಗಿದ್ದರೆ ಈ ಬಾರಿ ಕೇವಲ ಶೇ.33ರಷ್ಟು ಸಂಸದರು ಮಾತ್ರ ಪುನರಾಯ್ಕೆ ಆಗಿದ್ದಾರೆ."

ಒಂದು ವಿಶ್ಲೇಷಣಾ ವರದಿ

"ಇಂದು ಸಿಪಿಎಂ ಪಕ್ಷ ಬಂಗಾಳದಲ್ಲಿ 2.7ಲಕ್ಷ ಸದಸ್ಯರನ್ನು ಹೊಂದಿದೆ. ಅದರಲ್ಲಿ ಶೇ.90ರಷ್ಟು ಮಂದಿ 1977ರ ನಂತರ ಸದಸ್ಯರಾದವರು. ಇವರಲ್ಲಿ ಶೇ.65ರಷ್ಟು ಮಂದಿ 1991ರ ನಂತರ ಪಕ್ಷದ ಸದಸ್ಯರಾದವರು. ಪಕ್ಷದಲ್ಲಿ ಬಹುಸಂಖ್ಯಾತರಾದ ಇವರು ಬರೀ ಸುದಿನಗಳನ್ನೇ ಕಂಡಿದ್ದಾರೆ. ಒಂದು ವೇಳೆ ಪಕ್ಷ ಸೋತರೆ ಇವರೂ ಜಾಗ ಖಾಲಿ ಮಾಡುತ್ತಾರೆ. ಹಿಂದೆ ಸಿಪಿಎಂ ಒಂದು ಕ್ರಾಂತಿಕಾರಿ ನಿಲುವುಗಳ ಪಕ್ಷವಾಗಿತ್ತು, ಈಗ ಅದು ಬೂರ್ಜ್ವಾಗಳ ಪಕ್ಷವಾಗಿದೆ."

ಅಶೋಕ್ ಮಿತ್ರಾ,
ಹಿರಿಯ ಎಡಪಂಥೀಯ ಚಿಂತಕ

ನಂಬಿದ್ರೆನಂಬಿ ಬಿಟ್ರೆಬಿಡಿ




"ನಮ್ಮ ಪಕ್ಷದ ವೀರಯ್ಯನವರು ಸೋಲಲು ನಾನು ಕಾರಣನಲ್ಲ. ಅವರು ಗೆದ್ದರೆ ಮೇಲ್ಜಾತಿಗಳ ಮೇಲೆ ಅಟ್ರಾಸಿಟಿ ಕೇಸ್ ಹಾಕುತ್ತಾರೆ ಎಂದು ಪುಕಾರು ಹಬ್ಬಿದ್ದರಿಂದಲೇ ವೀರಯ್ಯ ಸೋಲಲು ಕಾರಣವಾಯಿತು."

ಕೃಷ್ಣಯ್ಯ ಶೆಟ್ಟಿ, ಬಿಜೆಪಿ ಮಂತ್ರಿ

"ದೇಶಾದ್ಯಂತ ನರೇಂದ್ರ ಮೋದಿ 300 ರ್‍ಯಾಲಿಗಳಲ್ಲಿ ಭಾಷಣ ಮಾಡಿದರು. ಆದರೆ ಗೆದ್ದಿದ್ದು 37 ಸೀಟುಗಳು ಮಾತ್ರ. ಆದರೆ ರಾಹುಲ್ ಗಾಂಧಿ 102 ಸಭೆಗಳಲ್ಲಿ ಭಾಷಣ ಮಾಡಿದರು. ಗೆದ್ದಿದ್ದು 75 ಸೀಟುಗಳಲ್ಲಿ."

ವರದಿ



"ಇಷ್ಟು ದಿನ ನಾವು ಜಾತಿ, ಧರ್ಮಗಳ ಆಧಾರದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆವು. ಈಗ ಸಮಯ ಬದಲಾಗಿದೆ. ನಾವೂ ಕೂಡಾ ಇನ್ನಾದರೂ ಬದಲಾಗಬೇಕು."

- ಮುಕ್ತಾರ್ ಅಬ್ಬಾಸ್ ನಖ್ವಿ, ಬಿಜೆಪಿಯ ಮುಸ್ಲಿಂ ಮುಖಂಡ

"ಮೋದಿಯವರನ್ನು ಚುನಾವಣಾ ಪ್ರಚಾರ ಮಾಡಲು ಬಿಹಾರಕ್ಕೆ ಕರೆಸಬಾರದೆನ್ನುವುದು ಬಿಹಾರದ ಬಿಜೆಪಿ ಘಟಕ ಮಾಡಿದ ತೀರ್ಮಾನ. ಇದರಲ್ಲಿ ನಿತೀಶ್ ಕುಮಾರ್‌ರವರ ಒತ್ತಡವೇನೂ ಇರಲಿಲ್ಲ."

ಸುಶೀಲ್ ಮೋದಿ, ಬಿಹಾರದ ಬಿಜೆಪಿ ಅಧ್ಯಕ್ಷ

"ರಾಹುಲ್ ಗಾಂಧಿಯವರ ಜನ್ಮಕುಂಡಲಿಯಲ್ಲಿ ನೀಚಭಂಗ ರಾಜಯೋಗ ಮತ್ತು ಚಂದ್ರಾದಿಯೋಗಗಳಿವೆ. ಆದ್ದರಿಂದ ಅವರು 2010ರ ವೇಳೆಗೆ ಪ್ರಧಾನ ಮಂತ್ರಿಯೂ ಆಗಬಹುದು ಮತ್ತು ಬಿಜೆಪಿಯ ಜೊತೆ ಸಖ್ಯವೂ ಕುದುರಬಹುದು."

ರತ್ನಾಕರ ಜೈನ್, ಜ್ಯೋತಿಷಿ

ಇದು ಉದ್ಧಾರವಾಗುವ ಇಸಂ ಅಲ್ಲ!



"ಠೇವಣಿ ಕಳೆದುಕೊಂಡಿರುವುದು ನಾನಲ್ಲ, ಜನರು."

ಪುಟ್ಟಣ್ಣಯ್ಯ, ರೈತಸಂಘದ ಅಧ್ಯಕ್ಷರು

ಅಪಾಯದ ಚಹರೆಗಳು!



"ನಾವು ದೇಶಮಟ್ಟದಲ್ಲಿ ಸೋತಿರಬಹುದು. ಆದರೆ ಕರ್ನಾಟಕದಲ್ಲಿ ನಮ್ಮ ಓಟು ಶೇರು ಶೇ.34ರಿಂದ ಶೇ.42ಕ್ಕೇರಿದೆ. ನಮ್ಮ ಸೀಟುಗಳು 18ರಿಂದ 19ಕ್ಕೇರಿದೆ. ಅಸೆಂಬ್ಲಿ ಚುನಾವಣೆಗಳಲ್ಲಿ ನಾವು 110 ಸೀಟುಗಳನ್ನು ಮಾತ್ರ ಪಡೆದಿದ್ದರೆ ಲೋಕಸಭಾ ಚುನಾವಣೆಗಳಲ್ಲಿ ನಾವು 143 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದೇವೆ."

ಅರುಣ್ ಜೈಟ್ಲಿ

ಸೋನಿಯಾ ಎಂಬ ನಾಯಕಿ, ಕನಿಮೋಳಿ ಎಂಬ ಕವಯಿತ್ರಿ



ಕಂಡಹಾಗೆ

■ ಗೌರಿ ಲಂಕೇಶ್

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಎಂತಹ ...ರ್ವ, ದಿಟ್ಟ ಮಹಿಳೆ ಎಂದು ನಾನು ಬರೆದರೆ ...ರು "ಅಷ್ಟನಂತೆ ಈಕೆಯೂ ಸೋನಿಯಾಳ ಭಟ್ಟಂಗಿ ...ಗಿದ್ದಾಳೆ" ಎಂದು ಮನಸ್ಸಿನಲ್ಲೇ ಲಟಿಕೆ ಮುರಿಯ ...ದು. ಆದರೆ ವಾಸ್ತವತೆಯನ್ನು ನೋಡಿ. ಹದಿಮೂರು ...ಗಳ ಹಿಂದೆ ಚಿಂದಿಚಿತ್ರಾನ್ನವಾಗಿದ್ದ ಕಾಂಗ್ರೆಸ್ ಪಕ್ಷ ...ತ್ತ ಚುನಾವಣೆಯಲ್ಲಿ ಯಶಸ್ವಿಯಾಗಿ ಮತ್ತೆ ದೆಹಲಿಯಲ್ಲಿ ...ರಕ್ಕೇರುತ್ತಿದೆ ಎಂದರೆ ಅದು ಸಾಮಾನ್ಯ ಸಾಧನೆಯಲ್ಲ. ...ಸ್ ಅನ್ನು ಮತ್ತೆ ಕಟ್ಟಿ ಬೆಳೆಸಿದ್ದು, ಅದಕ್ಕೆ ಹೊಸ ...ನ್ನ ತೋರಿಸಿದ್ದು, ಆತ್ಮವಿಶ್ವಾಸವನ್ನು ತುಂಬಿದ್ದು ...ನಿಯಾ ಗಾಂಧಿ.

...ಚಿತ್ರ ನೋಡಿ. ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್‌ನ ...ಖ ವಿರೋಧ ಪಕ್ಷವಾದ ಬಿಜೆಪಿ ತಾನೇ ಈ ...ದ ಜನರನ್ನು, ಸಮುದಾಯಗಳನ್ನು, ಅವರ ಸಂಸ್ಕೃತಿ ...ನ್ನ ಅರ್ಥ ಮಾಡಿಕೊಂಡಿರುವ ಪಕ್ಷ ಎಂದೂ; ಇಲ್ಲಿನ ಆಶೋತ್ತರಗಳ ಪ್ರತಿನಿಧಿ ಎಂದೂ ಬೀಗುತ್ತಿತ್ತು. ನಿಜಕ್ಕೂ ಈ ದೇಶದ ಜನರನ್ನು, ಅವರ ಬೇಕು ...ಗಳನ್ನು ಅರ್ಥಮಾಡಿಕೊಂಡಿರುವುದು ಸೋನಿಯಾ ...ಉತ್ತದೆ. ಇಲ್ಲದಿದ್ದರೆ ಆಕೆ ಕಾಂಗ್ರೆಸ್ ಪಕ್ಷವನ್ನು ಗಟ್ಟಿ ...ಸಿ, ಅದನ್ನು ಅಧಿಕಾರಕ್ಕೇರಿಸಲು ಸಾಧ್ಯವಾಗುತ್ತಿತ್ತೇ?

2004 ರ ಚುನಾವಣೆ ನಂತರ 'ವಿದೇಶಿ' ಸೋನಿಯಾ ...ಖ ಪ್ರಧಾನಿಯಾಗಲಿದ್ದಾರೆ ಎಂದು ಆತಂಕಗೊಂಡ ...ಗಳು "ಇದು ದೇಶಕ್ಕೆ ಅವಮಾನ" ಎಂದು ...ಬಾಯಿ ಬಡಿದುಕೊಂಡಿದ್ದರು. ಆ ಮೂಲಕ ...ೂಗಳ ಸ್ವಾಭಿಮಾನವನ್ನು ಕೆರಳಿಸಲು ಯತ್ನಿಸಿದ್ದರು. ...ಲ್ಲೂ ಸುಷ್ಮಾ ಸ್ವರಾಜ್ ಮತ್ತು ಉಮಾ ಭಾರತಿ ...ದ ಮಹಿಳೆಯರು ತಾವು ಎಲ್ಲ ಸವಲತ್ತುಗಳನ್ನು ...ರಿಸಿ ತಲೆ ಬೋಳಿಸಿ ವಿಧವೆಯರಂತೆ ಬದುಕುತ್ತೇವೆ ...ದ ಘೋಷಿಸಿ ತ್ಯಾಗಿಗಳಂತೆ ಪೋಸು ಕೊಡಲು ...ಗಿದ್ದರು.

ಆದರೆ ಇವರೆಲ್ಲರ ಕಪಟತನವನ್ನು, ಅದರಿಂದಾಗುವ ...ಹುತಗಳನ್ನು ಗ್ರಹಿಸಿದ ಸೋನಿಯಾ ಪ್ರಧಾನಮಂತ್ರಿ ...ವನ್ನು ತ್ಯಾಗ ಮಾಡಿದರು. ನಮ್ಮ ದೇಶದ ಸಂವಿಧಾನದ ...ರ ಪ್ರಧಾನಿಯಾಗುವ ಎಲ್ಲಾ ಹಕ್ಕುಗಳೂ ಸೋನಿಯಾ ...ಗಿದ್ದರೂ, ಅದನ್ನು ಬೇರೆಯವರಿಗೆ ಬಿಟ್ಟು ಕೊಡುವ ...ಲಕ ಭಾರತೀಯರನ್ನು ತಾನು ಬಿಜೆಪಿಗಳಿಗಿಂತ ಚೆನ್ನಾಗಿ ... ಮಾಡಿಕೊಂಡಿದ್ದೇನೆ ಎಂಬುದನ್ನು ಸಾಬೀತು ...ದರು. ಹಾಗೆ ಮಾಡುವ ಮೂಲಕ ಬಿಜೆಪಿ ...ಕರಿಗೆ ಮುಖಭಂಗವುಂಟು ಮಾಡಿದ್ದರು.

ಈ ಕಾರಣಕ್ಕಾಗಿಯೇ ಈ ಬಾರಿಯ ಚುನಾವಣೆಯಲ್ಲಿ ...ಯಾರನ್ನು ಕೆಣಕಿದರೆ, ಅವರ ಬಗ್ಗೆ ಹೀನಾಯವಾಗಿ ...ನಾಡಿದರೆ ತಮಗೆ ಯಾವ ಲಾಭವೂ ಆಗುವುದಿಲ್ಲ ...ದ ಗ್ರಹಿಸಿದ ಬಿಜೆಪಿಗಳು ತಮ್ಮ ಕೋಪವನ್ನೆಲ್ಲ ...ಮೋಹನ್ ಸಿಂಗ್ ಎಂಬ ಪಾಪದ ವ್ಯಕ್ತಿಯತ್ತ ...ಕರಿಸಿದರು. ಮುಂದೆ ಬಂದರೆ ಹಾಯದ, ಹಿಂದೆ ...ರೆ ಒದೆಯದ ಗೋವಿನಂತಿರುವ ಸಿಂಗ್ ಸಮಯ ...ಗ ಗಟ್ಟಿ ನಿಲುವುಗಳನ್ನು, ದಿಟ್ಟಮಾತುಗಳನ್ನು ...ವರೆಂದು ಬಿಜೆಪಿಗಳಿಗೆ ಅರ್ಥವಾಗಲೇ ಇಲ್ಲ. ...ಗಿ ಸಿಂಗ್‌ರನ್ನು ನಪುಂಸಕನಂತೆಯೂ, ತಮ್ಮ ...ಕ ಅಧ್ವಾಣಿಯನ್ನು ಲೋಹ ಪುರುಷ ...ಯೂ ಬಿಂಬಿಸಿ ಆರ್ಭಟದ ಪ್ರಚಾರವನ್ನು ...ದ್ದರು. ಇದೆಲ್ಲದರಿಂದಾಗಿ ಮತದಾರರಿಗೆ ...ಕೆ ತಗಡಿನ ಮನುಷ್ಯನಾಗಿಯೂ, ಸಿಂಗ್ ...ಸದಂತೆಯೂ ಕಂಡಿದ್ದಾರೆಂದು ಬಿಜೆಪಿಗೆ ...ಗುವುದರೊಳಗೆ ಕಾಲ ಮಿಂಚಿತ್ತು.

ಈ ಗೆಲುವಿಗೂ ಸೋನಿಯಾರೇ ... ಸಭ್ಯ ವ್ಯಕ್ತಿ ಸಿಂಗ್‌ರನ್ನು ...ಗಳು ಲೇವಡಿ ಮಾಡಿ ... ಜನರಲ್ಲಿ ಬಿಜೆಪಿಗಳ ಬಗ್ಗೆ ... ಹೆಚ್ಚುತ್ತದೆ ಎಂದು ಆಕೆಗೆ ...ತ್ತು, ಆಕೆ ಭಾರತೀಯರನ್ನು ...ರುವುದಕ್ಕೆ, ಇದೂ ...ದು ಉದಾಹರಣೆ.

...ನ್ನು ರಾಹುಲ್ ಗಾಂಧಿ ... ಆಕೆ ರೂಪಿಸುತ್ತಿರುವ ... ನೋಡಿ. ಇಲ್ಲಿ ಯದಿ ...ನಷ್ಟು ತನ್ನ ಪುತ್ರನನ್ನು ...ಗ್ರೆಸ್ ಬಿಜೆಪಿ ಮೇಲೆ ...ವಾಗಿ ಹೇರುತ್ತಾರೆ. ಅಲ್ಲಿ, ರಾಹುಲ್ ಗಾಂಧಿಯನ್ನೇ ಪ್ರಧಾನಿ ಮಾಡಿ ಎಂದು ಕಾಂಗ್ರೆಗಳೇ ಬೊಬ್ಬೆ ಹಾಕುತ್ತಿದ್ದರೂ ಸೋನಿಯಾ ಅದಕ್ಕೆ ಸೊಪ್ಪು ಹಾಕುವುದಿಲ್ಲ. ಬದಲಾಗಿ ದೇಶದ ಮೂಲೆ ಮೂಲೆಗಳನ್ನು ಸುತ್ತಾಡಿ, ಜನರನ್ನು ಭೇಟಿ ಮಾಡಿ, ಹಿರಿಯ ಚಿಂತಕರ ಸಲಹೆ ಪಡೆದು, ಅಗತ್ಯವಾದ ಪುಸ್ತಕಗಳನ್ನು ಓದಿ ಈ ದೇಶವನ್ನು, ಇದರ ಜನರನ್ನು ಮೊದಲು ಅರ್ಥಮಾಡಿಕೋ ಎಂದು ಕಳುಹಿಸುತ್ತಾರೆ. ತನ್ನ ಮಗನ ಈ ಪಯಣ ದೀರ್ಘಾವಧಿಯದ್ದಾಗಿದ್ದರೂ ಆತನಿಗೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಅದು ಅಗತ್ಯ ಎಂಬುದು ಸೋನಿಯಾಗೆ ಗೊತ್ತು. ಅಷ್ಟೇ ಅಲ್ಲ ಭಾರತದಲ್ಲಿಅದರಲ್ಲೂ ಕಾಂಗ್ರೆಸ್‌ನಲ್ಲಿ ನಾಯಕರಾಗುವುದು ಸುಲಭ. ಆದರೆ ನಾಯಕತ್ವದ ಗುಣಗಳನ್ನು ಪಡೆಯುವುದು ಅಷ್ಟು ಸುಲಭವಲ್ಲ ಎಂಬುದು ಭಾರತೀಯರನ್ನು ನೋಡಿಯೇ ಸೋನಿಯಾ ಅರ್ಥಮಾಡಿಕೊಂಡಿರುವ ಸತ್ಯ.


ರಾಹುಲ್‌ನ ಈ 'ದೇಶ ಸುತ್ತುವಿಕೆ'ಯ ಬಗ್ಗೆ ಈ ಹಿಂದೆ ಕೆಲವರು ಲೇವಡಿ ಮಾಡಿದ್ದರು, ಇದೆಂತಹ ಹುಚ್ಚಾಟ ಎಂದು ನಕ್ಕಿದ್ದರು ಆ ಅನುಭವದಿಂದ ರಾಹುಲ್ ಮಾಗಿರುವುದು, ಪ್ರಜ್ಞಾವಂತನಾಗಿರುವುದು ಈಗ ಸ್ಪಷ್ಟವಾಗಿ ಗೋಚರಿಸುತ್ತಿದೆ.



ಕ್ಯಾಥೊಲಿಕ್ ಕ್ರಿಶ್ಚಿಯನ್ ಧರ್ಮದಲ್ಲಿ ಜನಿಸಿದ ಸೋನಿಯಾ ತಮ್ಮ ವೈಯಕ್ತಿಕ ಬದುಕಿನಲ್ಲಿ ಎಷ್ಟು ಧರ್ಮಶ್ರದ್ಧೆ ಹೊಂದಿದ್ದಾರೆ ಎಂಬುದು ಅವರ ಹತ್ತಿರದವರನ್ನು ಹೊರತುಪಡಿಸಿ ಯಾರಿಗೂ ಗೊತ್ತಿಲ್ಲ. ಆದರೆ ಕ್ಯಾಥೊಲಿಕ್ ಪದಕ್ಕೆ ಕನ್ನಡದಲ್ಲಿ "ಸಾರ್ವಲೌಕಿಕ, ಎಲ್ಲರಿಗೂ ಅನ್ವಯಿಸುವ, ವಿಶಾಲ ಹೃದಯದ, ಸಹಿಷ್ಣುತೆಯ" ಎಂಬ ಅರ್ಥಗಳಿವೆ. ತಮ್ಮ ಧರ್ಮದ ಬಗ್ಗೆ ಸ್ವಲ್ಪವೇ ಸ್ವಲ್ಪ ಶ್ರದ್ಧೆಯನ್ನಾದರೂ ಸೋನಿಯಾ ಹೊಂದಿದ್ದರೆ ಅನ್ಯರ ಧರ್ಮ ಕೇಂದ್ರವನ್ನು ಧ್ವಂಸ ಮಾಡುವ, ಅನ್ಯರ ಕೈಕಾಲು, ನಾಲಿಗೆಯನ್ನು ಕತ್ತರಿಸುವ, ದೇವರ ಹೆಸರಲ್ಲಿ ದ್ವೇಷವನ್ನು ಹರಡುವ ಬಿಜೆಪಿಗಳ ಹಿಂದೂತ್ವವಾದ ಆಕೆಗೆ ವಿಚಿತ್ರವಾಗಿ ಮಾತ್ರವಲ್ಲ, ಆಘಾತಕಾರಿಯಾಗಿ ಕಂಡಿದ್ದರೂ ಅಚ್ಚರಿ ಇಲ್ಲ. ಬಿಜೆಪಿಗಳ ಅಂತರಾಳದಲ್ಲಿರುವ ಮನುಧರ್ಮ ಮತ್ತದರ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ ಕಂಡು ಸೋನಿಯಾ ದಿಗ್ಭ್ರಮೆಗೊಂಡಿದ್ದರೆ ಅದು ಆಕೆಯ ವ್ಯಕ್ತಿತ್ವಕ್ಕೆ ಸಹಜ ಕೂಡ.

ಮೂಲತಃ ಸೋನಿಯಾ ಹೊರದೇಶದಿಂದ ಬಂದಿದ್ದವರು. ಆದರೆ ಅದೇ ಇವತ್ತು ಆಕೆ ನಮ್ಮ ಜನರನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ಕೂಡ ಆಗಿದೆ ಎನಿಸುತ್ತದೆ. ಇಲ್ಲವೆಂದರೆ "ಭಾರತೀಯತೆ", "ದೇಶ ಪ್ರೇಮ" ಇತ್ಯಾದಿಗಳ ಬಗ್ಗೆ ಬಡಬಡಾಯಿಸುವ ಬಿಜೆಪಿಗಳಿಗೆ ಕಾಣದ, ಅರ್ಥವಾಗದ ಭಾರತ ಸೋನಿಯಾಗೆ ಅರ್ಥವಾಗಿದ್ದಾದರೂ ಹೇಗ್ರೆ? ಅದನ್ನು ಆಕೆ ಜಯಿಸಿದ್ದಾದರೂ ಹೇಗೆ? ಆಕೆಯನ್ನು 'ವಿದೇಶಿ' ಎಂದು ಕರೆಯುವುದಾದರೂ ಹೇಗೆ?

ಅಷ್ಟ ಹೇಳಿದ್ದಂತೆ ಸೋನಿಯಾ ಗಾಂಧಿ ಈ ದೇಶದ ಸೊಸೆ ಮಾತ್ರವಲ್ಲ ಆಕೆ ಈ ದೇಶದವರೇ ಆಗಿದ್ದಾರೆ.



* * * * * *

ಅತಿಯಾಸೆಯೇ ದುಃಖಕ್ಕೆ ಮೂಲ ಎಂಬ ಮಾತು 18 ಸಂಸದರನ್ನು ಹೊಂದಿರುವ ಆದರೆ 9 ಮಂತ್ರಿ ಸ್ಥಾನಗಳನ್ನು ಕೇಳುತ್ತಿದ್ದ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರಿಗಿಂತ ಅವರ ಪುತ್ರಿ ಕನಿಮೋಳಿ ಅವರಿಗೆ ಇವತ್ತು ಅನ್ವಯಿಸುತ್ತಿರುವುದು ರಾಜಕೀಯದ ಸೋಜಿಗಗಳಲ್ಲಿ ಒಂದು.

ತನ್ನ ಮಗ ಅಳಗಿರಿಗೂ, ಕಸಿನ್ ಬ್ರದರ್ ದಯಾನಿಧಿ ಮಾರನ್‌ಗೂ, ಪಕ್ಷದ ವಿ. ರಾಜಾರಿಗೂ ಸಚಿವ ಸ್ಥಾನವನ್ನು ಬಿಟ್ಟುಕೊಟ್ಟಿರುವ ಕರುಣಾನಿಧಿಯವರ ಡಿಎಂಕೆ ಪಕ್ಷ ಕನಿಮೋಳಿ ಅವರನ್ನು 'ಕೇವಲ' ರಾಜ್ಯಸಭಾದ ಸದಸ್ಯೆ ಸ್ಥಾನಕ್ಕೆ ಸುಮ್ಮನಿರುವಂತೆ ಮಾಡಿದೆ.

ಅಂದಹಾಗೆ ಈ ಕನಿಮೋಳಿ ಬಗ್ಗೆ ಚುರುಮುರಿ ಬ್ಲಾಗ್‌ನಲ್ಲಿ ಒಂದು ಸ್ವಾರಸ್ಯಕರ ಸಂಗತಿ ಪ್ರಕಟಗೊಂಡಿದೆ. ಕನಿಮೋಳಿ ಅವರನ್ನು ಕುರಿತ ಸಂಸತ್ ಸದಸ್ಯರ ಪುಟದಲ್ಲಿ ಅವರ ತಂದೆ, ತಾಯಿ, ವಿದ್ಯಾಭ್ಯಾಸ, ಆಸಕ್ತಿ ಇತ್ಯಾದಿ ಯಾವುದರ ಬಗ್ಗೆಯೂ ವಿವರಗಳಿಲ್ಲ. ಆದರೆ 1968 ರಲ್ಲಿ ಜನಿಸಿದ ಇವರನ್ನು 'ಸ್ವಾತಂತ್ರ್ಯ ಹೋರಾಟಗಾರ್ತಿ" ಎಂದು ದಾಖಲಿಸಲಾಗಿದೆ!

ಮಹಿಳಾ ಸ್ವಾತಂತ್ರ್ಯದ ಬಗ್ಗೆ ಕನಿಮೋಳಿ ದನಿ ಎತ್ತುವುದರಿಂದ ಮತ್ತು ಆ ನಿಟ್ಟನಲ್ಲಿ ಕೆಲ ಸಂಘಟನೆಗಳೊಂದಿಗೆ ಕೆಲಸ ಮಾಡುತ್ತಿರುವುದರಿಂದ ಸಂಸತ್ ಸದಸ್ಯರನ್ನು ಕುರಿತ ಮಾಹಿತಿಗಳ ವೆಬ್‌ಸೈಟನ್ನು ನೋಡಿಕೊಳ್ಳುತ್ತಿರುವ ಯಾರೋ ಪುಣ್ಯಾತ್ಮ 41 ವರ್ಷ ವಯಸ್ಸಿನ ಈಕೆಯನ್ನು 'ಸ್ವಾತಂತ್ರ್ಯ ಹೋರಾಟಗಾರ್ತಿ' ಎಂದು ಭ್ರಮಿಸಿರಬೇಕು!

ಅಂದಹಾಗೆ ಸಾಕಷ್ಟು ಪ್ರಶಂಸೆ ಪಡೆದ ಕವಯಿತ್ರಿಯೂ ಆಗಿರುವ ಕನಿಮೋಳಿ ಅವರು ತನ್ನ ವೈಯಕ್ತಿಕ ಬದುಕಿನಲ್ಲೂ ಸಂಪ್ರದಾಯದ ಸಂಕೋಲೆಗಳಿಂದ ಬಿಡುಗಡೆ ಪಡೆದು ತಮಗೆ ಇಷ್ಟಬಂದಂತೆ ಜೀವನ ಸಾಗಿಸುತ್ತಿರುವವರು. ಈಕೆ ಇನ್ನೂ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಅವರಿಗೆ ಶಿವಕಾಸಿಯ ಬಿಸಿನೆಸ್‌ಮ್ಯಾನ್ ಒಬ್ಬರೊಂದಿಗೆ ನಿಶ್ಚಿತ ವಿವಾಹ ಮಾಡಲಾಗಿತ್ತು. ಆದರೆ ಆನಂತರ ತನ್ನತನವನ್ನು ಕವಯಿತ್ರಿಯಾಗುವ ಮೂಲಕ ಕಂಡುಕೊಂಡ ಕನಿಮೋಳಿ ತನ್ನಂತೆಯೇ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದ ಅರವಿಂದನ್ ಎಂಬುವವರನ್ನು ಪ್ರೇಮಿಸಿದರು. ಆಗ ಆಕೆ ಸಮಾಜ ಅಥವಾ ಸಂಪ್ರದಾಯ ಎಂದೆಲ್ಲ ಹೆದರದೆ ತನ್ನ ಮೊದಲನೆ ಗಂಡನಿಗೆ ವಿಚ್ಛೇದನ ನೀಡಿ ಅರವಿಂದನ್ ಅವರನ್ನು ಮದುವೆಯಾದರು. ಕೆಲ ವರ್ಷಗಳ ಹಿಂದೆ 'ಮದುವೆಗೆ ಕನ್ಯತ್ವ ಮುಖ್ಯವಲ್ಲ' ಎಂದು ನಟಿ ಖುಷ್ಬೂ ಹೇಳಿ ಆಕೆಯ ವಿರುದ್ಧ ತಮಿಳುನಾಡಿನ ರಾಜಕಾರಣಿಗಳು, ಚಿತ್ರರಂಗದ ನಟ-ನಟಿಯರು, ನಾಯಕರೆಲ್ಲ ತಿರುಗಿ ಬಿದ್ದಿದ್ದಾಗ ಖುಷ್ಬೂ ಪರ ದನಿ ಎತ್ತಿದ ಕೆಲವೇ ಕೆಲವರಲ್ಲಿ ಕನಿಮೋಳಿ ಕೂಡ ಒಬ್ಬರು.

ಕರುಣಾನಿಧಿ ತರಹದ ದೈತ್ಯ ನಾಯಕರ ಪುತ್ರಿಯಾಗಿದ್ದರೂ ಕನಿಮೋಳಿ ಈ ಹಿಂದೆ ಹಿಂದೂ ಪತ್ರಿಕೆಯಲ್ಲಿ ಉಪಸಂಪಾದಕಿಯಾಗಿ, ತಮಿಳು ವಾರಪತ್ರಿಕೆಯ ಸಂಪಾದಕಿಯಾಗಿ ದುಡಿದಿದ್ದಾರೆ. ಜೊತೆಜೊತೆಗೆ ನಾಲ್ಕೈದು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇಷ್ಟರ ಹೊರತಾಗಿ ಆಕೆ ಹೆಚ್ಚಾಗಿ ದುಡಿದಿದ್ದ ಉದಾಹರಣೆಗಳಿಲ್ಲ. ಆದರೂ ಈಕೆ ರಾಜ್ಯಸಭಾದ ಸದಸ್ಯೆಯಾದಾಗ ತನ್ನ ಒಟ್ಟು ಆಸ್ತಿಯ ಮೌಲ್ಯವನ್ನು 8.5 ಕೋಟಿ ಎಂದು ನಮೂದಿಸಿದ್ದರು. ವಾಸ್ತವವಾಗಿ ಆಕೆ ಘೋಷಿಸಿಕೊಂಡಿದ್ದ ಆಸ್ತಿಯ ಮೌಲ್ಯ ಹತ್ತು ಕೋಟಿಗೂ ಮೀರಿದ್ದು!

ಇದರರ್ಥ ಏನು? ಈಕೆಯ ಅಪಾರ ಆಸ್ತಿ ಬಂದಿದ್ದು ರಾಜಕೀಯವಾಗಿ ಪ್ರಬಲವಾಗಿರುವ ತನ್ನ ತಂದೆ ಕರುಣಾನಿಧಿಯವರಿಂದ ಎಂದೇ? ಅಥವಾ ಕನಿಮೋಳಿ ಮಹಿಳಾವಾದಿಯಾಗಿರುವುದರಿಂದ ಸಾಕಷ್ಟು ಯಶಸ್ಸು ಗಳಿಸಿರುವ ಕವಯಿತ್ರಿಯಾಗಿರುವುದರಿಂದ ಅವರ ಕವನ ಸಂಕಲನಗಳ ಲಕ್ಷಾಂತರ ಪ್ರತಿಗಳು ಮಾರಾಟವಾಗಿ ಅವರು ಕೋಟ್ಯಾಧಿಪತಿಯಾದರು ಎಂದೇ?

ಸೂಕ್ಷ್ಮ ಸಂವೇದನೆಯ ಕನಿಮೋಳಿ ತಮ್ಮ ಈ ಬದುಕಿನ ದ್ವಂದ್ವದ ಬಗ್ಗೆ ಎಂದಾದರೂ ಒಂದು ಕವಿತೆಯನ್ನು ರಚಿಸುವರೇ?! ■

ಇತರರಿಗಿಂತ ಭಿನ್ನ

ಪ್ರಿಯರೇ,

ನೀವು ಗಮನಿಸಿದ್ದೀರೋ, ಇಲ್ಲವೋ ಗೊತ್ತಿಲ್ಲ. ಕೆಲ ತಿಂಗಳ ಹಿಂದೆ ಪತ್ರಿಕೆಯನ್ನು ಮುದ್ರಿಸುವ ನ್ಯೂಸ್‌ಪ್ರಿಂಟ್ ಬೆಲೆ ಪ್ರತಿ ಟನ್‌ಗೆ 28,000ದಿಂದ 38,000ಕ್ಕೆ ಏರಿದಾಗ ದಿನಪತ್ರಿಕೆಗಳು ಸೇರಿದಂತೆ ಹಲವಾರು ವಾರಪತ್ರಿಕೆಗಳೂ ತಮ್ಮ ಬೆಲೆಯನ್ನು ಹೆಚ್ಚಿಸಿಕೊಂಡಿದ್ದವು. "ಈ ಭಾರವನ್ನು ನಾವು ಹೊರಲಾಗುವುದಿಲ್ಲ, ನೀವೂ ಇದನ್ನ ನಮ್ಮೊಂದಿಗೆ ಹಂಚಿಕೊಳ್ಳಿ" ಎಂದು ಆ ಪತ್ರಿಕೆಗಳ ಮಾಲೀಕರು ತಮ್ಮ ಮೇಲಿನ ಭಾರವನ್ನು ಓದುಗರ ಹೆಗಲಿಗೇರಿಸಿದ್ದರು.

ಆ ಸಂದರ್ಭದಲ್ಲಿ ನಮಗೂ ಕಷ್ಟವಾಗಿತ್ತು. ನಾವು ಬೆಲೆ ಏರಿಸದೆ ಪತ್ರಿಕೆಯನ್ನು ನಡೆಸುವುದೇ ಅಸಾಧ್ಯವೆಂದೆನಿಸಿತ್ತು. ಆದರೆ ಎಲ್ಲರಂತೆ ನಾವು ನಿಮ್ಮ ಈ ಪತ್ರಿಕೆಯ ಬೆಲೆಯನ್ನು ಹೆಚ್ಚಿಸಲಿಲ್ಲ. ಅದಕ್ಕೆ ಕಾರಣವೂ ಇತ್ತು. ಅಷ್ಟೊತ್ತಿಗಾಗಲೇ ತರಕಾರಿ, ಅಕ್ಕಿ, ಬೇಳೆ, ಪೆಟ್ರೋಲ್ ತರಹದ ಅಗತ್ಯ ವಸ್ತುಗಳ ಬೆಲೆಗಳು ಏರಿದ್ದರಿಂದ ಜನ ಕೂಡಾ ನಮ್ಮಷ್ಟೇ ಕಷ್ಟ ಪಡುತ್ತಿದ್ದಾರೆ ಎಂಬ ಅರಿವು ಮತ್ತು ಕಾಳಜಿ ನಮ್ಮದಾಗಿತ್ತು. ಆದ್ದರಿಂದ ನಿಮ್ಮ ಈ ಪತ್ರಿಕೆಯ ಬೆಲೆಯನ್ನು ನಾವು ಏರಿಸಿರಲಿಲ್ಲ. ಬದಲಾಗಿ ಅದರಿಂದಾದ ಕಷ್ಟ-ನಷ್ಟಗಳನ್ನು ನಾವು ನಮ್ಮ ದವಡೆ ಕಚ್ಚಿ ಅದು ಹೇಗೋ ನಿಭಾಯಿಸಿದೆವು.

ಇವತ್ತೇನಾಗಿದೆ? ಅದೇ ನ್ಯೂಸ್‌ಪ್ರಿಂಟ್ ಬೆಲೆ ಮತ್ತೆ ಹಿಂದಿನ ರೇಟಿಗೆ ಬಂದಿದೆ. ಆದರೆ ಯಾವ ಪತ್ರಿಕೆಯೂ ತನ್ನ ಮುಖಬೆಲೆಯನ್ನು ಕಡಿಮೆ ಮಾಡಿಲ್ಲ. ಬದಲಾಗಿ ಈ ಹಿಂದೆ ಹೆಚ್ಚಿಸಿದ್ದ ರೇಟಿಗೆ ತಮ್ಮ ಪತ್ರಿಕೆಗಳನ್ನು ಮಾರುತ್ತಿದ್ದಾರೆ. ಆ ಮೂಲಕ ಹೆಚ್ಚಾಗಿ ಬರುತ್ತಿರುವ ಲಾಭವನ್ನು ತುಟಿಕ್‌ಪಿಟಿಕ್ ಎನ್ನದೇ ಸ್ವೀಕರಿಸುತ್ತಿದ್ದಾರೆ. ಇದು ಕೇವಲ ಎರಡು ರೂಪಾಯಿಗಳ ಮಾತಲ್ಲ. ಬದಲಾಗಿ ತಿಂಗಳಿಗೆ ಸಾವಿರಾರು, ಲಕ್ಷಾಂತರ ರೂಪಾಯಿಗಳ ಬಾಬತ್ತು!


ಆದರೆ ನಿಮ್ಮ ಪತ್ರಿಕೆ ಈ ವಿಷಯದಲ್ಲೂ ಇತರರಿಗಿಂತ ಭಿನ್ನ. ನಿಮ್ಮಂತೆ ನಮಗೂ ಕಷ್ಟ ಬಂದಾಗ ಅದನ್ನು ನಿಮ್ಮ ಹೆಗಲಿಗೇರಿಸದೇ ನಾವೇ ಹೊತ್ತುಕೊಂಡೆವು. ಈಗ ನ್ಯೂಸ್‌ಪ್ರಿಂಟ್ ಬೆಲೆ ಕಡಿಮೆಯಾಗಿರುವುದರಿಂದ ಒಂದಿಷ್ಟು ನೆಮ್ಮದಿಯಿಂದ ಉಸಿರಾಡುತ್ತಿದ್ದೇವಷ್ಟೇ.

ಜನಪರ ಮತ್ತು ಪ್ರಗತಿಪರ ಕಾಳಜಿಗಳೊಂದಿಗೆ ಜಾಹೀರಾತುಗಳಿಲ್ಲದೆ ಪತ್ರಿಕೆಯೊಂದನ್ನು ನಡೆಸುವುದೇ ಅಸಾಧ್ಯದ ಕೆಲಸ ಎಂಬಂತಿರುವ ಪ್ರಸ್ತುತ ಪರಿಸ್ಥಿತಿಯಲ್ಲೂ ನಿಮ್ಮ ಈ ಪತ್ರಿಕೆ ಯಾವ ರೀತಿಯಲ್ಲೂ ರಾಜಿ ಮಾಡಿಕೊಳ್ಳದೆ ಮುಂದುವರೆದಿದೆ.


ಇದನ್ನು ಸಾಧ್ಯವಾಗಿಸಿರುವುದು ನಿಮ್ಮ ಬಗೆಗಿನ ನಮ್ಮ ಕಾಳಜಿ ಮತ್ತು ನಮ್ಮ ಬಗ್ಗೆ ನಿಮ್ಮ ಬೆಂಬಲ.

ಇದು ಹೀಗೇ ಮುಂದುವರೆಯಲಿ, ಈ ನಿಮ್ಮ ಪತ್ರಿಕೆ ಇನ್ನಷ್ಟು ಬೆಳೆಯಲು ನಿಮ್ಮ ಪ್ರೋತ್ಸಾಹ ಎಂದಿಗೂ ಇರಲಿ ಎಂದು ಆಶಿಸುತ್ತೇವೆ.

● ನಿಮ್ಮ ಗೌರಿ ಮತ್ತು ಬಳಗ.



ಯಡಿಯೂರಪ್ಪನ ನೀರು ಕುಡಿಸುವ ವಿಧಾನ



ನಾಲ್ಕೈದು ದಿನಗಳ ಹಿಂದೆ ಮುಖ್ಯಮಂತ್ರಿ ಯಡಿಯೂರಪ್ಪನವರು ಬೆಂಗಳೂರಿನ ಜನರಿಗೆ ಉಡುಗೊರೆಯೊಂದನ್ನು ಕೊಟ್ಟಿದ್ದಾರೆ. ಕಾವೇರಿ ಕುಡಿಯುವ ನೀರು ಪೂರೈಕೆಯ ನಾಲ್ಕನೇ ಹಂತದ ಯೋಜನೆಯನ್ನು ಉದ್ಘಾಟಿಸುತ್ತಾ ಕೊಳಗೇರಿಯಲ್ಲಿ ವಾಸಿಸುತ್ತಿರುವ ಬಡಜನರ ನೀರಿನ ಬಿಲ್ಲಿನ ಮೇಲಿನ ಬಡ್ಡಿಯನ್ನು ರದ್ದುಪಡಿಸುವುದಾಗಿ ಘೋಷಿಸಿದ್ದಾರೆ. ಪೂರ್ಣ ಪ್ರಮಾಣದ ಬಡ್ಡಿಯನ್ನು ರದ್ದುಪಡಿಸಿದರೆ ಸರ್ಕಾರಕ್ಕೆ ತುಂಬಾ ನಷ್ಟವಾಗುತ್ತದೆಯಾದ್ದರಿಂದ ಕೇವಲ 4200 ರೂಪಾಯಿಗಳಷ್ಟು ಬಡ್ಡಿಯನ್ನು ಮನ್ನಾ ಮಾಡುವುದಾಗಿ ಹೇಳಿದ್ದಾರೆ. ಇದರಿಂದ ಬೆಂಗಳೂರಿನ ಸುಮಾರು 12,000 ಬಡ ಕುಟುಂಬಗಳಿಗೆ ಅನುಕೂಲವಾಗಲಿದ್ದು ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಗೆ ಐದು ಕೋಟಿ ನಷ್ಟವಾಗಲಿದೆ ಎಂದು ವಿವರಿಸಿದ್ದಾರೆ. ಬೆಂಗಳೂರಿನ ಎಲ್ಲಾ ಬಡಬಗ್ಗರಿಗೆ ಅನುಕೂಲ ಮಾಡಲು ಯಡಿಯೂರಪ್ಪನಿಗೆ ಸಾಧ್ಯವಾಗಲಿಲ್ಲವಾದರೂ ಕನಿಷ್ಠ ಹನ್ನೆರಡು ಸಾವಿರ ಜನಕ್ಕಾದರೂ ಒಳ್ಳೆ ಕೆಲಸ ಮಾಡಿದರಲ್ಲ ಅಂತ ಸಹಜವಾಗಿ ಅನ್ನಿಸುತ್ತದೆ. ಆದರೆ, ಒಟ್ಟಾರೆ ಈ ಯೋಜನೆಯ ಹಿಂದಿನ ವಾಸ್ತವಾಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಯಡಿಯೂರಪ್ಪ ಬೆಂಗಳೂರಿನ ಬಡಜನರಿಗೆ ಹೇಗೆ 'ನೀರು ಕುಡಿಸಲು' ಹೊರಟಿದ್ದಾರೆಂಬುದು ಅರ್ಥವಾಗುತ್ತದೆ.




ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯು ಬೆಂಗಳೂರಿನಲ್ಲಿ ಒಟ್ಟಾರೆಯಾಗಿ ಸುಮಾರು ಆರು ಲಕ್ಷ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಿದೆ. ಅವರಿಂದ ನೀರಿನ ಶುಲ್ಕವನ್ನೂ ವಸೂಲಿ ಮಾಡುತ್ತಿದೆ. ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡವರು ದುಡ್ಡು ಕೊಟ್ಟು ನೀರು ಕೊಂಡುಕೊಳ್ಳುವಷ್ಟು ಶಕ್ತರಲ್ಲವಾದ್ದರಿಂದ ತಮ್ಮ ಮನೆಗಳಿಗೆ ನೀರಿನ ಸಂಪರ್ಕ ಪಡೆದಿಲ್ಲ, ನೀರು ಪೂರೈಕೆ ಮಂಡಳಿಯು ಅಳವಡಿಸಿದ್ದ ಸಾರ್ವಜನಿಕ ನಲ್ಲಿಗಳಿಂದಲೇ ನೀರು ತರುತ್ತಿದ್ದರು. ಆದರೆ, ಬಡವರು ನೆಮ್ಮದಿಯಿಂದಿರಲು ಸರ್ಕಾರ ಎಲ್ಲಿ ಬಿಡುತ್ತೆ? ಎಲ್ಲಾ ಸಾರ್ವಜನಿಕ ನಲ್ಲಿಗಳನ್ನು ಕಿತ್ತೆಸೆದು ಬಡವರಿಗೆ ನೀರೇ ಸಿಗದಂತೆ ಮಾಡಿತು. ಅನಿವಾರ್ಯವಾಗಿ ಅವರು ತಮ್ಮ ಮನೆಗಳಿಗೆ ನೀರಿನ ಸಂಪರ್ಕ ಪಡೆದುಕೊಂಡು ನೀರಿನ ಬಳಕೆಗಾಗಿ ದುಡ್ಡು ತೆರಬೇಕಾಯಿತು. ನೀರು ಪೂರೈಕೆ ಮಂಡಳಿ ವಿಧಿಸುತ್ತಿದ್ದ ನೀರಿನ ಶುಲ್ಕ ತೀರಾ ಹೆಚ್ಚಾಗಿರುವುದರಿಂದ ಬೆಂಗಳೂರಿನ ಬಡಬಗ್ಗರಿಗೆ ದುಡ್ಡು ಕಟ್ಟುವುದಕ್ಕೆ ಸಾಧ್ಯವೇ ಆಗುತ್ತಿರಲಿಲ್ಲ, ದುಡ್ಡು ಕೊಡಲಿಲ್ಲ ಎಂದರೆ ಅದರ ಮೇಲೆ ಬಡ್ಡಿ ಹಾಕುತ್ತಿದ್ದರು. ಮೂಲ ನೀರಿನ ಶುಲ್ಕ, ಬಾಕಿಯ ಮೇಲಿನ ಬಡ್ಡಿ, ಬಡ್ಡಿಯ ಮೇಲಿನ ಚಕ್ರಬಡ್ಡಿ - ಹೀಗೆ ಬೆಳೆಯುತ್ತಲೇ ಹೋಯಿತು.

ಈಗ ಅದು ಎಲ್ಲಿಗೆ ಬಂದು ತಲುಪಿದೆಯೆಂದರೆ, ಒಬ್ಬೊಬ್ಬ ಕೊಳಚೆ ಪ್ರದೇಶ ನಿವಾಸಿಯ ಹೆಗಲ ಮೇಲೂ ಹತ್ತಾರು ಸಾವಿರ ರೂಪಾಯಿ ನೀರಿನ ಬಾಕಿ ಹೊರೆಯಿದೆ. ಎಲ್ಲಾ ಬಡ್ಡಿಯನ್ನು ರದ್ದುಗೊಳಿಸಿ ಕೇವಲ ಮೂಲ ಶುಲ್ಕವನ್ನು ಮಾತ್ರವೇ ನೀಡಿ ಎಂದರೂ ಅವರಿಂದ ಸಾಧ್ಯವಾಗುವುದಿಲ್ಲ. ಈಗ ಯಡಿಯೂರಪ್ಪ ಬಂದು 4200 ರೂಪಾಯಿವರೆಗಿನ ಬಡ್ಡಿ ಮನ್ನಾ ಮಾಡುವುದಾಗಿ ಘೋಷಿಸಿ ಬಡವರ ಉದ್ಧಾರಕನೆಂಬಂತೆ ಪೋಜು ನೀಡುತ್ತಿದ್ದಾರೆ. ಸಾರ್ವಜನಿಕ ನಲ್ಲಿಗಳನ್ನು ಕಿತ್ತೆಸೆದು ಬಡಬಗ್ಗರಿಗೆ ನೀರನ್ನು ಮಾರಿ ಅವರ ಮೇಲೆ ಸಾಲದ ಹೊರೆ ಹೊರಿಸಿದ್ದು ಇದೇ ಸರ್ಕಾರ. ಈಗ ಅದರಲ್ಲಿ ಒಂಚೂರು ಮನ್ನಾ ಮಾಡಿದ ಹಾಗೆ ಮಾಡಿ ಬಡವರೋದ್ಧಾರಕ ಎಂದು ಪೋಜು ಕೊಡುತ್ತಿರುವುದೂ ಇದೇ ಸರ್ಕಾರ.

ಇನ್ನೊಂದು ವಿಚಾರ ನೆನಪಿರಲಿ. ಮೊನ್ನೆ ಯಡಿಯೂರಪ್ಪ ಯಾವ ಯೋಜನೆಯನ್ನು ಉದ್ಘಾಟಿಸಿ ಬಡವರ ಬಡ್ಡಿ ಮನ್ನಾ ಮಾಡುತ್ತೇನೆಂದು ಘೋಷಿಸಿದರೋ ಅದೇ ಯೋಜನೆಯ ಪ್ರಕಾರ ಬೆಂಗಳೂರಿನಲ್ಲಿ ಈಗ ಅಳಿದುಳಿದಿರುವ ಎಲ್ಲಾ ಸಾರ್ವಜನಿಕ ನಲ್ಲಿಗಳನ್ನೂ ಕಿತ್ತೆಸೆಯಲಾಗುತ್ತದೆ. ಅಂದರೆ, ಪ್ರತಿಯೊಂದು ಮನೆಯೂ - ಅದು ಸ್ಲಮ್‌ನಲ್ಲಿ ವಾಸಿಸುವ ಬಡವರ ಮನೆಯಿರಲಿ, ಉತ್ತಮ ಏರಿಯಾಗಳಲ್ಲಿ ವಾಸಿಸುತ್ತಿರುವ ಶ್ರೀಮಂತರ ಮನೆಯಿರಲಿ - ನೀರು ಪೂರೈಕೆ ಮಂಡಳಿಯಿಂದ ನೀರಿನ ಸಂಪರ್ಕ ಪಡೆಯಲೇಬೇಕು. ಅದಕ್ಕಾಗಿ ಕನಿಷ್ಠ 10,000 ರೂಪಾಯಿಗಳನ್ನು ತೆರಲೇಬೇಕು! ಆಮೇಲೆ ಮಿತಿಮೀರಿದ ನೀರಿನ ಬಿಲ್ಲು, ಅದಕ್ಕೆ ಬಡ್ಡಿ ಕಟ್ಟುತ್ತಾ ಹೋಗಬೇಕು!

ಇದು ಬೆಂಗಳೂರಿನ ಬಡಜನರಿಗೆ ಯಡ್ಡಿ 'ನೀರು ಕುಡಿಸುತ್ತಿರುವ' ವಿಧಾನ. ■

ಮೂರೂ ಬಿಟ್ಟ ಪತ್ರಿಕೆ




THE TIMES OF INDIA
the BIG PICTURE

TEAM	M	W	L	N/R	PTS	NRR
Team Delhi	10	8	2	0	16	+0.362
Team Chennai	10	6	3	1	13	+1.222
Team Hyderabad	11	6	5	0	12	+0.292
Mumbai Indians	11	5	5	1	11	+0.543
Team Jaipur	11	5	5	1	11	-0.373
Royal Challengers	11	5	6	0	10	-0.364
Kings XI Punjab	11	5	6	0	10	-0.570
Knight Riders	11	1	9	1	3	-1.042

ಮೊನ್ನೆ ತಾನೆ ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ 20 ಕ್ರಿಕೆಟ್‌ನ ಎರಡನೇ ಆವೃತ್ತಿ ಮುಗಿದಿದೆ. ಟೂರ್ನಿಯಲ್ಲಿ ಒಟ್ಟು ಎಂಟು ತಂಡಗಳು ಭಾಗವಹಿಸಿದ್ದವು: ರಾಜಸ್ತಾನ್ ರಾಯಲ್ಸ್, ಕೋಲ್ಕತ್ತಾ ನೈಟ್ ರೈಡರ್ಸ್, ಡೆಕ್ಕನ್ ಚಾರ್ಜರ್ಸ್, ಚೆನ್ನೈ ಸೂಪರ್ ಕಿಂಗ್ಸ್, ಮುಂಬೈ ಇಂಡಿಯನ್ಸ್, ಡೆಲ್ಲಿ ಡೇರ್‌ಡೆವಿಲ್ಸ್, ಪಂಜಾಬ್ ಕಿಂಗ್ಸ್ ಇಲೆವನ್ ಮತ್ತು ರಾಯಲ್ ಚಾಲೆಂಜರ್ಸ್. ಇಡೀ ಟೂರ್ನಿಯುದ್ದಕ್ಕೂ ಎಲ್ಲಾ ಪತ್ರಿಕೆಗಳೂ ಪಂದ್ಯಗಳ ವರದಿಯನ್ನು ಚಾಚೂ ತಪ್ಪದೆ ಮಾಡಿದವು. ಬೇರೆ ಬೇರೆ ಎಲ್ಲಾ ಪತ್ರಿಕೆಗಳು ಬರೆದಿರುವ ವರದಿಗಳನ್ನು ಹಾಗೂ ಟೈಮ್ಸ್ ಆಫ್ ಇಂಡಿಯಾ ಬಳಗದ ಪತ್ರಿಕೆಗಳು ಬರೆದ ವರದಿಗಳನ್ನೂ ನೀವು ಸೂಕ್ಷ್ಮವಾಗಿ ಹೋಲಿಸಿ ನೋಡಿದರೆ ಒಂದು ವಿಚಾರ ಸ್ಪಷ್ಟವಾಗಿ ಕಾಣುತ್ತದೆ. ಎಲ್ಲಾ ಪತ್ರಿಕೆಗಳು ಆಯಾ ತಂಡಗಳ ಹೆಸರನ್ನು ಅದು ಹೇಗಿದೆಯೋ ಹಾಗೆಯೇ ಬಳಸಿ ಬರೆದಿದ್ದರೆ ಟೈಮ್ಸ್ ಆಫ್ ಇಂಡಿಯಾ ಬಳಗದ ಪತ್ರಿಕೆಗಳು ಕೆಲವು ಹೆಸರುಗಳನ್ನು ಆಯಾ ತಂಡ ಪ್ರತಿನಿಧಿಸುವ ರಾಜ್ಯ ಅಥವಾ ನಗರಗಳ ಹೆಸರಿನಲ್ಲಿ ಬರೆದವು. ಉದಾಹರಣೆಗೆ ರಾಜಸ್ತಾನ್ ರಾಯಲ್ಸ್ ಎಂಬ ತಂಡದ ಹೆಸರನ್ನು ಅದು ಜೈಪುರ ತಂಡ ಎಂದೂ, ಡೆಕ್ಕನ್ ಚಾರ್ಜರ್ಸ್ ತಂಡದ ಹೆಸರನ್ನು ಅದು ಹೈದರಾಬಾದ್ ತಂಡ ಎಂದು ಬರೆಯಿತು. ಅದೇಕೆ ಎಂದು ಕೆದಕುತ್ತಾ ಹೋದರೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಲಜ್ಜೆಗೇಡಿತನದ ಅನಾವರಣವಾಗುತ್ತದೆ. "ಟೂರ್ನಿಯಲ್ಲಿ ಭಾಗವಹಿಸಿದ್ದ ಎಲ್ಲಾ ತಂಡಗಳೂ ಸಾರಾಂಶದಲ್ಲಿ ಒಂದೊಂದು ಕಂಪನಿಯೇ ಆಗಿವೆ. ವರದಿಯನ್ನು ಬರೆಯುವಾಗ ಪ್ರತೀ ಬಾರಿ ತಂಡದ ಹೆಸರನ್ನು ಹೇಳಿದಾಗಲೆಲ್ಲಾ ಅದು ಆ ಕಂಪನಿಯ ಪ್ರಚಾರ ಮಾಡಿದಂತಾಗುತ್ತದೆ. ಆದ್ದರಿಂದ ಆ ತಂಡದ (ಕಂಪನಿಯ) ಒಡೆಯರು ದುಡ್ಡು ಕೊಡಬೇಕು." - ಇದು ಟೈಮ್ಸ್ ಆಫ್ ಇಂಡಿಯಾದ ಮೊಂಡುವಾದ. ಯಾರ್‍ಯಾರು ದುಡ್ಡು ಕೊಟ್ಟರೋ ಅವರ ತಂಡದ ಹೆಸರನ್ನು ಅದೇ ರೀತಿಯಲ್ಲಿ ಬರೆದರು. ಯಾರ್‍ಯಾರು ದುಡ್ಡು ಕೊಡಲಿಲ್ಲವೋ ಅವರ ತಂಡಕ್ಕೆ ಅದು ಪ್ರತಿನಿಧಿಸುವ ರಾಜ್ಯ ಅಥವ ನಗರದ ಹೆಸರನ್ನಿಟ್ಟರು.

ಇಂದು ತಂಡದ ಹೆಸರನ್ನು ಬರೆದಿದ್ದಕ್ಕಾಗಿ ದುಡ್ಡು ಕೇಳಿದ್ದಾರೆ. ನಾಳೆ, ತಮ್ಮ ಪತ್ರಿಕೆಯ ವರದಿಗಳಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮುಂತಾದ ರಾಜಕೀಯ ಪಕ್ಷಗಳ ಹೆಸರುಗಳು ಅಲ್ಲಲ್ಲಿ ಬಂದಿವೆ, ಅದೂ ಕೂಡ ಆಯಾ ಪಕ್ಷಗಳ ಪ್ರಚಾರವಾದಂತಾಗಿದೆ ಎಂದು ಅಲ್ಲೂ ದುಡ್ಡು ಕೇಳಲು ಹೋಗುತ್ತಾರೆ. ನಾಡಿದ್ದು ಯಾವುದೋ ಸಾಮಾಜಿಕ ಸಂಘಟನೆಗಳ ಹೆಸರು ಬಂದಿದೆ ಅಂತ ಅಲ್ಲೂ ದುಡ್ಡು ಕೇಳುತ್ತಾರೆ. ಇದನ್ನು 'ದುಡ್ಡಿಗಾಗಿ ಮೂರೂ ಬಿಟ್ಟ ಪತ್ರಿಕೆ' ಎನ್ನದೆ ಬೇರೆ ದಾರಿಯಿದೆಯೆ? ■

ಮಮತಾಳ ರೈಲ್ವೇ ಪಾಸು!



ಮಮತಾ ಬ್ಯಾನರ್ಜಿ ಅದೃಷ್ಟ ಖುಲಾಯಿಸಿ ಕೇಂದ್ರ ರೈಲ್ವೇ ಮಂತ್ರಿಯಾಗಿದ್ದಾಳೆ. ಪಶ್ಚಿಮ ಬಂಗಾಳದಲ್ಲಿ ತಥಾತಥಿತ ಕಮ್ಯೂನಿಸ್ಟರ ಭದ್ರ ಕೋಟೆಯನ್ನು ಛಿದ್ರ ಮಾಡಿದ ಮಮತಾಗೆ ಇಂಥ ದೊಡ್ಡ ಮತ್ತು ಮಹತ್ವಪೂರ್ಣ ಖಾತೆಯೊಂದು ಸಿಕ್ಕಿದ್ದು ಸರಿಯಾಗಿಯೇ ಇದೆ.


ರೇಲ್ವೆ ಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ ನಗರದಿಂದ ನಗರಕ್ಕೆ ಕೆಲಸಕ್ಕೆ ಹೋಗುವ ಅಸಂಘಟಿತ ಕಾರ್ಮಿಕರಿಗೆ ಅನುಕೂಲವಾಗಲೆಂದು ತಿಂಗಳಿಗೆ 20 ರೂ. ಪಾಸ್ ನೀಡುವುದಾಗಿ ಘೋಷಿಸಿದ್ದಾರೆ. ನೋಡೋದಕ್ಕೆ ಒಳ್ಳೇ ನಿರ್ಧಾರದಂತೆ ಕಾಣುವ ಈ ಘೋಷಣೆಯಲ್ಲಿ ಮಮತಾ ದೊಡ್ಡ ಮೋಸ ಮಾಡಿದ್ದಾರೆ. ಮೊದಲನೆಯದಾಗಿ, ತಿಂಗಳಿಗೆ ಐನೂರು ರೂಪಾಯಿಗಿಂತ ಕಡಿಮೆ ಆದಾಯ ಇರುವ ಅಸಂಘಟಿತ ಕಾರ್ಮಿಕರಿಗೆ ಮಾತ್ರ ಈ ಪಾಸು ಕೊಡುತ್ತಾರಂತೆ! ಎರಡನೆಯದಾಗಿ ಕೇವಲ ನೂರು ಕಿ.ಮೀ. ದೂರದ ನಿರ್ದಿಷ್ಟ ಮಾರ್ಗಕ್ಕೆ ಮಾತ್ರ ಅದು ಸೀಮಿತವಂತೆ! ತಿಂಗಳಿಗೆ ಐನೂರು ರೂಪಾಯಿ ಆದಾಯ ಎಂದರೆ ದಿನವೊಂದಕ್ಕೆ ಅವರ ಆದಾಯ ಹದಿನಾರೂವರೆ ರೂಪಾಯಿ ಆಯಿತು. ಇಷ್ಟೊಂದು ಕಡಿಮೆ ಕೂಲಿಗಾಗಿ ನಗರದಿಂದ ನಗರಕ್ಕೆ ಹೋಗುವ ಕಾರ್ಮಿಕರು ಅಸಲಿಗೆ ಇದ್ದಾರೆಯೆ? ಇದ್ದರೆ ಅವರು ಈಗಿನ ಬೆಲೆಯೇರಿಕೆಯ ದಿನಗಳಲ್ಲಿ ಬದುಕುವುದುಂಟೆ? ವಾಸ್ತವದಲ್ಲಿ ಇಷ್ಟೊಂದು ಕಡಿಮೆ ಕೂಲಿಗಾಗಿ ದುಡಿಯುವ ಜನ ಇಲ್ಲವೇ ಇಲ್ಲ. ಅಂದರೆ, ರೈಲ್ವೇ ಪಾಸು ಕೂಡ ಯಾರಿಗೂ ಸಿಗುವುದೂ ಇಲ್ಲ. ಜನರೇನು ಪಾಸು ಕೊಡಿ ಅಂತ ಮಮತಾ ಮುಂದೆ ಮುಗಿಬಿದ್ದಿರಲಿಲ್ಲ, ಮಮತಾ ತಾನೇ ಮುಗಿಬಿದ್ದು ಕೊಡುತ್ತೇನೆಂದು ಮುಂದೆ ಬಂದಿದ್ದಾಳೆ. ವಾಸ್ತವ ಏನೆಂದರೆ, ಮಮತಾ ಪಾಸ್ ಕೊಟ್ಟಂಗೆ ಮಾಡ್ತಾರೆ, ಕಾರ್ಮಿಕರು ಇಸ್ಕೊಂಡಗೇ ಆಗಿರುತ್ತೆ. ಅಸಲಿಗೆ ಅವರು ಕೊಟ್ಟಿರುವುದೂ ಇಲ್ಲ, ಜನ ಇಸ್ಕೊಂಡಿರುವುದೂ ಇಲ್ಲ. ಇದು ಮಮತಾ ತಂತ್ರ.

ಇನ್ನೊಂದು ವಿಚಾರ. ಸರ್ಕಾರವೇ ಕಾನೂನು ರೂಪಿಸಿ ಕನಿಷ್ಠ ಕೂಲಿಯನ್ನು ನಿಗದಿ ಮಾಡಿದೆ. ಅದರ ಪ್ರಕಾರವೇ ತಿಂಗಳಿಗೆ ಕನಿಷ್ಠ ಎಂದರೂ ಒಂದೂವರೆ ಸಾವಿರಕ್ಕಿಂತ ಅಧಿಕ ಆದಾಯ ಬರುತ್ತದೆ. ಅದಕ್ಕಿಂತ ಕಡಿಮೆ ಕೂಲಿ ಕೊಟ್ಟರೆ ಅದು ಅಪರಾಧವಾಗುತ್ತದೆ; ಆತ ಜೈಲಿಗೆ ಹೋಗಬೇಕಾಗುತ್ತದೆ. ಹೀಗಿದ್ದ ಮೇಲೆ ಯಾವ ಮಾಲಿಕ ತಾನು ತಿಂಗಳಿಗೆ ಐನೂರು ರೂಪಾಯಿ ಕೂಲಿ ಕೊಡುತ್ತಿದ್ದೇನೆಂದು ಸರ್ಟಿಫಿಕೇಟ್ ಕೊಡುತ್ತಾನೆ? ಸರ್ಟಿಫಿಕೇಟ್ ಇಲ್ಲ ಎಂದರೆ ಮಮತಾಳ ಪಾಸೂ ಇಲ್ಲ! ■



ವಿಶ್ವದ ದೊಡ್ಡಣ್ಣರು

ಮೊನ್ನೆ ಮೇ 25ರಂದು ಉತ್ತರ ಕೊರಿಯ ಪರಮಾಣು ಬಾಂಬ್‌ಗಳನ್ನು ಎರಡನೇ ಬಾರಿಗೆ ಯಶಸ್ವಿಯಾಗಿ ಪರೀಕ್ಷಿಸಿದೆ. ಈ ಹಿಂದೆ 2006ರ ಅಕ್ಟೋಬರ್‌ನಲ್ಲಿ ಒಮ್ಮೆ ಪರೀಕ್ಷಿಸಿತ್ತು. ಆದರೆ, ಈ ಬಾರಿ ಸಿದ್ಧಪಡಿಸಿ ಪರೀಕ್ಷಿಸಿರುವ ಅಣುಬಾಂಬ್‌ಗಳು 2006ರಲ್ಲಿ ಪರೀಕ್ಷಿಸಿದ್ದ ಬಾಂಬ್‌ಗಳಿಗಿಂತ ಶಕ್ತಿಶಾಲಿಯಾಗಿವೆ ಎಂದು ಉತ್ತರ ಕೊರಿಯ ಸರ್ಕಾರವೇ ಹೇಳಿಕೊಂಡಿದೆ. ಎರಡನೇ ವಿಶ್ವ ಮಹಾಯುದ್ಧದಲ್ಲಿ ಅಮೆರಿಕ ಜಪಾನ್‌ನ ಹಿರೋಶಿಮಾ ಮತ್ತು ನಾಗಸಾಕಿಗಳಲ್ಲಿ ಹಾಕಿದ ಅಣುಬಾಂಬ್‌ಗಿಂತ ಕೊರಿಯ ಈಗ ಸಿದ್ಧಪಡಿಸಿರುವ ಬಾಂಬ್‌ಗಳು ವಿನಾಶಕಾರಿಯಾಗಿವೆ ಎಂಬುದು ಕೆಲವು ತಜ್ಞರ ಅಭಿಪ್ರಾಯ.



ಅತ್ತ ಉತ್ತರ ಕೊರಿಯದ ಭೂಗರ್ಭದಲ್ಲಿ ಅಣುಬಾಂಬ್‌ಗಳನ್ನು ಪರೀಕ್ಷಿಸುತ್ತಿದ್ದಂತೆಯೇ ಇತ್ತ ಅಮೆರಿಕ, ಅಮೆರಿಕ ನೇತೃತ್ವದ ನ್ಯಾಟೋ ಮತ್ತು ವಿಶ್ವಸಂಸ್ಥೆಗಳು ಅದನ್ನು ಬಲವಾಗಿ ಖಂಡಿಸಿವೆ. ಮಾತ್ರವಲ್ಲ ಅವೆಲ್ಲ ಒಟ್ಟುಗೂಡಿ ಉತ್ತರ ಕೊರಿಯಾದ ಮೇಲೆ ಅನೇಕ ಆರ್ಥಿಕ ನಿರ್ಬಂಧಗಳನ್ನು ಹೇರಿ ಆ ದೇಶಕ್ಕೆ ಮೂಲಭೂತ ಸರಕುಗಳನ್ನು ರಫ್ತು ಮಾಡದಂತೆ, ಆದರೊಂದಿಗೆ ವ್ಯಾಪಾರ ವ್ಯವಹಾರ ಮಾಡದಂತೆ ಇನ್ನಿತರ ದೇಶಗಳನ್ನು ಒತ್ತಾಯಿಸುತ್ತಿವೆ. 2006ರಲ್ಲಿ ಕೊರಿಯ ಅಣ್ವಸ್ತ್ರ ಪರೀಕ್ಷೆ ನಡೆಸಿದಾಗಲೂ ಇದೇ ರೀತಿಯ ನಿರ್ಬಂಧಗಳನ್ನು ಹೇರಲಾಗಿತ್ತು. ಆದರೆ, ಇಂಥ ಬೆದರಿಕೆಗೆ ಜಗ್ಗದೇ ಕೊರಿಯ ಮತ್ತೆ ಅಣ್ವಸ್ತ್ರಗಳನ್ನು ಪರೀಕ್ಷಿಸಿದೆ ಮಾತ್ರವಲ್ಲ, ಅಣ್ವಸ್ತ್ರಗಳನ್ನು ಹೊತ್ತೊಯ್ಯಬಲ್ಲ ಹಲವಾರು ಕ್ಷಿಪಣಿಗಳನ್ನೂ ಪರೀಕ್ಷಾರ್ಥವಾಗಿ ಉಡಾಯಿಸಿದೆ.


ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಅವರು 'ಅಣ್ವಸ್ತ್ರ ಮುಕ್ತ ವಿಶ್ವ' ನಿರ್ಮಾಣಕ್ಕಾಗಿ ಬಹಳಷ್ಟು ಆಸಕ್ತಿ ತೋರುತ್ತಿದ್ದಾರೆ. ಏಪ್ರಿಲ್ ಮೊದಲ ವಾರದಲ್ಲಿ ಅವರು ಜೆಕ್ ಗಣರಾಜ್ಯದಲ್ಲಿ ಮಾತನಾಡುತ್ತಾ ಅಣ್ವಸ್ತ್ರಗಳಿರದ ಪ್ರಪಂಚವನ್ನು ನಿರ್ಮಾಣ ಮಾಡುವುದಕ್ಕಾಗಿ ಒಂದು ರೋಡ್ ಮ್ಯಾಪ್ ಅನ್ನು ಜಗತ್ತಿನ ಮುಂದಿಟ್ಟಿದ್ದರು. ದ್ವಿತೀಯ ಮಹಾಯುದ್ಧದ ಅಂತ್ಯದ ವೇಳೆಗೆ ಜಪಾನ್‌ನ ಹಿರೋಶಿಮಾ ಮತ್ತು ನಾಗಸಾಕಿಗಳ ಮೇಲೆ ಮೊಟ್ಟ ಮೊದಲ ಬಾರಿಗೆ ಅಣುಬಾಂಬ್ ಸ್ಫೋಟಿಸಿ ಸಾವಿರಾರು ಜನರನ್ನು ಕ್ಷಣಾರ್ಧದಲ್ಲಿ ಭಸ್ಮ ಮಾಡುವ ಮೂಲಕ ಭೂಮಿಯ ಮೇಲೆ ನರಕ ಸೃಷ್ಟಿಸುವ ಅಣುಬಾಂಬ್ ಪರಂಪರೆಗೆ ನಾಂದಿ ಹಾಡಿದ್ದು ಇದೇ ಅಮೆರಿಕ. ಅಂದು ಮಾಡಿದ ತಪ್ಪನ್ನು ಈಗ ಅರ್ಧಶತಮಾನದ ನಂತರ ತಿದ್ದಿಕೊಳ್ಳುವುದಕ್ಕೆ ಅದೇ ದೇಶ ಮುಂದಾಗುತ್ತಿರುವುದು ಒಳ್ಳೆಯ ಬೆಳವಣಿಗೆಯೆ. ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣವಾಗಬೇಕು ಎಂಬುದು ವಿಶ್ವದ ಪ್ರತಿಯೊಬ್ಬರ ಆಶಯ. ಅಣ್ವಸ್ತ್ರಗಳು ಕ್ಷಣಾರ್ಧದಲ್ಲಿ ಲಕ್ಷಾಂತರ ಜನರನ್ನು ಸುಟ್ಟು ಬೂದಿ ಮಾಡಬಲ್ಲ ಅಪಾಯಕಾರಿ ಅಸ್ತ್ರಗಳಾಗಿರುವುದರಿಂದ ಹಾಗೂ ಅವುಗಳನ್ನು ಪ್ರಯೋಗಿಸಿದ ಹತ್ತಾರು ವರ್ಷಗಳ ನಂತರವೂ ಯುರೇನಿಯಂ ಮತ್ತು ಥೋರಿಯಂ ಹೊರ ಸೂಸುವ ವಿಕಿರಣಗಳು ಹಲವಾರು ಪೀಳಿಗೆಗಳನ್ನು ಬಾಧಿಸುತ್ತಲೇ ಇರುತ್ತವೆ. ಈಗ ಈ ಅಣ್ವಸ್ತ್ರಗಳು ಯಾವುದೋ ಒಂದು ದೇಶದ ಬಳಿ ಮಾತ್ರ ಇವೆ ಎಂದೇನೂ ಇಲ್ಲ. ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ರಷ್ಯಾ, ಚೀನಾ, ಭಾರತ, ಪಾಕಿಸ್ತಾನ ದೇಶಗಳು ಬಹಿರಂಗವಾಗಿ ಅಣ್ವಸ್ತ್ರಗಳನ್ನು ಅಭಿವೃದ್ಧಿಪಡಿಸಿದ್ದರೆ ಇಸ್ರೇಲ್, ಇರಾನ್, ಸಿರಿಯಾಗಳಂಥ ಇನ್ನಿತರ ದೇಶಗಳು ಅವುಗಳನ್ನು ರಹಸ್ಯವಾಗಿ ಅಭಿವೃದ್ಧಿಪಡಿಸಿವೆ. ಒಂದು ದೇಶ ಏನಾದರೂ ಅಣ್ವಸ್ತ್ರ ಪ್ರಯೋಗ ಪ್ರಾರಂಭಿಸಿದರೆ ಉಳಿದ ದೇಶಗಳೇನೂ ಸುಮ್ಮನೇ ಕುಳಿತುಕೊಳ್ಳುವುದಿಲ್ಲ, ವಿಶ್ವದ ಹತ್ತಾರು ದೇಶಗಳಲ್ಲಿ ಈ ಅಪಾಯಕಾರಿ ಅಸ್ತ್ರಗಳು ಸ್ಫೋಟಗೊಂಡು ಇಡೀ ಭೂಮಂಡಲವೇ ಸುಟ್ಟು ಭಸ್ಮವಾಗುತ್ತದೆ. ಅಣ್ವಸ್ತ್ರಗಳು ಕೇವಲ ಒಂದು ದೇಶಕ್ಕೆ ಮಾತ್ರವಲ್ಲ ಭೂಮಿಯ ಮೇಲಿನ ಇಡೀ ಮನುಕುಲಕ್ಕೆ ಅಪಾಯಕಾರಿ ಎಂಬುದರಲ್ಲಿ ಪ್ರಾಯಶಃ ಯಾರಿಗೂ ಅನುಮಾನವಿಲ್ಲ. ಈ ಹಿನ್ನೆಲೆಯಲ್ಲಿ ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣವಾಗುವುದು ಇಂದಿನ ಅಗತ್ಯ ಮಾತ್ರವಲ್ಲ ಮನುಕುಲದ ಅಸ್ತಿತ್ವ ಮುಂದುವರೆಯಬೇಕಾದರೆ ಅದು ಅನಿವಾರ್ಯ ಕೂಡ.

ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣದ ದಾರಿಯಲ್ಲಿ ಮೊದಲ ಹೆಜ್ಜೆಯಾಗಿ ಅಣ್ವಸ್ತ್ರಗಳು, ಅಣ್ವಸ್ತ್ರ ತಯಾರಿಸುವ ತಂತ್ರಜ್ಞಾನ ಬೇರೆ ದೇಶಗಳಿಗೂ ವಿಸ್ತರಿಸದಂತೆ ತಡೆಯುವ 1968ರ Nuclear Nonproliferation Treaty (ಅಣ್ವಸ್ತ್ರ ಪ್ರಸರಣ ವಿರೋಧಿ ಒಪ್ಪಂದ) ಎಂಬ ಒಪ್ಪಂದಕ್ಕೆ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ರಷ್ಯಾ, ಚೀನಾಗಳು ಸಹಿ ಹಾಕಿವೆ. ಈ ಐದು ದೇಶಗಳು ಸೇರಿಕೊಂಡು ಬೇರೆ ದೇಶಗಳು ಅಣ್ವಸ್ತ್ರ ತಯಾರಿಸದಂತೆ ತಡೆಯುವುದಕ್ಕಾಗಿ ಪ್ರಯತ್ನಿಸುತ್ತಿವೆ. ತಮ್ಮನ್ನು ಬಿಟ್ಟು ಬೇರೆ ಯಾವ ದೇಶವಾದರೂ ಅಣ್ವಸ್ತ್ರ ತಯಾರಿಸಿದರೆ ಅದರ ಮೇಲೆ ನಿರ್ಬಂಧಗಳನ್ನು ಹೇರುತ್ತಿವೆ. ಈ ಹಿಂದೆ ಭಾರತ ಪೋಖ್ರಾನ್‌ನಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿದಾಗಲೂ ಅಮೆರಿಕ ನಿರ್ಬಂಧಗಳನ್ನು ಹೇರಿತ್ತು. ಈಗ ಕೊರಿಯಾದ ಮೇಲೆ ಹೇರಿದೆ.



ನಿಜ ಹೇಳಬೇಕೆಂದರೆ, ವಿಶ್ವದಲ್ಲಿ ಅತೀ ಹೆಚ್ಚು ಅಣ್ವಸ್ತ್ರಗಳಿರುವುದು ಅಮೆರಿಕ ಮತ್ತು ರಷ್ಯಾದ ಬಳಿಯೆ. ಅಮೆರಿಕದಲ್ಲಿ ಏನಿಲ್ಲವೆಂದರೂ 10,000 ನ್ಯೂಕ್ಲಿಯರ್ ವಾರ್‌ಹೆಡ್‌ಗಳಿವೆ ಎಂದು ನಂಬಲಾಗಿದೆ. ರಷ್ಯಾದ ಬಳಿ 16,000 ಇವೆ. ಉಳಿದಂತೆ ಫ್ರಾನ್ಸ್ ಬಳಿ 350, ಇಂಗ್ಲೆಂಡ್, ಇಸ್ರೇಲ್ ಮತ್ತು ಚೀನಾ ಬಳಿ ತಲಾ 200 ವಾರ್‌ಹೆಡ್‌ಗಳಿವೆ. ಹೀಗೆ ಪ್ರಪಂಚದಲ್ಲಿ ಒಟ್ಟು ಸುಮಾರು 27,000 ನ್ಯೂಕ್ಲಿಯರ್ ವಾರ್‌ಹೆಡ್‌ಗಳಿವೆ. ಅವುಗಳಲ್ಲಿ ಕಾಲು ಭಾಗ ಸಿಡಿದರೂ ಸಾಕು ಇಡೀ ಭೂಮಂಡಲ ಸುಟ್ಟು ಭಸ್ಮವಾಗಿ ಹೋಗುತ್ತದೆ.

ಅಮೆರಿಕ, ರಷ್ಯಾ ಫ್ರಾನ್ಸ್, ಇಂಗ್ಲೆಂಡ್, ಚೀನಾಗಳಿಗೆ ನಿಜಕ್ಕೂ ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣ ಮಾಡುವುದಕ್ಕೆ ಇಷ್ಟವಿದ್ದರೆ ಮೊದಲು ತಮ್ಮಲ್ಲಿರುವ ಅಣ್ವಸ್ತ್ರಗಳನ್ನು ನಾಶಪಡಿಸಲಿ. ಆಮೇಲೆ ಬೇರೆಯವರಿಗೆ ಹೇಳುವುದಕ್ಕೆ ನೈತಿಕ ಅಧಿಕಾರವಾದರೂ ಇರುತ್ತದೆ. ತಮ್ಮಲ್ಲೇ ಇಷ್ಟೊಂದು ದೊಡ್ಡ ಪ್ರಮಾಣದ ಅಣ್ವಸ್ತ್ರಗಳನ್ನಿಟ್ಟುಕೊಂಡು ಬೇರೆಯವರಿಗೆ ಇಟ್ಟುಕೊಳ್ಳಬೇಡಿ, ತಯಾರಿಸಬೇಡಿ ಅಂತ ಉಪದೇಶ ಮಾಡಿದರೆ ಯಾರು ಕೇಳುತ್ತಾರೆ? ■



ವಿನಯ್ ಆಳ್ವಾ


ವಿನಯ್ ಆಳ್ವಾ ಕೊಲೆ ಬಿಜೆಪಿ ನಾಯಕರ ಕೈವಾಡ!


ಬೆಂಗಳೂರಿನ ಜಯನಗರ-ಜೆಪಿನಗರ ಏರಿಯಾದ ಪರಿಚಿತ ಯುವಕ ವಿನಯ್ ಆಳ್ವಾನ ಹತ್ಯೆಯಾಗಿದೆ. ಈ ಕೊಲೆಗೆ ರೌಡಿಗಳ ಗ್ಯಾಂಗ್‌ವಾರ್ ಕಾರಣ. ಜೊತೆಗೆ ರಿಯಲ್ ಎಸ್ಟೇಟ್, ಶೇರು ವ್ಯವಹಾರಗಳೆಲ್ಲಾ ಲಿಂಕ್ ಆಗಿವೆ ಎಂದು ಬಿಂಬಿಸಲಾಗುತ್ತಿದೆ. ತನಿಖೆ ಶುರು ಮಾಡಿರುವ ಜೆ.ಪಿ. ನಗರ ಪೊಲೀಸರಿಗೆ ಖಚಿತವಾಗಿ ಗೊತ್ತಿರುವ ಆದರೆ ಗೊತ್ತಿರದಂತೆ ನಾಟಕವಾಡುತ್ತಿರುವ ಇನ್ನೊಂದು ಲಿಂಕೂ ಈ ಮರ್ಡರ್‌ಗಿದೆ. ಅದು

ಕಾರ್ಪೊರೇಷನ್ ಎಲೆಕ್ಷನ್!

-ಮುಂದಿನ ಅಕ್ಟೋಬರ್‌ನಲ್ಲಿ ನಡೆಯಲಿರುವ ಮಹಾನಗರ ಪಾಲಿಕೆ ಚುನಾವಣೆಗೆ ಬೆಂಗಳೂರಿನ ಫುಲ್‌ಟೈಂ ಪುಢಾರಿಗಳು, ಪಾರ್ಟ್‌ಟೈಂ ರೌಡಿಗಳು ಯಾವ ರೀತಿ ತೋಳೇರಿಸಿಕೊಂಡು ರೆಡಿಯಾಗುತ್ತಿದ್ದಾರೆಂದರೆ ಇಲ್ಲಿ ಹೆಣಕ್ಕೊಂದು ಹೆಣ ಬೀಳುತ್ತಿದೆ.


ಕವಳ


ಪರಂಧಾಮ


ರಾಮಮೂರ್ತಿ

ಕಳೆದ ತಿಂಗಳು ಲಾಲ್‌ಬಾಗ್‌ನೊಳಗೆ ನಡುಹಗಲೇ ಇಟ್ಟಮಡು ಬಾಬುನ ಕೊಲೆಯಾಯಿತು. ಈಗ ವಿನಯ್ ಆಳ್ವಾನನ್ನು ಅಟ್ಟಿಸಿ ಬಿಸಾಕಲಾಗಿದೆ.

ಇವೆರಡೂ ಹತ್ಯೆಗಳ ಹಿಂದೆ ರಾಜಕೀಯವಿದೆ. ಅದರಲ್ಲೂ ಕೆಲವು ಬಿಜೆಪಿ ನಾಯಕರು ಪ್ರಚೋದನೆಯೂ ಇದ್ದಿರಬಹುದು ಎಂದು ಏರಿಯಾಗಳ ಜನರೇ ಅನುಮಾನಪಡುತ್ತಾರೆ. ಜೊತೆಗೆ ಇನ್ನೊಂದು ಅನುಮಾನ ಏನೆಂದರೆ ವಿನಯ್ ಆಳ್ವಾನ ಹತ್ಯೆ ನಡೆಸಿರುವುದು ಕವಳ ಅಲಿಯಾಸ್ ವಿಜಯ್ ಕುಮಾರ್ ಇರಬಹುದು!

ಈಗ ಹರಡಿರುವ ರೂಮರ್ ಪ್ರಕಾರ ಶನಿವಾರ ಸಂಜೆ ಡಾಲ್ಮಿಯ ಸರ್ಕಲ್‌ನಲ್ಲಿ ವಿನಯ್ ಹತ್ಯೆ ನಡೆದಾಗ ಕವಳನ ಗ್ಯಾಂಗಿನ ನಂಜುಂಡ, ರಾಕಿ, ಕುಳ್ಳ ಮೋಹನ, ಬಾಲ ಮತ್ತು ಇನ್ನೊಂದಿಷ್ಟು ಬಾಡಿಗೆ ಹತ್ಯಾಕಾರಿಗಳಿದ್ದರು.

ಈ ವಿನಯ್ ಕೊಲೆಗೆ ರೌಡಿ ಕವಳ ಹಾಗೂ ಇನ್ನೊಬ್ಬ ರೌಡಿ ಕುಟ್ಟಿರಾಜ ಎಂಬುವರ ನಡುವಿನ ಗ್ಯಾಂಗ್‌ವಾರ್ ಒಂದು ಕಾರಣವಾಗಿದೆ. ಅಲ್ಲದೆ ಮುಂದಿನ ಕಾರ್ಪೊರೇಷನ್ ಎಲೆಕ್ಷನ್‌ನಲ್ಲಿ ಬಿಜೆಪಿಯಿಂದ ನಿಂತು ಗೆಲ್ಲಬೇಕೆಂದು ಹೊರಟಿರುವ ಕೆಲ ಘಾತುಕ ಎಲಿಮೆಂಟುಗಳ ನೆರಳೂ ಗೋಚರವಾಗುತ್ತಿದೆ. ಬಿಜೆಪಿಯ ಮಾಜಿ ಕಾರ್ಪೊರೇಟರ್ ರಾಮಮೂರ್ತಿಗೆ ಪ್ರತಿಸ್ಪರ್ಧಿಯಾಗಲಿರುವ ಕಾಂಗ್ರೆಸ್‌ನ ಚಂದ್ರಶೇಖರ ರಾಜು ಜೊತೆ ಈ ಆಳ್ವಾನ ದೋಸ್ತಿ ಇತ್ತು, ತಿಲಕ್‌ನಗರ, ಕಾರ್ಪೊರೇಷನ್ ಕಾಲೋನಿ, ಜಯನಗರ 9 ನೇ ಬ್ಲಾಕ್‌ನ ಸ್ಲಂ ಏರಿಯಾದ ನೂರಾರು ಹುಡುಗರಿಗೆ ವಿನಯ್ ಆಳ್ವಾನೇ ನಾಯಕನಂತಿದ್ದ. ಇವರ ಗುಂಪಿನ ಬೆಂಬಲ ಸಿಕ್ಕವರು ಮಾತ್ರವೇ ಮುಂದಿನ ಪಾಲಿಕೆ ಎಲೆಕ್ಷನ್‌ನಲ್ಲಿ ಗೆಲ್ಲುತ್ತಾರೆಂಬ ಹವಾ ಕೂಡ ನಿರ್ಮಾಣಗೊಂಡಿತ್ತು. ಅಂಥ ಸಂದರ್ಭದಲ್ಲೇ ಆಳ್ವಾ ಕೊಲೆಯಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಕವಳನೇಕೆ ಕುದಿಯುತ್ತಿದ್ದ

ವಿನಯ್ ಆಳ್ವಾ ಮೇಲೆ ಸಿದ್ಧಾಪುರ, ತಿಲಕ್‌ನಗರ, ಜೆಪಿನಗರ ಪೊಲೀಸ್ ಸ್ಟೇಷನ್ನುಗಳಲ್ಲಿ ಹಲವು ಕೇಸುಗಳಿದ್ದವಾದರೂ ಅವನು ಫುಲ್‌ಟೈಂ ರೌಡಿಯಾಗಿರಲಿಲ್ಲ, ಬಾಡಿ ಬಿಲ್ಡಿಂಗ್, ರಿಯಲ್ ಎಸ್ಟೇಟ್ ಬುಸಿನೆಸ್, ಸ್ವಿಮ್ಮಿಂಗ್ ಚಾಂಪಿಯನ್ ಒಬ್ಬಾಕೆಯೊಂದಿಗೆ ಲವ್ವು ಬಿಟ್ಟರೆ ಅವನಿಗೆ ದೊಡ್ಡ ಮಟ್ಟದ ಅಂಡರ್‌ವರ್ಲ್ಡ್ ವ್ಯವಹಾರಗಳಿರಲಿಲ್ಲ. ಆದರೆ ಕೆಲ ಮಾಫಿಯಾ ಎಲಿಮೆಂಟುಗಳೊಂದಿಗೆ ಅವನಿಗೆ ಒಡನಾಟವಿತ್ತು.

ಕುಟ್ಟಿರಾಜ ಅಂತವರಲ್ಲೊಬ್ಬ!


ಇವನು ಕವಳನ ಎನಿಮಿ.

ಇವರಿಬ್ಬರೂ ಒಬ್ಬರನ್ನೊಬ್ಬರು ಮುಗಿಸಲು ಸ್ಕೆಚ್ ಹಾಕುತ್ತಲೇ ಇರುತ್ತಾರೆ. ಹಿಂದೊಮ್ಮೆ 2008ರ ಜೂನ್‌ನಲ್ಲಿ ಎಚ್‌ಎಸ್‌ಆರ್ ಲೇಔಟಿನಲ್ಲಿರುವ ಕವಳನ ಮನೆ ಮೇಲೆ ಕುಟ್ಟಿರಾಜ ತನ್ನ ಗ್ಯಾಂಗಿನೊಂದಿಗೆ ರೈಡು ಮಾಡಿದ್ದ. ಆದರೆ ಕವಳ ಏಟು ತಿನ್ನದೆ ತಪ್ಪಿಸಿಕೊಂಡನಾದರೂ ಅವನ ತಮ್ಮನಿಗೆ ಒದೆ ಬಿತ್ತು. ಅವತ್ತು ರೇಡ್ ಮುಗಿಸಿ ವಾಪಸ್ ಬರುವಾಗ ಕುಟ್ಟಿ ಗ್ಯಾಂಗು ತಾಜ್ ಹೋಟೆಲಿಗೆ ಊಟಕ್ಕೆಂದು ಬಂತು. ಅವತ್ತು ಅಚಾನಕ್ಕಾಗಿ ವಿನೋದ್ ಆಳ್ವಾನೂ, ಅವರ ಜೊತೆಗೆ ಊಟಕ್ಕೆ ಬಂದು ಕೂತ. ಇದು ಕುಟ್ಟಿ ಗ್ಯಾಂಗ್‌ನವರನ್ನು ಫಾಲೋ ಮಾಡಿಕೊಂಡು ಬಂದಿದ್ದ ಕವಳನ ಹುಡುಗನೊಬ್ಬನ ಕಣ್ಣಿಗೂ ಬಿತ್ತು, ಕವಳ ಅವತ್ತಿನಿಂದಲೇ ಆಳ್ವಾ ಮೇಲೆ ಒಂದು ಕಣ್ಣಿಟ್ಟ. ಆಳ್ವಾ ಹಿಂದೆ ಹುಡುಗರನ್ನು ಬಿಟ್ಟ. ವಿನಯ್ ಆಳ್ವಾ ಇದನ್ನು ಗಮನಿಸಿದರೂ 'ನಾನೇನೂ ತಪ್ಪು ಮಾಡಿಲ್ಲವಲ್ಲ' ಅಂತಂದುಕೊಂಡು ನಿರ್ಲಕ್ಷಿಸಿಬಿಟ್ಟ. ಈ ಮಧ್ಯೆ ಪೊಲೀಸರು ಕುಟ್ಟಿರಾಜನನ್ನು ಗೂಂಡಾ ಆಕ್ಟ್‌ನಲ್ಲಿ ಅರೆಸ್ಟ್ ಮಾಡಿ ಜೈಲಿಗೆ ಕಳಿಸಿದರು. ಅದಕ್ಕೂ ಮೊದಲು 2007 ರಲ್ಲೇ ಕುಟ್ಟಿಯನ್ನು ಎನ್‌ಕೌಂಟರ್ ಮಾಡುವಂತೆ ಅವತ್ತಿನ ಜಾಯಿಂಟ್ ಕಮಿಷನರ್ ಬಿಪಿನ್ ಗೋಪಾಲಕೃಷ್ಣ ಬಿ.ಕೆ.

ಈ ವಿನಯ್ ಕೊಲೆಗೆ ರೌಡಿ ಕವಳ ಹಾಗೂ ಇನ್ನೊಬ್ಬ ರೌಡಿ ಕುಟ್ಟಿರಾಜ ಎಂಬುವರ ನಡುವಿನ ಗ್ಯಾಂಗ್‌ವಾರ್ ಒಂದು ಕಾರಣವಾಗಿದೆ. ಅಲ್ಲದೆ ಮುಂದಿನ ಕಾರ್ಪೊರೇಷನ್ ಎಲೆಕ್ಷನ್‌ನಲ್ಲಿ ಬಿಜೆಪಿಯಿಂದ ನಿಂತು ಗೆಲ್ಲಬೇಕೆಂದು ಹೊರಟಿರುವ ಕೆಲ ಘಾತುಕ ಎಲಿಮೆಂಟುಗಳ ನೆರಳೂ ಗೋಚರವಾಗುತ್ತಿದೆ. ತಿಲಕ್‌ನಗರ, ಕಾರ್ಪೊರೇಷನ್ ಕಾಲೋನಿ, ಜಯನಗರ 9 ನೇ ಬ್ಲಾಕ್‌ನ ಸ್ಲಂ ಏರಿಯಾದ ನೂರಾರು ಹುಡುಗರಿಗೆ ವಿನಯ್ ಆಳ್ವಾನೇ ನಾಯಕನಂತಿದ್ದ. ಇವರ ಗುಂಪಿನ ಬೆಂಬಲ ಸಿಕ್ಕವರು ಮಾತ್ರವೇ ಮುಂದಿನ ಪಾಲಿಕೆ ಎಲೆಕ್ಷನ್‌ನಲ್ಲಿ ಗೆಲ್ಲುತ್ತಾರೆಂಬ ಹವಾ ಕೂಡ ನಿರ್ಮಾಣಗೊಂಡಿತ್ತು. ಅಂಥ ಸಂದರ್ಭದಲ್ಲೇ ಆಳ್ವಾ ಕೊಲೆಯಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಶಿವರಾಂ ಟೀಂಗೆ ಆರ್ಡರ್ ಮಾಡಿಬಿಟ್ಟಿದ್ದರು.

ಆದರೆ ಇದನ್ನು ತಪ್ಪಿಸಿದವನು ಇದೇ ವಿನಯ್ ಆಳ್ವಾ.


ಕಟ್ಟಾ

ಬಿಪಿನರ ಜೊತೆಗೆ ಅದು ಹೇಗೋ ವಿಶ್ವಾಸ ಬೆಳೆಸಿಕೊಂಡಿದ್ದ ಆಳ್ವಾಗೆ ಜಯನಗರದ ಚೆಲ್ಲಾ ಕುಟ್ಟಿ ಗಂಟು ಬಿದ್ದು ಕುಟ್ಟಿರಾಜನ ಎನ್‌ಕೌಂಟರ್ ತಪ್ಪಿಸುವಂತೆ ಕೇಳಿಕೊಂಡಿದ್ದ. ಆಮೇಲೆ ಅದು ಏನೇನಾಯಿತೋ ಏನೋ ಕೊನೆಗೆ ಕುಟ್ಟಿ ಪೊಲೀಸರಿಗೆ ಸರೆಂಡರ್ ಆಗಿ ಸೇಫಾಗಿ ಜೈಲು ಸೇರಿಕೊಂಡ. ಆಮೇಲೆ ಜಾಮೀನು ತಗೊಂಡು ಆಚೆಗೂ ಬಂದ. ಕುಟ್ಟಿ ಜೈಲಿನಲ್ಲಿದ್ದಾಗ ವಿನಯ್ ಆಳ್ವಾ ಆಗಾಗ ಎಂಟ್ರಿ ಹಾಕುತ್ತಿದ್ದುದು, ಕವಳನಿಗೂ ಗೊತ್ತಾಗಿತ್ತು. ಆಮೇಲೆ ಕುಟ್ಟಿ ಯಾವಾಗ ಕವಳನ ಮನೆಗೆ ಲಾಂಗ್ ಹಿಡಿದು ನುಗ್ಗಿದನೋ ಆ ನಂತರ ಆಳ್ವಾ ಜೊತೆ ಕಾಣಿಸಿಕೊಂಡನೋ ಅವತ್ತೇ ಕವಳ ಆಳ್ವಾಗೂ ಸ್ಕೆಚ್ ಹಾಕತೊಡಗಿದ. ಕುಟ್ಟಿ ರಾಜ ಆಳ್ವಾ ಮೂಲಕ ಪೊಲೀಸರನ್ನೂ ಸರಿಮಾಡಿಕೊಂಡನೆಂಬ ಇನ್ನೊಂದು ಎಪಿಸೋಡು ಇತ್ತಲ್ಲ.

ಇದೆಲ್ಲ ಸೇರಿ ಆಳ್ವಾ ತಲೆ ಮೇಲೆ ಸಾವಿನ ನೆರಳು ಆಡಲು ಶುರುವಾಗಿತ್ತು, ಆದರೆ ಮುಂದೆಂದೋ ಬರಬೇಕಿದ್ದ ಸಾವು ಈಗಲೇ ಯಾಕೆ ಬಂತು ಅಂದರೆ ನಗರ ಪಾಲಿಕೆ ಎಲೆಕ್ಷನ್ ಕಾರಣಕ್ಕೆ ಅನ್ನಬೇಕು.

ಬಿಜೆಪಿಯ ಆಳ್ವಾ ಕಾಂಗ್ರೆಸ್ ಸೇರಿದ್ದ

ಮೊದಲಿನಿಂದಲೂ ಬಿಜೆಪಿ ಕಾರ್ಯಕರ್ತನಾಗಿದ್ದ ಆಳ್ವಾ ಆಮೇಲೆ ಕಾಂಗ್ರೆಸ್ ಸೇರಿದ್ದ, ಬಿಜೆಪಿಯ ಬಿ. ಸೋಮಶೇಖರ್ ಜೊತೇಲಿ 9 ವರ್ಷ ಓಡಾಡಿಕೊಂಡಿದ್ದ ಆಳ್ವಾ ಕಳೆದ ವರ್ಷ ಜೆಡಿ ನಾರಾಯಣಸ್ವಾಮಿ ಜೊತೆ ಇದ್ದ, ಆಳ್ವಾ ಪ್ರಭಾವ ತಿಲಕನಗರದ ಸುತ್ತಮುತ್ತ ಎಷ್ಟಿತ್ತೆಂದರೆ ಜಯನಗರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿಗೆ ಇಲ್ಲಿ ಪ್ರಚಾರಕ್ಕೂ ಹುಡುಗರಿರಲಿಲ್ಲ,

ಪೋಲಿಂಗ್ ಏಜೆಂಟರೂ ಸಿಕ್ಕಿರಲಿಲ್ಲ, ಇದ್ದಬದ್ದ ಹುಡುಗರೆಲ್ಲ ಆಳ್ವಾ ಹಿಂದೆ ಕಾಂಗ್ರೆಸ್‌ನತ್ತ ಹೋಗಿ ಬಿಟ್ಟಿದ್ದರು. ಮೊನ್ನೆ ಕಾಂಗ್ರೆಸ್‌ನ ಕೃಷ್ಣಭೈರೇಗೌಡರಿಗೆ ಜಯನಗರದಲ್ಲಿ ಎಂಟು ಸಾವಿರ ಓಟಿನ ಲೀಡ್ ಸಿಕ್ಕಿದ್ದೂ ಆಳ್ವಾ ಟೀಮಿನ ಕೆಲಸದಿಂದಲೇ. ಜಯನಗರದಲ್ಲಿ ಬಿಜೆಪಿ ಕೋಟೆ ಹೀಗೆ ದುರ್ಬಲವಾಗಿದೆ. ಇದು ಕಾರ್ಪೊರೇಷನ್ ಎಲೆಕ್ಷನ್‌ನ ಬಿಜೆಪಿ ಆಕಾಂಕ್ಷಿಗಳಿಗೆ ಗಾಬರಿ ತರಿಸಿತ್ತು, ಆಳ್ವಾ ಕಾಂಗ್ರೆಸ್‌ನಲ್ಲಿದ್ದರೆ ಬಿಜೆಪಿ ಉದ್ಧಾರವಾಗಲ್ಲ ಎಂಬ ಭಯವೂ ರಾಮಮೂರ್ತಿ ತರದ ಟಿಕೆಟ್ ಆಕಾಂಕ್ಷಿಗಳಲ್ಲಿ ಬೆಳೆದಿತ್ತು, ಇದೇ ರಾಮಮೂರ್ತಿ ಬಿಜೆಪಿಗೆ ಬರುವಂತೆ ಆಳ್ವಾನನ್ನೂ ಕರೆದಿದ್ದನಂತೆ. ಆದರೆ ನೋ ಅಂದಿದ್ದ ಆಳ್ವಾ. ಕಳೆದ ವಾರವಷ್ಟೇ ಜಯನಗರ ಟಿ. ಬ್ಲಾಕ್‌ನಲ್ಲಿ ಒಂದು ಕಾರ್ಯಕ್ರಮದಲ್ಲಿ ರಾಮಲಿಂಗಾರೆಡ್ಡಿ ಜೊತೆ ಮಿಂಚಿಬಿಟ್ಟ, ಅವತ್ತು ಆಳ್ವಾ ಹೆಗಲ ಮೇಲೆ ರಾಮಲಿಂಗಾರೆಡ್ಡಿ ಕೈ ಹಾಕಿ "ಚಂದ್ರಶೇಖರ್ ರಾಜು ಜೊತೇಲಿರಿ" ಅಂದಿದ್ದರು.

ಈ ಚಂದ್ರಶೇಖರ ರಾಜು ಈ ಬಾರಿ ಕಾಂಗ್ರೆಸ್‌ನಿಂದ ಕಾರ್ಪೊರೇಷನ್ ಎಲೆಕ್ಷನ್‌ಗೆ ನಿಲ್ಲುತ್ತಿದ್ದಾರೆ. ವಿನಯ್ ಆಳ್ವಾ ಅವರ ಬೆಂಬಲಕ್ಕಿದ್ದ, ಈ ನಡುವೆ ಇತ್ತ ಬಿಜೆಪಿಯ ಸಂಭವನೀಯ ಕ್ಯಾಂಡಿಡೇಟ್‌ಗೆ ಸೋಲುವ ಭಯ ಶುರುವಾಗಿತ್ತು, ಅತ್ತ ರೌಡಿ ಕವಳನ ಗ್ಯಾಂಗು ಆಳ್ವಾ ಮುಗಿಸಲು ಹೊಂಚು ಹಾಕುತ್ತಿತ್ತು.

ಇವೆರಡೂ ಗಿರಾಕಿಗಳ ನಡುವೆ ಅದ್ಯಾರು ಲಿಂಕ್ ಕೊಡಿಸಿದರೋ ಈಗ ವಿನಯ್ ಆಳ್ವಾನ ಕೊಲೆಯಾಗಿ ಹೋಗಿದೆ.

ಹಾಗೆ ಹೇಳಬೇಕೆಂದರೆ ಕವಳನಿಗೆ ವಿನಯ್‌ನ ಮುಖ ಪರಿಚಯವೇ ಇರಲಿಲ್ಲ. ಪ್ರತಿನಿತ್ಯ ಜಯನಗರದ ತಲವಾಲಕರ್ ಜಿಮ್‌ಗೆ ಬಂದುಹೋಗುತ್ತಿದ್ದ ವಿನಯ್ ಮೇ 23ರ ಶನಿವಾರ ಸಂಜೆ ಜೆಪಿನಗರದಲ್ಲಿದ್ದ ಇನ್ನೊಂದು ತಲವಾಲಕರ್ ಜಿಮ್‌ಗೆ ಬಂದಿದ್ದ, ಜಿಮ್ ಮುಗಿಸಿ ಟ್ರ್ಯಾಕ್ ಸೂಟಿನಲ್ಲೇ ಆಚೆ ಬಂದು ಮಾಜಿ ಸಚಿವ ಸಿಂಧ್ಯಾ ಮನೆ ಹತ್ತಿರದ ಡಾಲ್ಮಿಯ ಸರ್ಕಲ್ ಹತ್ತಿರ ಬರುತ್ತಿದ್ದಂತೆ ಒಂದು ಗಾಡಿ ಬಂದು ನಿಂತಿದೆ. ಅದರಿಂದ ಇಳಿದ ಕೆಲವರು ನೇರ ಬಂದು ಅಟ್ಯಾಕ್ ಮಾಡಿದ್ದಾರೆ. ಆರು ಕಾಲಡಿ ಎತ್ತರಕ್ಕೆ ಕಟ್ಟುಮಸ್ತಾಗಿದ್ದ ಆಳ್ವಾ ತನ್ನೆದುರು ಅಟ್ಯಾಕ್ ಮಾಡಿದ ಇಬ್ಬರ ಮುಖಕ್ಕೆ ಪಂಚ್ ಮಾಡಿದನಾದರೂ ಇನ್ನಿಬ್ಬರು ಬೆನ್ನಹಿಂದೆ ಬಂದು ತಿವಿದರು. ಆಳ್ವಾ ತೋಳಿಗೂ ತಲವಾರ್ ಏಟು ಬಿತ್ತು, ಆಗಲೂ ತಪ್ಪಿಸಿಕೊಳ್ಳಲೂ ಆಳ್ವಾ ಓಡಿದನಾದರೂ ಸರ್ಕಲ್‌ನ ಇನ್ನೊಂದು ರಸ್ತೆಯಲ್ಲಿದ್ದ ಒಂದು ಗಾಡಿ ಅಡ್ಡ ಬಂತು.

ಅದರೊಳಗೆ ಸಾಕ್ಷಾತ್ ಕವಳನೇ ಇದ್ದ!

ಒಟ್ಟು 4 ಗಾಡಿಗಳಲ್ಲಿ ಕೆಲ ಸುಫಾರಿ ಹಂತಕರು ಹಾಗೂ ಕವಳನ ಬಲಗೈ ಬಂಟ ನಂಜುಂಡ, ರಾಕಿ, ಕುಳ್ಳ ಮೋಹನ, ಬಾಲ ಎಲ್ಲರೂ ಸೇರಿ ಆಳ್ವಾ ಕೊಲೆ ನಡೆಸಿದ್ದಾರೆಂಬ ಸುದ್ದಿಯ ಬಗ್ಗೆ ಪೊಲೀಸರು ಗಮನ ಹರಿಸಲಿ. ಹಾಗೆಯೇ ಬಿಜೆಪಿಯ ರಾಮಮೂರ್ತಿ, ಬಿ. ಸೋಮಶೇಖರ ಮುಂತಾದವರ ಚಲನವಲನಗಳ ಬಗ್ಗೆಯೂ ತನಿಖೆಯಾದರೆ ಒಳ್ಳೆಯದು.

● ರವಿಪ್ರಕಾಶ್

ಇಟ್ಟಮಡು ಬಾಬುಗೆ ಮುಹೂರ್ತ ಇಟ್ಟವರ್ಯಾರು?


ಇತ್ತೀಚೆಗೆ ಲಾಲ್‌ಬಾಗ್‌ನಲ್ಲಿ ಬೆಳ್ಳಂಬೆಳಗ್ಗೆಯೇ ಬಿಜೆಪಿಯ ಇಟ್ಟಮಡು ಬಾಬು ಹತ್ಯೆಯಾಯಿತು. ಈ ಕೊಲೆಗೆ ರೌಡಿ ಪರಂಧಾಮನೆ ಕಾರಣ ಎಂದು ವ್ಯವಸ್ಥಿತ ಪ್ರಚಾರವೂ ನಡೆಯಿತು. ಅದಕ್ಕೆ ತಕ್ಕಂತೆ ಕೊಲೆಯಾದ ಎರಡೇ ದಿನದಲ್ಲಿ ಸಿಸಿಬಿ ಪೊಲೀಸರು ಎಲೆಕ್ಟ್ರಾನಿಕ್‌ಸಿಟಿ ಹತ್ತಿರ ಪರಂಧಾಮನನ್ನು ಗುಂಡಿಟ್ಟು ಮುಗಿಸಿಬಿಟ್ಟರು. ಒಂದು ಮೂಲದ ಪ್ರಕಾರ ಪರಂಧಾಮ ಇಟ್ಟಮಡು ಬಾಬುನ ಕೊಂದಿರಲಿಲ್ಲ, ಹಾಗಂತ ಅವನೇ ತನ್ನ ಹಳೆಯ ಗುರು 'ಇಪ್ಪತ್ತು' ಮುನಿಯಪ್ಪನ ಹತ್ತಿರ ಹೇಳಿಕೊಂಡಿದ್ದ, ಅಷ್ಟೇ ಅಲ್ಲ, ಬಿಜೆಪಿಯ ಟಿಕೆಟ್ ಆಕಾಂಕ್ಷಿಗಳೇ ಇಟ್ಟಮಡು ಬಾಬುನ ಸುಪಾರಿ ಕೊಟ್ಟು ಮುಗಿಸಿದ್ದಾರೆಂದು ಪರಂಧಾಮ ಹೇಳಿದನೆಂದು ರೌಡಿ ಇಪ್ಪತ್ತು ಈಗಲೂ ಹೇಳುತ್ತಾನೆ.

ಅಸಲಿ ಸಂಗತಿ ಏನೆಂದರೆ ಇಟ್ಟಮಡು ಹೊಸಕೆರೆಹಳ್ಳಿ ಸೇರಿದಂತೆ ರಚನೆಯಾಗುತ್ತಿರುವ ಹೊಸ ವಾರ್ಡಿಗೆ ಈ ಬಾರಿ ಬಿಜೆಪಿ ಟಿಕೆಟ್‌ಗಾಗಿ ಬೌಲ್ಡಿ ಬಾಬು, ಇಟ್ಟಮಡು ಬಾಬು, ಸೊಸೈಟಿ ಮಂಜ ಎಂಬ ಮೂವರ ಮಧ್ಯೆ ಪೈಪೋಟಿಯಿತ್ತು, ಇವರ ಪೈಕಿ ಇಟ್ಟಮಡು ಬಾಬು ನಿರ್ನಾಮವಾದ. ಟಿಕೆಟ್ ಪೈಪೋಟಿಯ ಜಗಳದಲ್ಲಾದ ಕೊಲೆ ಇದು ಅಂತಾ ಆ ಏರಿಯಾದ ಜನ ಅನುಮಾನ ಪಟ್ಟರೆ ಪೊಲೀಸರು ಮಾತ್ರ ಅದರ ಬಗ್ಗೆ ತನಿಖೆ ಮಾಡದೆ ರೌಡಿ ಪರಂಧಾಮನತ್ತ ಬಂದೂಕು ತಿರುಗಿಸಿದ್ದರು.

ನಗರ ಬಿಜೆಪಿಯೊಳಗೆ ಇಂತಹ ಇನ್ನೂ ಹಲವು ಹತ್ಯಾ ಘಟನೆಗಳಿವೆ.

ಇದೇ ಜಯನಗರ ಏರಿಯಾದಲ್ಲಿದ್ದ ಜಲ್ಲಿ ವೆಂಕಟೇಶನನ್ನು ರೌಡಿ ಅರಸಯ್ಯನಿಗೆ ಸುಪಾರಿ ಕೊಟ್ಟು ಕೊಲ್ಲಿಸಲಾಯಿತು. ಆಗ ಮಂತ್ರಿ ಜೈಲಿನಲ್ಲಿದ್ದ ಅರಸಯ್ಯನನ್ನು ಬಿಜೆಪಿ ಮಾಜಿ ಕಾರ್ಪೊರೇಟರ್, ಒಬ್ಬ ಭೇಟಿ ಮಾಡಿ ಈ ಡೀಲು ಕೊಟ್ಟಿದ್ದನ್ನು ಮಾಫಿಯಾಗಳೇ ಈಗ ಹೇಳುತ್ತಿದ್ದಾರೆ.


ಬಿಜೆಪಿಯ ರಾಮಮೂರ್ತಿ ಹಾಗೂ ಸೋಮಶೇಖರ್ ಜಗಳಮಾಡಿಕೊಂಡಾಗ


ಬಾಬು

ರಾಮಮೂರ್ತಿ ಪರ ನಿಂತಿದ್ದ ಜಲ್ಲಿ ವೆಂಕಟೇಶ್ ಆಮೇಲೆ ಕಾಂಗ್ರೆಸ್ ಸೇರಿದ್ದ, ಒಂದಿಷ್ಟು ಜನಪರ ಕೆಲಸ ಮಾಡಿ ಕಾಂಗ್ರೆಸ್ ಟಿಕೆಟ್ಟೂ ತಂದೇ ಬಿಡುತ್ತಾನೆಂಬ ಸುದ್ದಿ ಹೊರಟ ತಕ್ಷಣ ಜಲ್ಲಿ ಹತ್ಯೆಯಾಗಿ ಹೋಯಿತು.

ಬೆಂಗಳೂರು ಬಿಜೆಪಿಯೊಳಗೆ ಇಂತಹ ರಾಮಾಯಣಗಳಿಗೆ ಲೆಕ್ಕವೆಲ್ಲಿ? ●

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ಯಡ್ಡಿ V/s ರೆಡ್ಡಿ=ಸಿದ್ದು ಸಿಎಂ?

ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಮುಂದಿನ ವಾರ ಒಂದು ವರ್ಷ ಸಂಪೂರ್ಣಗೊಳಿಸುವ ಸಂಭ್ರಮದಲ್ಲಿದ್ದರೂ ಬಿಜೆಪಿ ಮನೆಯಲ್ಲೇ ಈಗ ಸೂತಕದ ಛಾಯೆ ಕಾಣಿಸುತ್ತಿದೆ. ಯಾಕೆಂದರೆ ಯಡ್ಡಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಲು ವಿಭಿನ್ನ ವಲಯಗಳಲ್ಲಿ ವಿಚಿತ್ರ ರೀತಿಯ ತಂತ್ರಗಳು ಸಿದ್ಧವಾಗುತ್ತಿವೆ.

ದಕ್ಷಿಣ ಭಾರತದಲ್ಲಿ ಮೊತ್ತಮೊದಲ ಬಾರಿಗೆ ಬಿಜೆಪಿಯನ್ನು ಯಡ್ಡಿ ನೇತೃತ್ವದಲ್ಲಿ ಅಧಿಕಾರದ ಗದ್ದುಗೆಗೆ ಏರಿಸಲಾಯಿತು ನಿಜ. ವಿಚಿತ್ರವೆಂದರೆ ಇವತ್ತು ಯಡ್ಡಿಯನ್ನು ಅದೇ ಅಧಿಕಾರದ ಸಿಂಹಾಸನದಿಂದ ಕೆಳಗಿಳಿಸಲು ಬಿಜೆಪಿಯ ಭಿನ್ನಮತೀಯ ನಾಯಕರು ಮತ್ತು ಕಾಂಗ್ರೆಸ್ ನಾಯಕರ ನಡುವೆ ತೀವ್ರವಾದ ಪೈಪೋಟಿ ನಡೆಯುತ್ತಿರುವುದು! ಇತ್ತ ಯಡ್ಡಿಯನ್ನು ಉರುಳಿಸಿದ ಕೀರ್ತಿ ತಮಗೆ ಸಿಗಬೇಕೆಂದು ಭಿನ್ನಮತೀಯರು ಆಶಿಸುತ್ತಿದ್ದರೆ ಅತ್ತ ಆ ಕೀರ್ತಿಯನ್ನು ತಮ್ಮದಾಗಿಸಿಕೊಳ್ಳಲು ಕಾಂಗ್ರೆ ನಾಯಕರು ಸಕಲ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಇದೆಲ್ಲದರ ಮಧ್ಯೆ ಅದು ಹೇಗಾದರು ಮಾಡಿ ಕೇಂದ್ರ ಸರ್ಕಾರದ ಸಚಿವ ಸಂಪುಟವನ್ನು ಸೇರಿ ಆ ಮೂಲಕ ರಾಜ್ಯದಲ್ಲಿನ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲು ತುದಿಗಾಲ ಮೇಲೆ ನಿಂತಿದ್ದ ಜೆಡಿಎಸ್‌ನ ದಂಡನಾಯಕ ಕುಮಾರಸ್ವಾಮಿಗೆ ಮುಖಭಂಗವಾಗಿದೆ. ಹೀಗಾಗಿ ಸದ್ಯ ಯಡ್ಡಿ ಪದಚ್ಯುತಿ ಎಂಬ ನಾಟಕದಲ್ಲಿ ಈಗ ಮೂರು ಪಾತ್ರಗಳ ಬದಲಾಗಿ ಕೇವಲ ಎರಡು ಪಾತ್ರಗಳು ಮಾತ್ರ ಉಳಿದಿವೆ.

ಕುಮಾರಸ್ವಾಮಿ ಪಾತ್ರ

ದೆಹಲಿಯಲ್ಲಿ ಮಂತ್ರಿಯಾಗಿ ಆ ಮೂಲಕ ರಾಜ್ಯ ಸರ್ಕಾರವನ್ನು ಅಭದ್ರಗೊಳಿಸುವ ದಳದ ದಂಡನಾಯಕ ಕುಮಾರಸ್ವಾಮಿಯವರ ರಾಜಕೀಯ ತಂತ್ರಗಾರಿಕೆಯನ್ನು ಆರಂಭದಲ್ಲಿ ದೆಹಲಿ ಕಾಂಗ್ರೆ ನಾಯಕರು ತುಂಬಾ ಇಷ್ಟಪಟ್ಟಿದ್ದರು. ಅದಕ್ಕೆ ಕಾರಣವೂ ಇತ್ತು. ಅದೇನೆಂದರೆ ಏನೇ ಆದರೂ ಇಂತಹ ನಾಟಕದಿಂದ ಕುಮಾರಸ್ವಾಮಿಗೆ ಕೆಟ್ಟ ಹೆಸರು ಬರುತ್ತದೆಯೇ ವಿನಹ ತಮ್ಮ ಪಕ್ಷಕ್ಕಲ್ಲ ಎಂಬ ನಿಲುವು ದೆಹಲಿ ನಾಯಕರದ್ದಾಗಿತ್ತು. ಕುಮಾರಸ್ವಾಮಿಯವರ ಈ ಪ್ರಯತ್ನದ ಬಗ್ಗೆ ರಾಜ್ಯ ಕಾಂಗ್ರೆ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದರೂ, ಅದಕ್ಕೆ ಕೇರ್ ಮಾಡದ ದೆಹಲಿ ದೊರೆಗಳು ಯಡ್ಡಿ ಸರ್ಕಾರವನ್ನು ಕೆಳಗಿಳಿಸಲು ಯಾರೇ ಪ್ರಯತ್ನಿಸಿದರೂ ಅದಕ್ಕೆ ಪರೋಕ್ಷ ಮತ್ತು ಪ್ರತ್ಯಕ್ಷ ಬೆಂಬಲ ನೀಡುವುದು ತಮ್ಮ ರಾಜಕೀಯ ಕರ್ತವ್ಯ ಎಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದರು.


ಆದರೆ ಬಿಜೆಪಿಯ ಗಣಿದಣಿಗಳು ಕುಮಾರಸ್ವಾಮಿಯವರ ಯೋಜನೆಗೆ ಕೊಕ್ಕೆ ಹಾಕಿದರು. ಪಕ್ಕದ ಆಂಧ್ರ ಪ್ರದೇಶದ ಮುಖ್ಯಮಂತ್ರಿ ರಾಜಶೇಖರ್ ರೆಡ್ಡಿಯೊಂದಿಗಿನ ತಮ್ಮ ಸ್ನೇಹದ ಬಲವನ್ನು ಉಪಯೋಗಿಸಿಕೊಂಡು ಕುಮಾರಸ್ವಾಮಿ ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗುವುದನ್ನು ತಡೆಯುವಲ್ಲಿ ಯಶಸ್ವಿಯಾದರು. ಇದಕ್ಕೆ ಕಾರಣ ಎಲ್ಲರಿಗೂ ಗೊತ್ತಿದೆ. ಕುಮಾರಸ್ವಾಮಿ ಕೇಂದ್ರದಲ್ಲಿ ಮಂತ್ರಿಯಾದರೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಪತನವಾಗುತ್ತದಲ್ಲದೆ ಬಳ್ಳಾರಿಯಲ್ಲಿನ ತಮ್ಮ ಸಾಮ್ರಾಜ್ಯವೂ ಅವಸಾನವಾಗುತ್ತದೆ ಎಂಬ ಅರಿವು ರೆಡ್ಡಿ ಸಹೋದರರಿಗಿತ್ತು. ಹೀಗಾಗಿ ಬಿಜೆಪಿ ಸರ್ಕಾರದ ಪತನಕ್ಕೆ ಮುನ್ನ ತಮ್ಮ ಸಾಮ್ರಾಜ್ಯದ ಮೇಲೆ ಲಗ್ಗೆ ಹಾಕಲು ಹೊರಟಿದ್ದ ಕುಮಾರಸ್ವಾಮಿಯನ್ನು ಮಟ್ಟ ಹಾಕುವುದು ರೆಡ್ಡಿ ಸಹೋದರರ ಮೊದಲ ಆದ್ಯತೆಯಾಗಿತ್ತು.

ರೆಡ್ಡಿ ಸಹೋದರರ ಬಲೆ

ಇದರರ್ಥ ರೆಡ್ಡಿ ಸಹೋದರರಿಗೆ ಯಡಿಯೂರಪ್ಪನವರ ಮೇಲೆ ಅಪಾರ ಪ್ರೀತಿ ಮತ್ತು ನಂಬಿಕೆ ಇದೆಯೆಂದಲ್ಲ. ಕುಮಾರಸ್ವಾಮಿಯವರು ಕೇಂದ್ರದತ್ತ ಕಣ್ಣು ಹಾಯಿಸುವುದಕ್ಕೆ ಮುನ್ನವೇ ಬಳ್ಳಾರಿಯ ಗಣಿದಣಿಗಳು ಯಡಿಯೂರಪ್ಪನ ವಿರುದ್ಧ ಮುನಿಸಿಕೊಂಡಿದ್ದರು. ಆ ಕಾರಣಕ್ಕಾಗಿಯೇ ಈ ಬಾರಿಯ ಲೋಕಸಭಾ ಚುನಾವಣಾ ಸಂದರ್ಭದಲ್ಲಿ ರೆಡ್ಡಿ ಸಹೋದರರ ಪಟಾಲಂ ತನ್ನ ಪ್ರಚಾರ ಕಾರ್ಯವನ್ನು ರಾಜ್ಯಾದ್ಯಂತ ಮಾಡುವ ಬದಲು ಬಳ್ಳಾರಿ ಮತ್ತು ರಾಯಚೂರು ಲೋಕಸಭಾ ಕ್ಷೇತ್ರಗಳಿಗೆ ಸೀಮಿತಗೊಳಿಸಿಕೊಂಡಿತ್ತು.

ಆದರೆ ಇದುವೇ ರೆಡ್ಡಿಗಳ ವಿರುದ್ಧ ಬೂಮರಾಂಗ್ ಆಯಿತು. ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಲಿಂಗಾಯತರು ಸಾಕಷ್ಟು ಸಂಖ್ಯೆಯಲ್ಲಿದ್ದರೂ ರೆಡ್ಡಿಗಳ ಸೇವಕ ಸಚಿವ ಶ್ರೀರಾಮುಲು ಅವರ ಸಹೋದರಿ ಶಾಂತಾ ಕೇವಲ ಎರಡು ಸಾವಿರ ಚಿಲ್ಲರೆ ಮತಗಳ ಅಂತರದಿಂದ ಗೆದ್ದಿದ್ದು ರೆಡ್ಡಿಗಳ ವರ್ಚಸ್ಸಿಗೆ ದೊಡ್ಡ ಧಕ್ಕೆ ತಂದಿತ್ತು. ತಮ್ಮ ಕ್ಷೇತ್ರದಲ್ಲಿ ತಮ್ಮ ವಿರುದ್ಧವೇ ಯಡ್ಡಿಯ ಲಿಂಗಾಯತರು ಚುನಾವಣೆಯಲ್ಲಿ ಕೆಲಸ ಮಾಡಿದ್ದಾರೆ ಎಂಬ ಗುಮಾನಿ ರೆಡ್ಡಿಗಳದ್ದು. ಆ ಕಾರಣಕ್ಕಾಗಿಯೂ ಯಡ್ಡಿ ವಿರುದ್ಧ ರೆಡ್ಡಿಗಳ ಪಿತ್ತ ನೆತ್ತಿಗೇರಿತು.

ಈಗಾಗಲೇ ಎಲ್ಲರಿಗೆ ಗೊತ್ತಿರುವಂತೆ ಬೆಳಗಾವಿ ಅಧಿವೇಶನದ ಸಂದರ್ಭದಲ್ಲೇ ಗಣಿದಣಿಗಳು ಮತ್ತು ಮುಖ್ಯಮಂತ್ರಿ ಯಡಿಯೂರಪ್ಪ ನಡುವಿನ ಸಂಬಂಧ ಹಳಸಲು ಪ್ರಾರಂಭಿಸಿತ್ತು. ಆ ಅಧಿವೇಶನದಲ್ಲಿ ವಿರೋಧ ಪಕ್ಷಗಳು ರೆಡ್ಡಿ ಸಹೋದರರ ವಿರುದ್ಧ ಒಂದರ ಹಿಂದೆ ಒಂದರಂತೆ ಬಾಣವನ್ನು ಬಿಡುತ್ತಿದ್ದಾಗ ಯಡಿಯೂರಪ್ಪ ರೆಡ್ಡಿಗಳ ಸಹಾಯಕ್ಕೆ ಹೋಗಿರಲಿಲ್ಲ. ಅದನ್ನು ಕಂಡು ರೆಡ್ಡಿಗಳು ಎಷ್ಟು ಕುಪಿತರಾಗಿದ್ದರೆಂದರೆ, ಸದನದಲ್ಲೇ ತಮ್ಮ 'ರೌಡಿಗಿರಿ'ಯನ್ನು ಪ್ರದರ್ಶಿಸಿ "ಅದು ಹೇಗೆ ಬಳ್ಳಾರಿಗೆ ಕಾಲಿಡುತ್ತೀರಿ ನಾವು ನೋಡಿಕೊಳ್ಳುತ್ತೇವೆ" ಎಂದು ವಿರೋಧ ಪಕ್ಷದವರಿಗೆ ಧಮಕಿ ಹಾಕುವಷ್ಟು ಸಹನೆ ಕಳೆದುಕೊಂಡಿದ್ದರು.



ಜನಾ[illegible] ರೆಡ್ಡಿ-ಕರುಣಾಕ[illegible]ರಾಮುಲು

ತನ್ನ ವಿರುದ್ಧ ರೆಡ್ಡಿಗಳು ಕತ್ತಿ ಮಸಿಯುತ್ತಿದ್ದಾರೆ ಎಂದರಿತ ಯಡಿಯೂರಪ್ಪನೇನು ಸುಮ್ಮನೆ ಕೂರಲಿಲ್ಲ. ಲೋಕಸಭಾ ಕ್ಷೇತ್ರದ ಫಲಿತಾಂಶ ಬಹಿರಂಗಗೊಂಡ ಮರುಕ್ಷಣವೇ ಯಡಿಯೂರಪ್ಪ ರೆಡ್ಡಿ ಸಹೋದರರ ವಿರುದ್ಧ ತೆರೆಮರೆಯಲ್ಲಿ ಸಮರ ಸಾರಲು ಪ್ರಾರಂಭಿಸಿದರು. ಮಾತ್ರವಲ್ಲ, ಬಳ್ಳಾರಿಯಲ್ಲಿರುವ ಈ ದಣಿಗಳ ಗಣಿ ಭಾಗದ ಸರ್ವೆಯನ್ನು ಮಾಡಲು ಸರ್ಕಾರ ನಿರ್ಧರಿಸಿದೆ ಎಂದು ಯಡಿಯೂರಪ್ಪ ಘೋಷಿಸಿದ್ದು ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಯಿತು. ಆ ಕ್ಷಣದಿಂದಲೇ ವಾಸ್ತವವಾಗಿ ರೆಡ್ಡಿ ಸಹೋದರರು ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಅನೇಕ ಮಾಸ್ಟರ್ ಪ್ಲಾನ್‌ಗಳನ್ನು ಮಾಡಲು ಪ್ರಾರಂಭಿಸಿದರು.

ಅದರಂತೆ ಬಿಜೆಪಿ ಪಕ್ಷದ ಹೊನ್ನಾಳಿ ಶಾಸಕ ರೇಣುಕಾಚಾರ್ಯ ನೇತೃತ್ವದಲ್ಲಿ ಭಿನ್ನಮತೀಯ ಚಟುವಟಿಕೆಗಳಿಗೆ ರೆಡ್ಡಿ ಸಹೋದರರು ಕುಮ್ಮಕ್ಕು ನೀಡುತ್ತಿದ್ದಾರೆ. ಅಷ್ಟೇ ಅಲ್ಲ, ಯಡ್ಡಿಯ ಸಾಂಪ್ರದಾಯಿಕ ವೈರಿ ಲೋಕಸಭಾ ಸದಸ್ಯ ಅನಂತ್‌ಕುಮಾರ್ ಕಡೆಯೂ ಸ್ನೇಹಹಸ್ತ ಚಾಚಿದ್ದಾರೆ. ಯಡಿಯೂರಪ್ಪನವರನ್ನು ಉರುಳಿಸಿ ಅವರ ಸ್ಥಾನಕ್ಕೆ ಸದ್ಯಕ್ಕೆ ವಿಧಾನ ಸಭೆಯ ಸ್ಪೀಕರ್ ಆಗಿರುವ ಅವರದೇ ಜನಾಂಗದ ಜಗದೀಶ್ ಶೆಟ್ಟರನ್ನು ತರುವ ಯೋಜನೆಯಲ್ಲಿದ್ದಾರೆ. ಈ ಯೋಜನೆಗೆ ಉತ್ತರ ಕರ್ನಾಟಕದ ಬಹುತೇಕ ಎಲ್ಲಾ ಶಾಸಕರ ಬೆಂಬಲವೂ ಸಿಗುವುದರಿಂದ ಅಷ್ಟೇನೂ ಕಷ್ಟವಾಗಲಾರದು ಎಂಬುದು ಅವರ ಅಭಿಮತ.

ಹೇಗಿದ್ದರೂ ಯಡಿಯೂರಪ್ಪನವರು ಮಂಡ್ಯ ಕಡೆಯ ಲಿಂಗಾಯತರು. ಆ ಪ್ರದೇಶದಲ್ಲಿ ಬಿಜೆಪಿಗೆ ಬಳವಂತೂ ಇಲ್ಲವೇ ಇಲ್ಲ. ಬದಲಾಗಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿರುವವರು ಮತ್ತು ಮೊನ್ನಿನ ಲೋಕಸಭಾ ಚುನಾವಣೆಯಲ್ಲಿ ಸಾಕಷ್ಟು ಚೆಡ್ಡಿಗಳನ್ನು ಸಂಸದರನ್ನಾಗಿಸಿರುವುದು ಉತ್ತರ ಕರ್ನಾಟಕದ ಲಿಂಗಾಯತರು. ಇಂತಹ ಒಂದು ವಾದ ಇವತ್ತು ಬಿಜೆಪಿ ವಲಯದಲ್ಲಿ ಸಾಕಷ್ಟು ಬೆಂಬಲಿಗರನ್ನು ಪಡೆದಿದೆ. ಹೀಗಾಗಿ, ರೆಡ್ಡಿಗಳ ಹಣಬಲ, ಉತ್ತರ ಕರ್ನಾಟಕದ ಲಿಂಗಾಯತರ ಸಂಖ್ಯಾಬಲ ಮತ್ತು ಅನಂತಕುಮಾರರ ತೋಳ್ಬಲ ಸಮಾಗಮವಾಗಿ ಯಡ್ಡಿಗೆ ಆಪತ್ತು ಕಾದಿದೆ ಎಂಬ ಮಾತು ಕೇಳಿಬರುತ್ತಿದೆ. ತಮಾಷೆಯ ವಿಷಯವೆಂದರೆ: ಇದು ಬಿಜೆಪಿಯವರನ್ನೇ ಬಿಜೆಪಿಯವರಿಂದಲೇ ಬಿಜೆಪಿಯವರೇ ಅಧಿಕಾರದಿಂದ ಇಳಿಸುವ ಒಂದು ಮಾಸ್ಟರ್ ಪ್ಲಾನ್!

ಒಂದು ವೇಳೆ ಈ ಮಾಸ್ಟರ್ ಪ್ಲಾನ್ ಕಾರ್ಯಗತವಾಗದಿದ್ದರೆ ಅದಕ್ಕೆ ಪರ್ಯಾಯವಾಗಿ ಮತ್ತೊಂದು ಯೋಜನೆ ಕೂಡಾ ರೆಡ್ಡಿ ಪಾಳಯದಲ್ಲಿ ರೆಡಿಯಾಗಿದೆ. ಅದರಂತೆ ಸುಮಾರು 51 ಶಾಸಕರು ಬಿಜೆಪಿಯಿಂದ ಹೊರಬಂದು ವಿಧಾನಸಭೆಯಲ್ಲಿ ಪ್ರತ್ಯೇಕ ಬಣವಾಗಿ ಕೂರುತ್ತಾರೆ. ಅವರುಗಳಿಗೆ ಸ್ಪೀಕರ್ ಜಗದೀಶ್ ಶೆಟ್ಟರ್ ಅವರ ಕಾನೂನಿನ ನೆರವೂ ಇರುತ್ತದೆ. 50ಕ್ಕಿಂತ ಹೆಚ್ಚು ಜನ ಪಕ್ಷದಿಂದ ಹೊರಬಂದರೆ ಅವರ ವಿರುದ್ಧ ಪಕ್ಷಾಂತರ ಕಾನೂನನ್ನು ಜಾರಿಗೊಳಿಸಲಾಗುವುದಿಲ್ಲ. ಈ ಬಣ ಯಡ್ಡಿ ಸರ್ಕಾರಕ್ಕೆ ಬೆಂಬಲವನ್ನು ನೀಡುವುದಿಲ್ಲವಾದ್ದರಿಂದ ಯಡ್ಡಿ ಸರ್ಕಾರ ತನ್ನಿಂದ ತಾನೇ ಪತನವಾಗುತ್ತದೆ.

ಸಿದ್ದು ಎಂಟ್ರಿ

ಆದರೆ ಮುಂದೇನು? ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರು ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸರ್ಕಾರವನ್ನು ರಚಿಸಲು ಮುಂದಾಗುತ್ತಾರೆ. ಆಗ ಈ 51 ಶಾಸಕರ ಪ್ರತ್ಯೇಕ ಬಣ ಆ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುವುದಾಗಿ ಘೋಷಿಸುತ್ತದೆ. ಸರ್ಕಾರದ ರಚನೆಯಲ್ಲಿ ಇವರು ಭಾಗಿಯಾಗುವುದಿಲ್ಲವಾದ್ದರಿಂದ 'ಸೈದ್ಧಾಂತಿಕ' ಬಿಕ್ಕಟ್ಟು ಉದ್ಭವಿಸುವುದಿಲ್ಲ. ಹೇಗಿದೆ ಪ್ಲಾನ್?

ಸಿದ್ದರಾಮಯ್ಯನವರು ಮುಖ್ಯಮಂತ್ರಿಯ ಸ್ಥಾನವನ್ನಲಂಕರಿಸುವುದಕ್ಕೆ ಈ ಬಣದ ಅನೇಕರು ಸಹಾಯ ಮಾಡುತ್ತಾರೆ. ಮುಖ್ಯವಾಗಿ ಪಕ್ಷೇತರರಾಗಿ ಬಂದಿರುವ ವರ್ತೂರು ಪ್ರಕಾಶ್ ನೇತೃತ್ವದಲ್ಲಿ ಶಾಸಕರ ಮನವೊಲಿಸುವ ಕಾರ್ಯ ನಡೆಯುತ್ತಿದೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಲು ವಾಸ್ತವವಾಗಿ ಸಿದ್ದರಾಮಯ್ಯನವರೇ ಸಹಾಯ ಮಾಡಿದ್ದನ್ನು ಬಿಜೆಪಿಯ ಭಿನ್ನಮತೀಯ ನಾಯಕರು ಸ್ಮರಿಸಿಕೊಳ್ಳುತ್ತಿದ್ದಾರೆ. ಅಂದು ತನ್ನ ಹಿಂಬಾಲಕರಾದ ಪಕ್ಷೇತರ ಅಭ್ಯರ್ಥಿಗಳಿಗೆ ಬಿಜೆಪಿ ಸೇರಲು ಸಿದ್ದರಾಮಯ್ಯ ಗ್ರೀನ್ ಸಿಗ್ನಲ್ ನೀಡದೇ ಇದ್ದಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಲು ಸಾಧ್ಯವೇ ಇರಲಿಲ್ಲ ಎಂಬುದನ್ನು ಇಲ್ಲಿ ಸ್ಮರಿಸಬೇಕು. ಈ ಕಾರಣದಿಂದಲೇ ಸಿದ್ದರಾಮಯ್ಯನವರ ಋಣವನ್ನು ತೀರಿಸಲು ಬಿಜೆಪಿ ಭಿನ್ನಮತೀಯರು ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದ್ದಾರೆ.

ಸಿದ್ದರಾಮಯ್ಯನವರ ಪಾಲಿಗಂತೂ ಇದು ಬಯಸದೇ ಬಂದ ಭಾಗ್ಯವಾಗುತ್ತದೆ. ಯಾಕೆಂದರೆ ಮುಖ್ಯಮಂತ್ರಿ ಆಕಾಂಕ್ಷಿಗಳೇ ತುಂಬಿದ್ದ ಪಕ್ಷದಲ್ಲಿ ಈಗ ಅವರ ದಾರಿ ಸುಗಮವಾಗಿದೆ. ಎಸ್.ಎಂ.ಕೃಷ್ಣ, ವೀರಪ್ಪ ಮೊಯ್ಲಿ, ಮಲ್ಲಿಕಾರ್ಜುನ ಖರ್ಗೆ, ಆಸ್ಕರ್ ಫರ್ನಾಂಡಿಸ್... ಮೊದಲಾದವರೆಲ್ಲಾ ಕೇಂದ್ರ ಮಂತ್ರಿಗಳಾಗಿದ್ದಾರೆ. ಮತ್ತೊಬ್ಬ ಮುಖ್ಯಮಂತ್ರಿ ಆಕಾಂಕ್ಷಿ ಧರ್ಮಸಿಂಗ್ ಕೂಡಾ ಈಗ ದೆಹಲಿ ದರ್ಬಾರು ಸೇರಿದ್ದಾರೆ. ಅಂಬರೀಷ್ ಸೋತು ಸುಣ್ಣವಾಗಿದ್ದಾರೆ. ಈ ರೀತಿ ಎಲ್ಲ ಘಟಾನುಘಟಿಗಳು ಈಗ ರಾಜ್ಯದ ಸೀನ್‌ನಿಂದ ಹೊರಹೋಗಿರುವುದು ಸಿದ್ದರಾಮಯ್ಯನವರು ನಿಟ್ಟುಸಿರು ಬಿಡುವಂತೆ ಮಾಡಿದೆ. ಜೊತೆಗೆ ಸಿದ್ದರಾಮಯ್ಯ ಗೌಡರ ಕುಟುಂಬದ ವಿರೋಧಿಯಾಗಿರುವುದರಿಂದ ಅದೇ ಗೌಡರ ಕುಟುಂಬದ ವಿರೋಧಿಗಳಾಗಿರುವ ರೆಡ್ಡಿ ಸಹೋದರರು ಕೂಡಾ ಸಿದ್ದುಗೆ ಬೆಂಬಲ ಸೂಚಿಸುತ್ತಾರೆ.


ಹೀಗೆ ಯಡ್ಡಿ ಸರ್ಕಾರವನ್ನು ಪತನಗೊಳಿಸಲು ರಾಜ್ಯ ರಾಜಕೀಯದಲ್ಲಿ ಅನೇಕಾನೇಕ ತಂತ್ರಗಾರಿಕೆ ನಡೆಯುತ್ತಲೇ ಇದೆ. ಬಿಜೆಪಿಯಲ್ಲಿನ ಭಿನ್ನಮತೀಯ ಅಂತಃಕಲಹ ಸ್ಫೋಟಗೊಂಡ ಮರುಕ್ಷಣದಲ್ಲೇ ರಾಜಕೀಯ ಧ್ರುವೀಕರಣ ಆಗುವುದಂತೂ ಖಂಡಿತ. ಈ ಎಲ್ಲಾ ಮಾಹಿತಿ ಮತ್ತು ವಿಷಯಗಳು ಯಡ್ಡಿಯವರ ಕಿವಿಗೆ ಬಿದ್ದಿರುವುದರಿಂದ ಅವರೀಗ ಫೋನ್ ಕದ್ದಾಲಿಕೆ ಮತ್ತು ಸಚಿವರ ಹಿಂದೆ ಬೇಹುಗಾರರನ್ನು ಕಳಿಸುವ ನಿಕೃಷ್ಟ ರಾಜಕೀಯವನ್ನು ಮಾಡುತ್ತಿದ್ದಾರೆ.

ಈ ಮಧ್ಯೆ ಭಿನ್ನಮತೀಯರನ್ನು ಓಲೈಸಿಕೊಳ್ಳಲು ಸಚಿವ ಸಂಪುಟವನ್ನು ಪುನರ್ರಚನೆ ಮಾಡಿ ಜಗದೀಶ್ ಶೆಟ್ಟರನ್ನು ಮಂತ್ರಿ ಮಾಡುವ ಬಗ್ಗೆ ಯಡ್ಡಿ ಮಾತನಾಡುತ್ತಿದ್ದಾರೆ. ಜಗದೀಶ್ ಶೆಟ್ಟರ್ ಕ್ಯಾಬಿನೆಟ್ ಸ್ಥಾನಕ್ಕೆ ತೃಪ್ತಿ ಪಡುತ್ತಾರೆಯೇ ಅಥವಾ ಭಿನ್ನಮತೀಯ ಶಾಸಕರ ನಾಯಕರಾಗಿ ಮೂಡಿ ಬರುತ್ತಾರೋ ನೋಡಬೇಕು.

ಒಟ್ಟಾರೆಯಾಗಿ ಯಡ್ಡಿ ಒಂದು ಗಾಳ ಹಾಕಿದರೆ, ರೆಡ್ಡಿ ಸಹೋದರರು ದೊಡ್ಡ ಬಲೆಯನ್ನೇ ಬೀಸಿದ್ದಾರೆ.

ಒಂದಂತೂ ನಿಜ, ಒಂದು ವರ್ಷ ಸರ್ಕಾರವನ್ನು ನಡೆಸಿದ ಸಂಭ್ರಮದಲ್ಲಿರುವ ಯಡಿಯೂರಪ್ಪ ಮುಂದೆಯೂ ನಿರಾತಂಕವಾಗಿ ಅಧಿಕಾರವನ್ನು ಅನುಭವಿಸುವ ಸಾಧ್ಯತೆಗಳು ತುಂಬಾ ಕಡಿಮೆ. ರಾಷ್ಟ್ರಮಟ್ಟದಲ್ಲಿ ಬಿಜೆಪಿ ನಾಯಕರೆಲ್ಲ ಸೋತುಸುಣ್ಣವಾಗಿರುವ ಸಂದರ್ಭದಲ್ಲಿ ಅವರ್‍ಯಾರಿಗೂ ರಾಜ್ಯದ ರಾಜಕೀಯದ ಬಗ್ಗೆ ಹಿಂದಿನಷ್ಟು ಕಾಳಜಿ ಉಳಿದಿಲ್ಲ. ಹೀಗಾಗಿ ಸದ್ಯಕ್ಕೆ ಬಿಜೆಪಿ ಸರ್ಕಾರದ ಪತನದ ಕಾರ್ಯತಂತ್ರದ ನಾಟಕದ ರಿಹರ್ಸಲ್ ಬಹಳ ಜೋರಾಗಿಯೇ ನಡೆಯುತ್ತಿದೆ.

● ಸದಾಶಿವ ಶೆಣೈ




ಇಂಟರ್‌ನೆಟ್‌ನಲ್ಲಿ ಈಗ ಹರಿದಾಡುತ್ತಿರುವ ಎರಡು 'ಫೋಟೋ'ಗಳನ್ನು ನಮ್ಮ ಓದುಗರಿಗಾಗಿ ಇಲ್ಲಿ ನೀಡುತ್ತಿದ್ದೇವೆ. ಇವೆರಡನ್ನು ಯಾರೋ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿ ತಮ್ಮ ಕಂಪ್ಯೂಟರ್‌ನಲ್ಲಿ ಸೃಷ್ಟಿಸಿದ್ದಾರೆಯೇ ಹೊರತು ಇವು ನಿಜವಾದ ಫೋಟೋಗಳಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಎನಿಸುತ್ತದೆ.

ಮೊದಲನೆ ಚಿತ್ರ ಸೃಷ್ಟಿಯಾಗಿದ್ದು ಎಲ್‌ಟಿಟಿಇ ನಾಯಕ ವೇಲುಪಿಳ್ಳೈ ಪ್ರಭಾಕರನ್ ಮಡಿದ ಮಾರನೆ ದಿನ. ಇದನ್ನು ರಚಿಸಿರುವ 'ಕಲಾವಿದ' 'ಪ್ರಭಾಕರನ್' ಕೈಗೆ ಆತ ನಿಧನ ಹೊಂದಿರುವ ಸುದ್ದಿಯನ್ನು ಪ್ರಕಟಿಸಿರುವ ಪತ್ರಿಕೆಯೊಂದನ್ನು ನೀಡಿದ್ದಾನಲ್ಲದೆ, ಟಿವಿ ಪರದೆಯ ಮೇಲೆ ಆತನ ಶವಚಿತ್ರವನ್ನೂ ಅಂಟಿಸಿದ್ದಾನೆ. ಇದನ್ನು ನೋಡಿ ಅದೆಷ್ಟೋ ಮುಗ್ಧರು ಪ್ರಭಾಕರನ್ ಇನ್ನೂ ಜೀವಂತವಾಗಿದ್ದಾನೆ ಎಂದು ನಂಬಿರುವ ಸಾಧ್ಯತೆ ಇದೆ.

ಇನ್ನು ಎರಡನೆಯ ಚಿತ್ರವಂತೂ ನಗು ಉಕ್ಕಿಸುವಂತಿದೆ. ಅಕ್ಷಯ್‌ಕುಮಾರ್ ಮತ್ತು ಕತ್ರಿನಾ ಕೈಫ್ ನಟಿಸಿದ್ದ 'ಸಿಂಗ್ ಈಸ್ ಕಿಂಗ್' ಎಂಬ ಸಿನಿಮಾದ ಪೋಸ್ಟರನ್ನೇ ತೆಗೆದುಕೊಂಡು ಅಕ್ಷಯ್ ಮುಖದ ಜಾಗದಲ್ಲಿ ಮನಮೋಹನ್‌ಸಿಂಗ್ ಅವರ ಚಿತ್ರವನ್ನು ಮತ್ತು ಕತ್ರಿನಾಳ ಮುಖದ ಜಾಗಕ್ಕೆ ಸೋನಿಯಾ ಗಾಂಧಿಯವರ ಚಿತ್ರವನ್ನು ಅಂಟಿಸಿದ್ದಾರೆ. ಇದಕ್ಕಿಂತ ಸಖತ್ತಾಗಿರುವುದು ಈ ಪೋಸ್ಟರ್‌ನಲ್ಲಿರುವ ಶೀರ್ಷಿಕೆಗಳು. 'ಈಗ ಪಾರ್ಲಿಮೆಂಟ್‌ನಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿದೆ' ಎಂಬ ಘೋಷಣೆ ಹೊಂದಿರುವ ಈ 'ಚಿತ್ರ'ದ ನಿರ್ಮಾಪಕ ಕಾಂಗ್ರೆಸ್ ಪಕ್ಷವೆಂದೂ, ಇದರ ನಿರ್ದೇಶಕ ಎಲ್.ಕೆ. ಅಡ್ವಾಣಿ ಎಂದೂ 'ಪ್ರಕಟಿಸಲಾಗಿದೆ'!

ಸುಮ್ಮನೆ ಎಂಜಾಯ್ ಮಾಡಿ!



ಇದು ನಿಜವೇ


...ನಾವಣಾ ಫಲಿತಾಂಶ: ಒಂದು ವಿಶ್ಲೇಷಣೆ

...ಲುವು ಗೆದ್ದಿಲ್ಲ, ಸೋಲು ಸೋತಿಲ್ಲ!

...ಈ ಚುನಾವಣೆಯಲ್ಲಿ ನಿಜವಾಗಲೂ ಬಿಜೆಪಿಯ ಸಿದ್ಧಾಂತ ಸೋತಿತೆ? ಎಡಪಕ್ಷಗಳ ...ಕೋಟೆ ಬಿದ್ದಿತೆ? ಕಾಂಗ್ರೆಸ್ ಗೆಲುವು ಸಾಧಿಸಿತೆ? ಈ ಎಲ್ಲ ಪ್ರಶ್ನೆಗಳ ಸುತ್ತ ಒಂದು ...ನೋಟ ಇಲ್ಲಿದೆ.

● ಶಿವಸುಂದರ್

...ಚುನಾವಣಾ ಫಲಿತಾಂಶವನ್ನು ಜನಾದೇಶವೆಂದು ...ವ ಮೊದಲು ಈ ಬಾರಿಯೂ ಶೇ.40ಕ್ಕಿಂತಲೂ ...ನರು ಓಟು ಹಾಕಿಲ್ಲ ಎಂಬುದನ್ನು ಮರೆಯಬಾರದು. ಗೆದ್ದವರು ಎಷ್ಟು ಶೇಕಡಾ ಓಟು ಪಡೆದರು ಎಂಬ ...ನಡೆಯುವಾಗ ಅರ್ಧದಷ್ಟು ಜನ ಓಟು ಹಾಕಿಲ್ಲ ...ವನ್ನು ಲೆಕ್ಕ ಹಿಡಿಯಬೇಕಲ್ಲವೇ? ಈ ಬಾರಿ 74 ...ಜನ ಓಟಿನ ಅರ್ಹತೆ ಪಡೆದಿದ್ದರೂ ಓಟು ಹಾಕಿದವರು 41.7 ಕೋಟಿ ಜನ. ಅದರಲ್ಲಿ ಗೆದ್ದ ಕಾಂಗ್ರೆಸ್ ...ವುದು ಶೇ.27ರಷ್ಟು ಮತವನ್ನು ಅಂದರೆ 11.25 ...ಜನರ ಬೆಂಬಲವನ್ನು ಪಡೆದಿದೆ. ಆದರೆ ಓಟು ...ರು ಕಾಂಗ್ರೆಸ್ಸನ್ನೂ ತಿರಸ್ಕರಿಸಿದ್ದರು ಎಂದೇ ಅರ್ಥವಲ್ಲವೇ? ವಾಸ್ತವವಾಗಿ ಕಾಂಗ್ರೆಸ್ ಗಳಿಸಿದ ಮತಪ್ರಮಾಣ ...ಕೋಟಿ ಮತದಾರರಲ್ಲಿ 11.25 ಕೋಟಿ ಮತದಾರರ ಎಂಬ ಲೆಕ್ಕದಲ್ಲಿ) ಶೇ.15 ಆಗುತ್ತದೆಯೇ ಹೊರತು ...ಅಲ್ಲ. ಅದೇ ರೀತಿ ಬಿಜೆಪಿ ಪಡೆದ ಮತ ಶೇ.17.88 7.4ಕೋಟಿ ಮತ ...ಬೆಂಬಲ. ಆದರೆ ಒಟ್ಟು ...ಕೋಟಿ ಮತದಾರರನ್ನು ...ಡಿದರೆ ಬಿಜೆಪಿಗೆ ಸಿಕ್ಕ ...ಶೇ.10, ಶೇ.17 ಅಲ್ಲ. ಬಿಜೆಪಿಯಾದರೂ, ... ಆದರೂ ಶೇ.85 ...ಜನ ತಿರಸ್ಕರಿಸಿದವರೇ ...ಆಳುತ್ತಿದ್ದಾರೆ ಎಂಬು...ವು ಮರೆಯಬಾರದು. ...ದಲೇ ಚುನಾವಣಾ ...ಶವನ್ನೇ ನೈಜ ಜನಾ...ಎಂದೂ, ಚುನಾವಣೆ ...ಮಾತ್ರ ಏಕೈಕ ಪ್ರಜಾ ಪ್ರಕ್ರಿಯೆಯೆಂದೂ ...ಸುವುದು ತಪ್ಪಾಗುತ್ತದೆ.



ಇದು ಅರ್ಧ ಜನಾದೇಶ ಮಾತ್ರ!

...ಓಟು ಮತ್ತು ಸೀಟುಗಳ ಸಂಬಂಧ

...ರತದ ಸಂಸದೀಯ ಪ್ರಜಾತಂತ್ರದ ಮತ್ತೊಂದು ...ಯೆಂದರೆ ಓಟು ಜಾಸ್ತಿ ಪಡೆಯದವರೂ ಸೀಟು ...ಬಹುದಾದ ಪದ್ಧತಿ. ಉದಾಹರಣೆಗೆ ಈ ಬಾರಿ ಅಖಿಲ ...ಮಟ್ಟದಲ್ಲಿ ಕಾಂಗ್ರೆಸ್‌ಗೆ ಸಿಕ್ಕಿರುವುದು ಕೇವಲ ಶೇ.2ರಷ್ಟು ...ಓಟುಗಳು ಮಾತ್ರ. ಆದರೆ ಅದರಿಂದ ಕಾಂಗ್ರೆಸ್‌ಗೆ ...ವಾಗಿ ಸಿಕ್ಕ ಸೀಟುಗಳ ಸಂಖ್ಯೆ 60. ಇದು ...ಶವನ್ನೇನು ಸ್ಪಷ್ಟವಾಗಿ ಪ್ರತಿಫಲಿಸುವುದಿಲ್ಲ. ಇದನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಮಹಾರಾಷ್ಟ್ರದ ...ದರಣೆಯನ್ನು ಗಮನಿಸಬಹುದು. ಈ ಬಾರಿ ಕಾಂಗ್ರೆಸ್ ...ರಾಷ್ಟ್ರದಲ್ಲಿ 2004ಕ್ಕಿಂತ ಶೇ.4ರಷ್ಟು ಕಡಿಮೆ ಮತಗಳನ್ನು ...ಕೊಂಡಿದೆ. ಆದ್ದರಿಂದ ಪಡೆದ ಸೀಟುಗಳ ಸಂಖ್ಯೆಯೂ ...ಯಾಗಬೇಕಲ್ಲವೇ? ಆದರೆ 2004ರಲ್ಲಿ ಕಾಂಗ್ರೆಸ್‌ಗೆ ಆ ...ಲ್ಲಿ 13 ಸೀಟುಗಳು ಮಾತ್ರ ದೊರೆತಿದ್ದರೆ ಈ ಬಾರಿ ...ಷ್ಟು ಕಡಿಮೆ ಮತದಾನವಾಗಿದ್ದರೂ 17 ಸೀಟುಗಳನ್ನು ...ಕೊಂಡಿದೆ. ಅಷ್ಟು ಮಾತ್ರವಲ್ಲ, ಈ ಬಾರಿ ಕಾಂಗ್ರೆಸ್ ...ಅದರ ಮಿತ್ರ ಪಕ್ಷವಾದ ಎನ್‌ಸಿಪಿಗಳೆರಡಕ್ಕೂ ಸಿಕ್ಕಿರುವ ...ಪ್ರಮಾಣ ಶೇ.19ರಷ್ಟೇ. ಆದರೆ ಎನ್‌ಸಿಪಿಗೆ ಸಿಕ್ಕಿದ್ದು 8 ...ಗಳು ಮಾತ್ರ. ಒಂದು ಚುನಾವಣಾ ಕ್ಷೇತ್ರದಲ್ಲಿ ...ಪಕ್ಷೀಯ ಸ್ಪರ್ಧೆ ಇದ್ದಾಗ ಒಟ್ಟಾರೆ ಮತಪ್ರಮಾಣಕ್ಕಿಂತ ...ಕ್ಷೇತ್ರದಲ್ಲಿ ಯಾರಿಗೆ ಹೆಚ್ಚು ಮತ ಸಿಕ್ಕಿತು ಎಂಬುದು ...ಯನ್ನು ನಿರ್ಧರಿಸುವುದರಿಂದ ಜನಾದೇಶಗಳ ವಿಕೃತಿಯೇ ...ಸುತ್ತದೆ. ಕರ್ನಾಟಕದ ಕಳೆದ ವಿಧಾನಸಭಾ ...ಣೆಯಲ್ಲಿ ಕಾಂಗ್ರೆಸ್‌ಗೆ ಬಿಜೆಪಿಗಿಂತ ಶೇ.2ರಷ್ಟು ಹೆಚ್ಚಿನ ...ಬಂದಿದ್ದರೂ ಬಿಜೆಪಿಗೆ ಹೆಚ್ಚಿನ ಸೀಟುಗಳು ಬಂದಿತ್ತು. ...ದ ಸೀಟು ಜಾಸ್ತಿ ಪಡೆದ ಪಕ್ಷಕ್ಕೆ ಜನಾದೇಶವೂ ...ಎಂಬ ಸರಳ ತೀರ್ಮಾನಗಳಿಗೆ ಸಂಸದೀಯ ಪ್ರಜಾ...ಲ್ಲಿ ಬರಲು ಸಾಧ್ಯವಿಲ್ಲ. ಭಾರತದಂಥ ಬಹುಪಕ್ಷೀಯ ...ದಲ್ಲಂತೂ ಸಾಧ್ಯವೇ ಇಲ್ಲ.

...ಆಡಳಿತ ಪಕ್ಷ ವಿರೋಧಿ ಓಟೇ ವಿನಃ ಪರವಾದ ...ಕಾಂಗ್ರೆಸ್ಸು ಎರಡನೇ ಬಾರಿ ಅಧಿಕಾರಕ್ಕೆ ಬಂದಿದ್ದರಿಂದ ...ಚುನಾವಣಾ ಇತಿಹಾಸದಲ್ಲೇ ಒಂದು ಹೊಸ ಅಧ್ಯಾಯ ...ಪ್ರಾರಂಭವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಅದಕ್ಕೆ ...1989 ನಂತರ ಮೊದಲ ಬಾರಿಗೆ 2004ಕ್ಕಿಂತಲೂ ...ಸೀಟುಗಳು ಸಿಕ್ಕಿರುವುದನ್ನು ಉದಾಹರಿಸಲಾಗುತ್ತಿದೆ. ...ವಾಸ್ತವ ಹಾಗೇನೂ ಇಲ್ಲ. ಕೆಲವು ಅಪವಾದಗಳನ್ನು ಬಿಟ್ಟರೆ ಈ ಬಾರಿಯೂ ಅಧಿಕಾರಾರೂಢ ಪಕ್ಷಗಳ ವಿರುದ್ಧವೇ ಮತದಾರರು ಮತ ಚಲಾಯಿಸಿದ್ದಾರೆ. ಶೇ.65ಕ್ಕಿಂತಲೂ ಹೆಚ್ಚು ಮತದಾನವಾಗಿರುವ ಪ.ಬಂಗಾಳ (ಶೇ.81.3), ಕೇರಳ (ಶೇ.73.3), ಆಂಧ್ರ ಪ್ರದೇಶ (ಶೇ.72.6), ಪಂಜಾಬ್ (ಶೇ.69.8), ಹರ್‍ಯಾಣ (67.4) ದಂತಹ ಪ್ರಮುಖ ರಾಜ್ಯಗಳಲ್ಲಿ ಆಡಳಿತಾರೂಢ ಪಕ್ಷಗಳ ವಿರುದ್ಧವೇ ಮತ ಚಲಾವಣೆ ಆಗಿದೆ. ಇನ್ನು ಹಲವು ಕಡೆ ಮತದಾರರಿಗೆ ಯಾವುದು ವಿರೋಧ ಪಕ್ಷವೆಂಬುದು ಅರ್ಥವಾಗದ ರೀತಿ ಚುನಾವಣಾ ಹೊಂದಾಣಿಕೆ ಸಂಭವಿಸಿದ್ದರಿಂದ ಕೇಂದ್ರ ಮಟ್ಟದಲ್ಲಿ ಕಾಂಗ್ರೆಸ್ಸಿಗೆ ಲಾಭವಾಗಿದೆ. ಉದಾಹರಣೆಗೆ ಈ ಬಾರಿ ಕಾಂಗ್ರೆಸ್ಸಿಗೆ ಅತಿ ಹೆಚ್ಚು ಸೀಟುಗಳನ್ನು ತಂದುಕೊಟ್ಟ ರಾಜ್ಯ ಆಂಧ್ರ ಪ್ರದೇಶ. ಆದರೆ ಅಲ್ಲಿ ಕಾಂಗ್ರೆಸ್ಸಿಗೆ ಮೊದಲಿಗಿಂತ ಶೇ. ಎರಡರಷ್ಟು ಕಡಿಮೆ ಓಟುಗಳು ದೊರೆತಿವೆ. ಆದರೆ ಆ ರಾಜ್ಯದಲ್ಲಿ 2004ರ ಚುನಾವಣೆಯಲ್ಲಿ ಶೇ.41.54ರಷ್ಟು ಮತಗಳನ್ನು ಪಡೆದರೂ ಕೇವಲ 29 ಸೀಟುಗಳನ್ನು ಪಡೆದಿದ್ದ ಕಾಂಗ್ರೆಸ್ ಪಕ್ಷ ಈ ಬಾರಿ ಶೇ.38.95ರಷ್ಟು ಮತಗಳನ್ನು ಮಾತ್ರ ಪಡೆದರೂ 33 ಸೀಟುಗಳನ್ನು ಪಡೆದುಕೊಂಡಿದೆ. ಕಾಂಗ್ರೆಸ್ಸು ಮತ್ತು ಅದರ ಮಿತ್ರ ಪಕ್ಷಗಳು ಅತಿ ಹೆಚ್ಚು ಓಟು ಮತ್ತು ಸೀಟುಗಳನ್ನು ಪಡೆದ ರಾಜ್ಯಗಳಾದ ಪ.ಬಂಗಾಳ, ಕೇರಳ ಮತ್ತು ಉತ್ತರ ಪ್ರದೇಶಗಳಲ್ಲಿ ಮತದಾರರು ಓಟು ಹಾಕಿದ್ದು ಅಲ್ಲಿ ಅಧಿಕಾರದಲ್ಲಿದ್ದ ಪಕ್ಷಗಳ ವಿರುದ್ಧವೇ. ಅದರ ಲಾಭ ಕಾಂಗ್ರೆಸ್ಸಿಗಾಗಿದೆ ಅಷ್ಟೇ!


ಎಲ್ಲಕ್ಕಿಂತ ಹೆಚ್ಚಾಗಿ 2004ರ ಚುನಾವಣೆಯಲ್ಲಿ ಶೇ.50ರಷ್ಟು ಅಭ್ಯರ್ಥಿಗಳು ಸಂಸತ್ತಿಗೆ ಪುನರಾಯ್ಕೆ ಆಗಿದ್ದರೆ ಈ ಬಾರಿ ಶೇ.33ರಷ್ಟು ಸಂಸದರು ಮಾತ್ರ ಪುನರಾಯ್ಕೆ ಆಗಿದ್ದಾರೆ. ಅಂದರೆ ಮೊದಲಿಗಿಂತಲೂ ಆಡಳಿತ ವಿರೋಧಿ ಮನೋಭಾವ ಜಾಸ್ತಿಯಾಗಿದೆಯೇ ವಿನಃ ಕಡಿಮೆಯಾಗಿಲ್ಲ. ಆದರೆ ಅದು ವ್ಯಕ್ತವಾಗಿರುವ ರೀತಿ ಭಿನ್ನವಾಗಿದೆ ಅಷ್ಟೆ. ಈ ಆಡಳಿತ ವಿರೋಧಿ ಮನೋಭಾವ ಹಿಂದೆ ಗೆದ್ದಿದ್ದ ಅಭ್ಯರ್ಥಿಯ ವಿರುದ್ಧ, ರಾಜ್ಯದಲ್ಲಿ ಅಧಿಕಾರಾರೂಢವಾಗಿರುವ ಪಕ್ಷದ ವಿರುದ್ಧ ಹಾಗೂ ಕೆಲವೊಮ್ಮೆ ಕೇಂದ್ರದಲ್ಲಿ ಅಧಿಕಾರ ನಡೆಸಿದ ಪಕ್ಷದ ವಿರುದ್ಧವೂ ಚಲಾವಣೆಯಾಗಿದೆ. ಪಕ್ಷದ ವರ್ಚಸ್ಸಿಗಿಂತ ಹೆಚ್ಚಿನ ವರ್ಚಸ್ಸುಳ್ಳವರು ಮತಗಳನ್ನು ಪಡೆದುಕೊಂಡಿದ್ದಾರೆ. ಆದರೆ ಇದು ಅಪವಾದವೇ ವಿನಃ ಸಾರ್ವತ್ರಿಕ ಸತ್ಯವಲ್ಲ.

ಇನ್ನೂ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಅಧಿಕಾರದಲ್ಲಿದ್ದ ಮಹಾರಾಷ್ಟ್ರ, ತಮಿಳುನಾಡು ಮತ್ತು ಹರ್‍ಯಾಣಗಳು. ಇಲ್ಲಿ ಕಾಂಗ್ರೆಸ್‌ಗೆ ಮೊದಲಿನಷ್ಟೆ ಅಥವಾ ಅದಕ್ಕಿಂತ ಕಡಿಮೆ ಮತಗಳು ಬಿದ್ದರೂ ಸಹ ಪ್ರತಿಪಕ್ಷಗಳಲ್ಲಿ ಒಗ್ಗಟ್ಟಿಲ್ಲದ ಕಾರಣ ಕಾಂಗ್ರೆಸ್‌ಗೆ ಲಾಭವಾಗಿದೆ. ಮಾತ್ರವಲ್ಲ, ಕೆಲವೆಡೆ ಮೊದಲಿಗಿಂತಲೂ ಹೆಚ್ಚಿನ ಸೀಟುಗಳನ್ನೂ ಪಡೆದಿದೆ. ಬಿಜೆಪಿಗೆ ಕರ್ನಾಟಕ ಮತ್ತು ಕಾಂಗ್ರೆಸ್ಸಿಗೆ ರಾಜಸ್ಥಾನದಂಥ ಕೆಲವು ಅಪವಾದಗಳನ್ನು ಬಿಟ್ಟರೆ ಬೇರೆಲ್ಲಾ ಕಡೆ ಆಡಳಿತ ವಿರೋಧಿ ಅಲೆಯೇ ಈ ಬಾರಿಯೂ ಮುಂದುವರೆದಿದೆ. ಇಲ್ಲೂ ಸಹ ಅಸೆಂಬ್ಲಿ ಚುನಾವಣೆಗಳು ಇತ್ತೀಚೆಗೆ ನಡೆದಿದ್ದು ಅಧಿಕಾರದಲ್ಲಿದ್ದ ಪಕ್ಷಗಳು ಆಗತಾನೆ ಕಿತ್ತೊಗೆಯಲ್ಪಟ್ಟು ಅದೇ ಮನಸ್ಥಿತಿಯೇ ಈ ಲೋಕಸಭಾ ಚುನಾವಣೆಗಳಲ್ಲೂ ಕಂಡುಬಂದಿದೆ.


ದೆಹಲಿ, ಬಿಹಾರ, ಒರಿಸ್ಸಾ ಮತ್ತು ಕರ್ನಾಟಕದಂಥ ಕಡೆಗಳಲ್ಲಿ ಮೊದಲಿಗಿಂತ ಹೆಚ್ಚಿನ ಮತಶೇರುಗಳನ್ನು ಆಡಳಿತಾರೂಢ ಪಕ್ಷ ಪಡೆದುಕೊಂಡಿರುವುದು ನಿಜ. ಆದರೆ ಇಲ್ಲಿ ಆಡಳಿತದಂಥ ಸೆಕ್ಯುಲಾರ್ ವಿಷಯಗಳಿಗಿಂತ ಧಾರ್ಮಿಕ ವಿಷಯಗಳೇ ಹೆಚ್ಚು ನಿರ್ಣಾಯಕವಾದ ಪಾತ್ರ ವಹಿಸಿವೆ. ಹೀಗಾಗಿ ಆಡಳಿತ ವಿರೋಧಿ ಅಲೆ ಇರಲಿಲ್ಲವೆಂಬುದು ಅಥವಾ ಕಾಂಗ್ರೆಸ್‌ನ ಸಕಾರಾತ್ಮಕ ಆಡಳಿತಕ್ಕೆ ಸಿಕ್ಕ ಓಟೆಂದು ವಿಶ್ಲೇಷಿಸುವುದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ಸಂಸದೀಯ ಪ್ರಜಾತಂತ್ರದಲ್ಲಿ ಜನತೆ ತನ್ನ ಆಕ್ರೋಶವನ್ನು ತೋರಿಸುವುದೇ ಆಡಳಿತಾರೂಢ ಪಕ್ಷವನ್ನು ಕಿತ್ತೊಗೆಯುವ ಮೂಲಕ. ಆದರೆ ಭಾರತದ ಸಂಸದೀಯ ಪದ್ಧತಿ ಅದಕ್ಕೂ ಅವಕಾಶವಿಲ್ಲದಂತೆ ಮಾಡಿದೆ. ●

ಕಾಂಗ್ರೆಸ್‌ನ ಗೆಲುವಲ್ಲಿ ಬಿಜೆಪಿಯ ಸೋಲಿಲ್ಲ

ಬಿಜೆಪಿಯ ಕೋಮುವಾದಿ ಅಜೆಂಡಾ ಗರಿಷ್ಠ ಮಟ್ಟವನ್ನು ಮುಟ್ಟಿದೆ. ಹೀಗಾಗಿ ಈ ಫಲಿತಾಂಶ ಬಿಜೆಪಿಯ ಕೋಮುವಾದದ ವಿರುದ್ಧ ಮತ್ತು ಕಾಂಗ್ರೆಸ್ ಸರ್ಕಾರದ ಪರವಾದ ಜನಾದೇಶವೆಂದೂ ಸಹ ವಿಶ್ಲೇಷಿಸಲಾಗುತ್ತಿದೆ. ಇದರ ಹಿಂದೆ ಬಿಜೆಪಿಯ ಚುನಾವಣಾ ಸೋಲನ್ನು ಅದರ ಸಿದ್ಧಾಂತದ ಸೋಲೆಂದು ಸಮೀಕರಿಸುವ ಆತುರವಿದೆ. ಆದರೆ ವಾಸ್ತವವೆಂದರೆ ಕಾಂಗ್ರೆಸ್‌ನ ಜಯದಲ್ಲಿ ಬಿಜೆಪಿಯ ಚುನಾವಣಾ ಸೋಲೂ ಇಲ್ಲ, ಸಿದ್ಧಾಂತದ ಸೋಲೂ ಇಲ್ಲ. ವಾಸ್ತವವಾಗಿ ಈ ಚುನಾವಣೆಯಲ್ಲಿ ಬಿಜೆಪಿ 22 ಸೀಟುಗಳನ್ನು ಮಾತ್ರ ಕಳೆದುಕೊಂಡರೆ ಎಡಪಕ್ಷಗಳು 24 ಸೀಟುಗಳನ್ನು ಕಳೆದುಕೊಂಡಿದೆ. ಕಾಂಗ್ರೆಸ್ ಕಳೆದ ಬಾರಿಗಿಂತ 60 ಸೀಟುಗಳನ್ನು ಮತ್ತು ಶೇ.2ರಷ್ಟು ಹೆಚ್ಚಿನ ಮತಗಳನ್ನು ಪಡೆದುಕೊಂಡಿರುವುದು ಪ್ರಧಾನವಾಗಿ ಎಡಪಕ್ಷಗಳಿಂದ ಮತ್ತು ಜೆಡಿಎಸ್, ಎಸ್ಪಿ, ಬಿಎಸ್ಪಿಯಂಥ ಜಾತ್ಯತೀತ ಎಂದು ಹೇಳಿಕೊಳ್ಳುವ ಪಕ್ಷಗಳಿಂದ.



ಹಿಮಾಚಲ ಪ್ರದೇಶ, ಕರ್ನಾಟಕವನ್ನು ಬಿಟ್ಟರೆ ದೇಶದ ಬಹುಪಾಲು ಕಡೆ ಬಿಜೆಪಿಯ ಓಟು ಶೇರು ಕಡಿಮೆಯಾಗಿದೆ. ರಾಜಸ್ಥಾನ, ಮಧ್ಯಪ್ರದೇಶಗಳಂಥ ರಾಜ್ಯಗಳನ್ನು ಬಿಟ್ಟರೆ ಮಿಕ್ಕ ಕಡೆ ಅದರ ಓಟು ಶೇರಿನಲ್ಲಿ ಅಂಥ ದೊಡ್ಡ ಕುಸಿತವಾಗಿಲ್ಲ. ಇಲ್ಲೂ ಕೂಡಾ ಅಧಿಕಾರಾರೂಢ ಬಿಜೆಪಿ ಪಕ್ಷದ ವಿರುದ್ಧ ಎದ್ದಿದ್ದ ಆಡಳಿತ ವಿರೋಧಿ ಅಲೆ ಮುಂದುವರೆದಿದ್ದರಿಂದ ಅದರ ಓಟು ಪ್ರಮಾಣದಲ್ಲಿ ಕುಸಿತ ಉಂಟಾಯಿತೇ ವಿನಃ ಅದು ಬಿಜೆಪಿಯ ಸಿದ್ಧಾಂತದ ವಿರುದ್ಧ ಓಟು ಹಾಕಿರಲಿಲ್ಲ.



ಬದಲಿಗೆ ಎಲ್ಲೆಲ್ಲಿ ಬಿಜೆಪಿ ಉಗ್ರ ಹಿಂದೂತ್ವ ಪ್ರತಿಪಾದಿಸುತ್ತಿದೆಯೋ (ಗುಜರಾತ್, ಕರ್ನಾಟಕ, ಫಿಲಿಬಿಟ್) ಅಲ್ಲೆಲ್ಲಾ ಬಿಜೆಪಿ ಚುನಾವಣಾ ಜಯವನ್ನು ಪಡೆದಿದೆ. ಉದಾಹರಣೆಗೆ ಮಂಗಳೂರಿನಲ್ಲಿ ಜನಾರ್ದನ ಪೂಜಾರಿಯವರ ವಿರುದ್ಧ ನಿಂತಿದ್ದು ಕಟೀಲ್ ಎಂಬ ಸಂಘ ಪರಿವಾರದ ಹೆಸರಿಲ್ಲದ ಬಾಲಕ. ಅಲ್ಲಿ ಕಾಂಗ್ರೆಸ್‌ಗೆ 4.58 ಲಕ್ಷ ಓಟು ದೊರೆತರೆ, ಸಿಪಿಎಂ ಪಕ್ಷಕ್ಕೆ 18000 ಓಟುಗಳು ಮಾತ್ರ ದೊರೆತವು. ಆದರೆ ಬಿಜೆಪಿ ಅಭ್ಯರ್ಥಿಗೆ ಸಿಕ್ಕಿದ್ದು 4.99 ಲಕ್ಷ ಓಟುಗಳು. ಇದಕ್ಕೆ ಮುಖ್ಯ ಕಾರಣ ಜಾತಿ ವರ್ಗಗಳನ್ನು ಮೀರಿ ಹಿಂದೂತ್ವದ ಓಟುಗಳು ಧ್ರುವೀಕರಣಗೊಂಡಿವೆ. ಅದರಲ್ಲೂ ವಿಶೇಷವಾಗಿ ಪೂಜಾರಿಯವರು ಸೇರಿರುವ ಬಿಲ್ಲವ ಸಮುದಾಯದ ಓಟುಗಳೇ ಹೆಚ್ಚು ಹಿಂದೂ ವೀಕರಣಗೊಂಡಿವೆ. ಹೀಗಾಗಿಯೇ ಶಿವಮೊಗ್ಗದಲ್ಲೂ ಬಂಗಾರಪ್ಪನವರೂ ಸೋಲಬೇಕಾಯಿತು. ಅದೇ ರೀತಿ ಮುಸ್ಲಿಮರ ವಿರುದ್ಧ ಕೆಂಡಕಾರಿದ ವರುಣ್ ಗಾಂಧಿಗೆ ಫಿಲಿಬಿಟ್ ಕ್ಷೇತ್ರದಲ್ಲಿ 4.19 ಲಕ್ಷ ಮತಗಳು ಬಿದ್ದವು. ಆತನ ವಿರುದ್ಧ ಎಸ್ಪಿ, ಬಿಎಸ್ಪಿ ಮತ್ತು ಕಾಂಗ್ರೆಸ್ಸಿಗೆ ಒಟ್ಟಾರೆಯಾಗಿ ಸಿಕ್ಕ ಮತಗಳು ಕೇವಲ 3.6ಲಕ್ಷಗಳು ಮಾತ್ರ.

ಆದರೆ ಗುಜರಾತಿನಲ್ಲಿ ಮೋದಿತ್ವದ ಜಾದೂ ಕಡಿಮೆಯಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಅಲ್ಲಿ ಬಿಜೆಪಿಗೆ ಮೊದಲಿಗಿಂತ ಒಂದು ಸೀಟು ಹೆಚ್ಚು ಸಿಕ್ಕಿದೆಯಾದರೂ ವೋಟುಶೇರು 0.4ರಷ್ಟು ಕಡಿಮೆಯಾಗಿದೆ. ಆದರೆ ಇದನ್ನು ಬಿಜೆಪಿಯ ಸಿದ್ಧಾಂತದ ಸೋಲುತ್ತಿದೆ ಎಂದು ವಿಶ್ಲೇಷಿಸಲು ಸಾಧ್ಯವೇ?

ಭಾರತದ ಫ್ಯಾಸಿಸಮ್ಮು ಸಹ ಭಾರತೀಯ ಸಂಸದೀಯ ತರ್ಕಕ್ಕೆ ಒಳಪಟ್ಟು ಬೆಳೆಯುತ್ತಿದೆ. ಈ ಸಂಸದೀಯ ತರ್ಕದಲ್ಲಿ ಆಗಾಗ ಚುನಾವಣಾ ಸೋಲುಗಳು ಸಂಭವಿಸಬಹುದಾದರೂ ಅದೂ ಅವರ ಸಿದ್ಧಾಂತದ ಸೋಲಾಗುವುದಿಲ್ಲ. ಏಕೆಂದರೆ ಮೇಲೆ ವಿಶ್ಲೇಷಿಸಿದ ರೀತಿಯಲ್ಲಿ ಒಂದು ಚುನಾವಣೆಯಲ್ಲಿ ತಾತ್ಕಾಲಿಕವಾಗಿ ಬಿಜೆಪಿ ಒಂದು ರಾಜ್ಯದಲ್ಲಿ ಸರ್ಕಾರ ರಚಿಸಲಾಗದೆ ಹೋಗಬಹುದು. ಆದರೆ ಪರ್ಯಾಯವೇ ಇಲ್ಲದ ಭಾರತೀಯ ಪ್ರಜಾತಂತ್ರದಲ್ಲಿ ಬಿಜೆಪಿ ಪಕ್ಷವೇ ಮರುಚುನಾವಣೆಯಲ್ಲಿ ಆಡಳಿತ ವಿರೋಧಿ ಅಲೆಯಲ್ಲಿ ಅಧಿಕಾರಕ್ಕೆ ಬರುತ್ತದೆ. ಅಧಿಕಾರಕ್ಕೆ ಬಂದನಂತರ ಮೊದಲಿಗಿಂತಲೂ ಹೆಚ್ಚಿನ ರೀತಿಯಲ್ಲಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುತ್ತದೆ ಮತ್ತು ಹಳೆಯ ನೆಲೆಯನ್ನು ಸದೃಢೀಕರಿಸಿಕೊಳ್ಳುತ್ತದೆ.


ಕಳೆದ ಹಲವು ಚುನಾವಣೆಗಳಿಂದ ಬಿಜೆಪಿಯ ಓಟು ಶೇರು ಶೇ.30ನ್ನು ಮೀರುತ್ತಿಲ್ಲ ಮತ್ತು ಈ ಬಾರಿ ಅದು ಶೇ.20ಕ್ಕೂ ಕಡಿಮೆಯಾಗಿದೆ ನಿಜ. ಆದರೆ ಮತ್ತೆ ಅಧಿಕಾರಕ್ಕೆ ಬಂದ ಕಡೆಗಳಲ್ಲೆಲ್ಲಾ ಹಿಂದೂ ಓಟ್‌ಬ್ಯಾಂಕನ್ನು ಸೃಷ್ಟಿಸಿಕೊಳ್ಳಲು ಯತ್ನಿಸುತ್ತಿದೆ. ಆದ್ದರಿಂದಲೇ ಒಂದು ಜನಪರ ಪರ್ಯಾಯವೇ ಇಲ್ಲದ ಭಾರತದ ಸಂಸದೀಯ ಪ್ರಜಾತಂತ್ರದಲ್ಲಿ ಬಿಜೆಪಿಯ ಚುನಾವಣಾ ಸೋಲನ್ನು ಬಿಜೆಪಿಯ ಸಿದ್ಧಾಂತದ ಸೋಲೆಂದು ಸಮೀಕರಿಸಲು ಸಾಧ್ಯವೇ ಇಲ್ಲ. ●

ಕುಸಿದದ್ದು ಕೆಂಪುಕೋಟೆಯೇ?



ಈ ಬಾರಿಯ ಚುನಾವಣೆಯ ಅತಿ ದೊಡ್ಡ ಆಶ್ಚರ್ಯ ಪ.ಬಂಗಾಳದಲ್ಲೇ ಎಡಪಕ್ಷಗಳು ಅದರಲ್ಲೂ ಸಿಪಿಎಂ ಪಕ್ಷ ಹೀನಾಯ ಸೋಲನ್ನು ಅನುಭವಿಸಿರುವುದು. ಕಳೆದ ಬಾರಿ ಒಟ್ಟಾರೆಯಾಗಿ 61 ಸೀಟುಗಳನ್ನು ಪಡೆದಿದ್ದ ಎಡಪಕ್ಷಗಳು ಈ ಬಾರಿ ಪಡೆದುಕೊಂಡಿರುವುದು ಕೇವಲ 30 ಸೀಟುಗಳನ್ನು ಮಾತ್ರ. ಅದರಲ್ಲೂ ಸಿಪಿಎಂ ಪಕ್ಷ ಮೊದಲಿಗಿಂತ 24 ಸೀಟುಗಳನ್ನು ಮತ್ತು ಶೇ.6ರಷ್ಟು ಮತಬೆಂಬಲವನ್ನೂ ಕಳೆದುಕೊಂಡಿದೆ. ಕೇರಳದಲ್ಲಿ ಪ್ರತಿ ಎರಡನೇ ಬಾರಿ ಎಡಪಕ್ಷಗಳು ಸೋಲುವುದು ಪದ್ಧತಿಯೇ ಆಗಿರುವುದರಿಂದ ಅದು ಅಂಥ ಅಚ್ಚರಿಯಲ್ಲ. ಆದರೆ ಪ. ಬಂಗಾಳದಲ್ಲಿ ಕಳೆದ 35 ವರ್ಷಗಳಲ್ಲಿ ಪ್ರತಿಪಕ್ಷಗಳಿಗಿಂತ ಶೇ.10ರಷ್ಟು ಹೆಚ್ಚಿನ ಮತಗಳಿಂದ ಗೆಲ್ಲುತ್ತಾ ಅಧಿಕಾರ ನಡೆಸುತ್ತಲೇ ಬಂದಿದ್ದ ಸಿಪಿಎಂ ನೇತೃತ್ವದ ಎಡಪಕ್ಷಗಳಿಗಿಂತ ಪ್ರಥಮ ಬಾರಿಗೆ ಪ್ರತಿಪಕ್ಷಗಳು ಶೇ.2ರಷ್ಟು ಹೆಚ್ಚಿನ ಮತಗಳನ್ನು ಪಡೆದು 25ಕ್ಕೂ ಹೆಚ್ಚು ಸೀಟುಗಳನ್ನು ಪಡೆದುಕೊಂಡಿವೆ. ಪ. ಬಂಗಾಳದಲ್ಲಿ ಸರ್ವಾಧಿಕಾರವನ್ನೇ ನಡೆಸಿದ ಸಿಪಿಎಂ ಪಕ್ಷದ ಓಟು ಶೇರು ಶೇ.38ರಿಂದ ಶೇ.32ಕ್ಕೆ ಕುಸಿದಿದೆ.

ಈ ಕುಸಿತವನ್ನು ಎಡಪಂಥೀಯತೆಯ ವಿರುದ್ಧ ಜನತೆ ನೀಡಿದ ಜನಾದೇಶವೆಂದು ವಿವರಿಸಲು ಸಾಧ್ಯವೇ? ಖಂಡಿತಾ ಇಲ್ಲ. ವಾಸ್ತವವಾಗಿ ಸಿಂಗೂರು ಮತ್ತು ನಂದಿಗ್ರಾಮಗಳ ಜನತೆಯ ಹೋರಾಟದಲ್ಲಿ ವ್ಯಕ್ತವಾಗಿರುವಂತೆ ಬಂಗಾಳದ ಜನ ಹೋರಾಟ ನಡೆಸಿದ್ದು ಎಡಪಕ್ಷಗಳು ಜಾರಿಗೆ ತರುತ್ತಿದ್ದ ಕಾಂಗ್ರೆಸ್ಸಿನ ಮತ್ತು ಬಿಜೆಪಿಯ ಆರ್ಥಿಕ ನೀತಿಗಳ ವಿರುದ್ಧವೇ. ಆದ್ದರಿಂದಲೇ ಸಿಂಗೂರು ಮತ್ತು ನಂದಿಗ್ರಾಮ ಇರುವ ಕ್ಷೇತ್ರಗಳಲ್ಲಿ ಸಿಪಿಎಂನ ವಿರುದ್ಧ ಶೇ.38ಕ್ಕೂ ಹೆಚ್ಚಿನ ಮತದಾನವಾಗಿದೆ. 15ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸಿಪಿಎಂನ ಮತಪ್ರಮಾಣ ಶೇ.15ಕ್ಕಿಂತಲೂ ಹೆಚ್ಚಿಗೆ ಕುಸಿದಿದೆ. ಹೀಗಾಗಿ ಬಂಗಾಳದ ಜನ ಓಟು ಚಲಾಯಿಸಿದ್ದು ಕೆಂಪು ಮುಸುಕಿನಲ್ಲಿದ್ದ ಕಾಂಗ್ರೆಸ್ ಮತ್ತು ಬಿಜೆಪಿಯ ಆರ್ಥಿಕ ನೀತಿಗಳ ವಿರುದ್ಧವೇ ವಿನಾ ಎಡಪಂಥೀಯತೆಯ ವಿರುದ್ಧವಲ್ಲ. ಆದ್ದರಿಂದಲೇ ಪ.ಬಂಗಾಳದಲ್ಲಿ ಸಿಪಿಎಂ ಮತ್ತು ಕಾಂಗ್ರೆಸ್ ನಡುವೆ ... ಆಗಿತ್ತು. ಆದರೆ ಪರ್ಯಾಯವಿಲ್ಲದ ಪ್ರಜಾತಂತ್ರದಲ್ಲಿ ... ವಿರುದ್ಧ ನೀಡಿದ ಓಟುಗಳು ... ಇನ್ನೂ ತೀವ್ರಗತಿಯಲ್ಲಿ ಜಾರಿಗೆ ತರುವವರನ್ನೇ ಅಧಿಕಾರಕ್ಕೆ ತಂದಿವೆ. ●




ಗಣಿರೆಡ್ಡಿ-ಕಾಂಗ್ರೆಸ್ ಭಾಯಿ ಭಾಯಿ!

ಯಡ್ಡಿಗೀಗ ಚಳಿಜ್ವರ

ಇದೆಂಥ ವಿಚಿತ್ರ ನೋಡಿ. ಮೊನ್ನೆ ಮೊನ್ನೆ ತನಕ ಆಪರೇಷನ್ ಕಮಲದ ಹೆಸರಿನಲ್ಲಿ ಗಣಿಲೂಟಯಿಂದ ಗೆಬರಿಕೊಂಡಿದ್ದ ದುಡ್ಡನ್ನೆಲ್ಲಾ ಸುರಿದು ಕಾಂಗ್ರೆಸ್-ಜೆಡಿಎಸ್‌ಗಳ ರಾಜಕಾರಣಿಗಳನ್ನು ಮಾರ್ಕೆಟ್‌ನಲ್ಲಿ ತರಕಾರಿ ಕೊಳ್ಳುವಂತೆ ಗಣಿ ರೆಡ್ಡಿಗಳು ಖರೀದಿಸಿದ್ದರು. ರಾಜ್ಯ ಬಜೆಪಿಗೆ ಗಣಿ ರೆಡ್ಡಿಗಳೇ ಆರ್ಥಿಕ ಆಧಾರ ಸ್ತಂಭಗಳಾಗಿದ್ದರು. ಕಂಡಕಂಡಲ್ಲಿ ಕಾಂಗ್ರೆಸ್-ಜೆಡಿಎಸ್ ಮೇಲೆ ಹರಿಹಾಯುತ್ತಿದ್ದರು. ಕಾಂಗ್ರೆಸ್‌ನೊಂದಿಗೆ ಆ ಪಾಟ ವೈರತ್ವ ಕಟ್ಟಿಕೊಂಡಿದ್ದ ರೆಡ್ಡಿಗಳನ್ನು ಈಗ ಅದೇ ಕಾಂಗ್ರೆಸ್ ಆಶ್ರಯ ಕೊಟ್ಟು ರಕ್ಷಿಸಿದೆ. ನಂಬಲು ತುಸು ಕಷ್ಟವಾದರೂ ನಂಬಬೇಕಿರುವ ಸತ್ಯ ಇದು.


ಅಸಲಿಗೆ ರಾಜ್ಯದಲ್ಲಿ ಬಜೆಪಿ ಈ ಪಾಟ ನೆಲೆಯೂರಲು ರೆಡ್ಡಿಗಳ ದುಡ್ಡೇ ಪ್ರಧಾನ ಕಾರಣ. ಏನಾದರೂ ಮಾಡಿ ಅದೊಂದನ್ನು ತಪ್ಪಿಸಿಬಿಟ್ಟರೆ ರಾಜ್ಯದಲ್ಲಿ ಬಜೆಪಿ ಅರ್ಧ ನೆಲಕಚ್ಚುತ್ತದೆ ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ. ಈ ಕಾರಣಕ್ಕಾಗಿಯೇ ಈಗ ರೆಡ್ಡಿಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳಲು ಕಾಂಗ್ರೆಸ್ ತಂತ್ರ ರೂಪಿಸಿದೆ. ಇದರ ಪರಿಣಾಮವೇ ಗಣಿರೆಡ್ಡಿಗಳ ಕುತ್ತಿಗೆ ಬಿಗಿಯುತ್ತಿದ್ದ ಕರ್ನಾಟಕ-ಆಂಧ್ರಪ್ರದೇಶ ಅಂತರರಾಜ್ಯ ಜಂಟಿ ಗಣಿ ಸಮೀಕ್ಷೆಯನ್ನು ಮೂಲೆಗೆ ತಳ್ಳಲಾಗಿದೆ; ರೆಡ್ಡಿಗಳು ಒಂದಿಷ್ಟು ಉಸಿರಾಡುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಸಚಿವರಾದ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ, ಬಿ. ಶ್ರೀರಾಮುಲು ಒಡೆತನದ ಓಬಳಾಪುರಂ ಮೈನಿಂಗ್ ಕಂಪನಿ ಬಳ್ಳಾರಿ ಅರಣ್ಯ ವಲಯದಲ್ಲಿ ದೊಡ್ಡ ಮಟ್ಟದಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದೆ. ತಮ್ಮ ಗಣಿ ಲೂಟಿಗೆ ಅನುಕೂಲವಾಗುವಂತೆ ಕರ್ನಾಟಕದ ನಲ್ವತ್ತು ಎಕರೆ ಜಮೀನನ್ನು ಆಂಧ್ರ ಪ್ರದೇಶವೆಂಬಂತೆ ತೋರಿಸಿ ಇಡೀ ಗಡಿ ರೇಖೆಯನ್ನೇ ತಿದ್ದಲಾಗಿದೆ. ಇದನ್ನು ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರೂ ಕೂಡ ತಮ್ಮ ವರದಿಯಲ್ಲಿ ಬಹಿರಂಗಪಡಿಸಿದ್ದರು. ಆದರೆ ಗಣಿರೆಡ್ಡಿಗಳಿಗೆ ದುಡ್ಡಿನ ಅಮಲೇರಿತ್ತು. ಅಧಿಕಾರ, ಹಣ ಇದ್ದರೆ ಏನು ಮಾಡಿದರೂ ಯಾರೂ ಕೇಳುವುದಿಲ್ಲ ಎಂದು ಮೆರೆಯುತ್ತಿದ್ದರು. ಆದರೆ, ಅವರ ಲೆಕ್ಕಾಚಾರ ತಲೆಕೆಳಗಾಗಿ ಕೊನೆಗೂ ಈ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯ ಸತ್ಯಾಂಶ ತಿಳಿಯಲು ಆಂಧ್ರ-ಕರ್ನಾಟಕ ರಾಜ್ಯಗಳು ಜಂಟಿ ಸಮೀಕ್ಷೆ ನಡೆಸಿ ಜೂನ್ ಆರರೊಳಗೆ ವರದಿ ನೀಡುವಂತೆ ಆದೇಶಿಸಿತ್ತು. ಹೀಗಾಗಿ ಇದೇ ತಿಂಗಳ 27ರಿಂದ 30ರ ಹೊತ್ತಿಗೆ ಎರಡೂ ರಾಜ್ಯಗಳ ಅಧಿಕಾರಿಗಳ ತಂಡ ಕೇಂದ್ರ ಸರ್ಕಾರದ ಅಧಿಕಾರಿಗಳ ನೇತೃತ್ವದಲ್ಲಿ ಸಮೀಕ್ಷೆ ನಡೆಸಬೇಕಾಗಿತ್ತು.



ಇದಕ್ಕೆ ಪೂರ್ವಭಾವಿಯಾಗಿ ಹೊಸಪೇಟೆ ಸಮೀಪದ ಗುಂಡಾ ಅರಣ್ಯದ ಪ್ರವಾಸಿ ಮಂದಿರದಲ್ಲಿ ಮೊನ್ನೆ ಸೋಮವಾರ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳ ಸಭೆ ಕರೆಯಲಾಗಿತ್ತು. ಆದರೆ ಸಭೆಗೆ ಈ ಸಮೀಕ್ಷೆಯ ನೇತೃತ್ವ ವಹಿಸಬೇಕಾಗಿದ್ದ ಭಾರತೀಯ ಸರ್ವೆ ಇಲಾಖೆಯ ಅಧಿಕಾರಿಗಳು ಬರಲೇ ಇಲ್ಲ. ಹೀಗಾಗಿ ಸಭೆ ಯಾವುದೇ ತೀರ್ಮಾನಕ್ಕೆ ಬರದೆ ಮುಕ್ತಾಯಗೊಂಡಿದೆ. ನಡೆಯಬೇಕಾಗಿದ್ದ ಜಂಟಿ ಸಮೀಕ್ಷೆ ನೆನೆಗುದಿಗೆ ಬಿದ್ದಿದೆ. ಇದರಿಂದಾಗಿ ರೆಡ್ಡಿಗಳ ಕುತ್ತಿಗೆಗೆ ಬಿಗಿದಿದ್ದ ಹಗ್ಗ ಒಂದಿಷ್ಟು ಸಡಿಲವಾದಂತಾಗಿದೆ.

ಈ ಸಭೆಗೆ ಭಾರತೀಯ ಸರ್ವೆ ಇಲಾಖೆಯ ಮತ್ತು ಸಂಬಂಧಿಸಿದ ಇತರೆ ಇಲಾಖೆಗಳ ಹಿರಿಯ ಅಧಿಕಾರಿಗಳು ಏಕೆ ಬರಲಿಲ್ಲ? ಹೈಕೋರ್ಟ್ ಆದೇಶ ಉಲ್ಲಂಘಿಸುವ ಧೈರ್ಯ ತೋರಿಸಿದ್ದು ಏಕೆ? ಎಂಬುದನ್ನು ಕೆದಕುತ್ತಾ ಹೋದರೆ ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಮನೆ ಮುಂದೆ ಈ ಎಲ್ಲ ಅಧಿಕಾರಿಗಳು ಕೈಕಟ್ಟಿ ನಿಂತಿರುವುದು ಕಾಣುತ್ತದೆ.



ಒಂದು ಹಂತದಲ್ಲಿ ಈ ಜಂಟಿ ಸಮೀಕ್ಷೆ ನಡೆಸಲು ಭಾರತೀಯ ಸರ್ವೆ ಇಲಾಖೆಯ ಅಧಿಕಾರಿಗಳು ಭಾರಿ ಉತ್ಸಾಹ ತೋರಿಸಿದ್ದರು. ಗಣಿ ನಿರ್ದೇಶನಾಲಯದ ಗಣಿ ನಿಯಂತ್ರಕ ಬಿ.ಪಿ.ಸಿನ್ಹಾ ತಾವೇ ಖುದ್ದಾಗಿ ಎಲ್ಲರಿಗೂ ಈ ಸಭೆಗೆ ಹಾಜರಾಗಲೇಬೇಕೆಂದು ಸೂಚಿಸಿದ್ದರು. ಇದಕ್ಕೆ ಮೀನಾಮೇಷ ಎಣಿಸುತ್ತಿದ್ದ ರಾಜ್ಯ ಅರಣ್ಯ ಮತ್ತು ಗಣಿ ಇಲಾಖೆಯ ಉನ್ನತಾಧಿಕಾರಿಗಳನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡಿದ್ದರು. ಇಷ್ಟೆಲ್ಲಾ ನಡೆದರೂ ಕೊನೆಗೆ ತಾವೂ ಈ ಸಭೆಯಲ್ಲಿ ಭಾಗವಹಿಸಲಿಲ್ಲ, ಇಲಾಖೆಯ ಅಧಿಕಾರಿಗಳನ್ನೂ ಕಳಿಸಿಕೊಡಲಿಲ್ಲ. ಯಾಕೆ?

ಸೋನಿಯಾ ಫೈಲ್ ತರಿಸಿದ್ದರು!

ಕೋರ್ಟ್ ಆದೇಶದಂತೆ ಸರಿಯಾಗಿ ಸಮೀಕ್ಷೆ ನಡೆದಲ್ಲಿ ಗಣಿಧಣಿಗಳು ಮಾಡಿರುವ ಅಕ್ರಮಗಳೆಲ್ಲಾ ಬಯಲಿಗೆ ಬರಲಿತ್ತು. ಇದರಿಂದ ಆತಂಕಗೊಂಡ ರೆಡ್ಡಿ ಬ್ರದರ್ಸ್ ಸೀದಾ ತಮ್ಮ ಮಿತ್ರ, ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಕಾಲಿಗೆ ಬಿದ್ದಿದ್ದರು. ರೆಡ್ಡಿಗಳ ಗಣಿ ಲೂಟಿಯಲ್ಲಿ ಪಾಲುದಾರರಾಗಿರುವ ರಾಜಶೇಖರ ರೆಡ್ಡಿ, ಸೀದಾ ಈ ವಿಷಯವನ್ನು ಕಾಂಗ್ರೆಸ್ ಹೈಕಮಾಂಡ್ ಬಳಿಗೆ ಕೊಂಡೊಯ್ದರು. 'ಈಗ ಅವರಿಗೆ ನೆರವಾದರೆ, ಮುಂದೆ ಕರ್ನಾಟಕಲ್ಲಿ ಪಕ್ಷಕ್ಕೆ ಆಸ್ತಿಯಾಗಲಿದ್ದಾರೆ' ಎಂದು ಕಿವಿ ಕಚ್ಚಿದರು.

ಏನಿದು ಗಲಾಟೆ ನೋಡೋಣ ಎಂದು ಸೋನಿಯಾಗಾಂಧಿ ಈ ಹಗರಣದ ಫೈಲನ್ನು ತರಿಸಿಕೊಂಡರು. ಆದರೆ, ತಾವು ಬಳ್ಳಾರಿಯಲ್ಲಿ ಸ್ಪರ್ಧಿಸಿದ್ದಾಗ ತಮ್ಮ ವಿರುದ್ಧ ಕೆಲಸ ಮಾಡಿದ್ದ ಈ ಗಣಿಧಣಿಗಳ ಬಗ್ಗೆ ಮೇಡಂಗೆ ಪ್ರೀತಿಯೇನೂ ಉಕ್ಕಲಿಲ್ಲ. ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯೊಂದಿಗೆ ಕರ್ನಾಟಕದ ಸಂಸದರೊಬ್ಬರು ಮತ್ತು ಇಬ್ಬರು ಹಿರಿಯ ರಾಜಕಾರಣಿಗಳು ದನಿಗೂಡಿಸಿ, ಒತ್ತಡ ಹೇರಿದ್ದರಿಂದಾಗಿ ಕೊನೆಗೂ ಸೋನಿಯಾ ಮೇಡಂ 'ನೋಡೋಣ' ಎಂದೇ ಬಿಟ್ಟರು. ಇಷ್ಟೇ ಸಾಕಾಯಿತು ಆಂಧ್ರದ ಸಿಎಂಗೆ, ಕೂಡಲೇ ಭಾರತೀಯ ಸರ್ವೆ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಸದ್ಯ ಸಮೀಕ್ಷೆ ನಡೆಯದಂತೆ ಮಾಡಲು ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಬೇಡಿ ಎಂಬ ಸೂಚನೆ ನೀಡಿದರು. ಇದರಿಂದಾಗಿ ಗಣಿಧಣಿಗಳು ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡುಬಿಟ್ಟರು.

ಮುಂದೇನು ಎಂಬುದು ಈಗ ಗಣಿಧಣಿಗಳಿಗೂ ಗೊತ್ತಿಲ್ಲ. ಒಂದು ವೇಳೆ ಸೋನಿಯಾ ಮೇಡಂ ರಾಜಶೇಖರ ರೆಡ್ಡಿ ಮಾತೂ ಕೇಳದೆ ತಮ್ಮ ಮೇಲೆ ಅಸ್ತ್ರ ಪ್ರಯೋಗಿಸಿದರೆ ಏನು ಮಾಡುವುದು ಎಂದು ಹೆದರಿ ಕಂಗಾಲಾಗಿದ್ದಾರೆ. ಸುಪ್ರೀಂಕೋರ್ಟ್‌ಗೆ ಹೋಗಿ ಒಂದಿಷ್ಟು ದಿನ ಸಮೀಕ್ಷೆ ತಡೆಹಿಡಿಯುವ ಪ್ಲಾನೂ ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರ ಮನಸ್ಸು ಮಾಡದಿದ್ದರೆ ಬಚಾವಾಗುವುದು ಕಷ್ಟ ಎಂಬ ಸತ್ಯ ಗಣಿಧಣಿಗಳಿಗೂ ಅರ್ಥವಾಗಿದೆ.

ಈಗ ಕಾಂಗ್ರೆಸ್ಸನ್ನು ಒಲಿಸಿಕೊಳ್ಳಬೇಕಾದರೆ, ಬಜೆಪಿಯಿಂದ ದೂರ ಸರಿಯಬೇಕು ಎಂಬ ಸರಳ ರಾಜಕೀಯ ಅರ್ಥಮಾಡಿಕೊಂಡಿರುವ ಗಣಿಧಣಿಗಳು ರಾಜ್ಯ ಬಜೆಪಿ ನಾಯಕರ ವಿರುದ್ಧವೇ ಒಳಗೊಳಗೇ ಜಗಳ ತೆಗೆಯಲಾರಂಭಿಸಿದ್ದಾರೆ.

ಚುನಾವಣೆ ಮುಗಿದನಂತರ ನಡೆದ ಮೊದಲ ಶಾಸಕಾಂಗ ಪಕ್ಷದ ಸಭೆಯಲ್ಲಿ ಗಣಿಧಣಿಗಳ ತಂಡ ಭಾಗವಹಿಸಿದ ರೀತಿ ನೋಡಿದರೆ ಎಲ್ಲರಿಗೂ ಅವರ ಮನಸ್ಸಿನಲ್ಲೇನಿದೆ ಎಂಬುದು ಅರ್ಥವಾಗುತ್ತಿತ್ತು. ತಡವಾಗಿ ಈ ಸಭೆಗೆ ಆಗಮಿಸಿದ ಜನಾರ್ದನ ರೆಡ್ಡಿ ಅಂಡ್ ಗ್ಯಾಂಗ್ ಎಲ್ಲರೂ ಒಂದೇ ಕಡೆ ಒಟ್ಟಿಗೆ ಕುಳಿತಿದ್ದರು. ಜಾಸ್ತಿ ಮಾತನಾಡದೆ ಕೊನೆಗೆ ಒಟ್ಟಿಗೇ ಜಾಗ ಖಾಲಿ ಮಾಡಿದ್ದರು. ರಾಜ್ಯ ಬಜೆಪಿ ನಾಯಕತ್ವಕ್ಕೆ ಪರೋಕ್ಷವಾಗಿ ಒಂದು ರೀತಿಯಲ್ಲಿ ಸವಾಲೊಡ್ಡುವಂತಿತ್ತು ಅವರ ವರ್ತನೆ.

ಸಾರಾಂಶದಲ್ಲಿ ರೆಡ್ಡಿಗಳಿಗೀಗ ಬಚಾವಾಗಲು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರದ ಆಶ್ರಯ ಬೇಕೇಬೇಕು. ಅಂದರೆ, ಅವರು ಬಜೆಪಿ ಸಖ್ಯ ತೊರೆಯಲೇಬೇಕು. ಅವರು ಒಬ್ಬೊಬ್ಬರೇ ಪಕ್ಷ ಬಿಡುವ ಜಾಯಮಾನದವರಲ್ಲ. ಇಲ್ಲಿಯತನಕ ತಾವು ದುಡ್ಡು ಸುರಿದು ಗೆಲ್ಲಿಸಿದವರನ್ನು, ಖರೀದಿಸಿದವರನ್ನು ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಜಾಗ ಖಾಲಿ ಮಾಡುತ್ತಾರೆ. ಹಾಗೇನಾದರೂ ಆದರೆ, ಯಡ್ಡಿ ಜೊತೆ ಉಳಿಯೋರು ಶೋಭಾ ಕರಂದ್ಲಾಜೆ ಮಾತ್ರ. ಅದನ್ನೆಲ್ಲಾ ಕಲ್ಪಿಸಿಕೊಂಡೇ ಯಡ್ಡಿಗೀಗ ಚಳಿಜ್ವರ ಶುರುವಾಗಿದೆಯಂತೆ!

● ವರದಿಗಾರ

ರೆಡ್ಡಿ ಪಿತ್ತ ನೆತ್ತಿಗೆ – ಯಡ್ಡಿ ಕುರ್ಚಿ ಗುಂಡಿಗೆ!

ಗಡಿಯಲ್ಲಿ ಗಣಿಗಾರಿಕೆ ವಿಚಾರ ವಿವಾದ ವಿಧಾನಸಭೆಯಲ್ಲಿ ಪ್ರಸ್ತಾಪಗೊಂಡಾಗ, ದೇಶ ಪ್ರೇಮದ ಭಾಷಣ ಬಿಗಿದ ಯಡ್ಡಿ, ಈ ಕುರಿತು ಜಂಟಿ ಸಮೀಕ್ಷೆಗೆ ಒತ್ತಾಯಿಸಿ ಕೇಂದ್ರಕ್ಕೆ ಪತ್ರ ಬರೆಯುವುದಾಗಿ ಪ್ರಕಟಿಸಿದ್ದರು. ಅಂದಿನಿಂದ ಯಡ್ಡಿ ಮತ್ತು ರೆಡ್ಡಿ ಬ್ರದರ್ಸ್ ಸಂಬಂಧ ಸಂಪೂರ್ಣ ಹಳಸಿ ಹೋಗಿದೆ. ಹೀಗಾಗಿಯೇ ಲೋಕಸಭಾ ಚುನಾವಣೆಯಲ್ಲಿ ಅವರು ಆಕ್ಟಿವ್ ಆಗಿ ಕೆಲಸ ಮಾಡಿರಲಿಲ್ಲ.

ಇದೀಗ ಕೋರ್ಟ್ ಜಂಟಿ ಸಮೀಕ್ಷೆ ನಡೆಸಲು ಸೂಚಿಸುತ್ತಿದ್ದಂತೆಯೇ ಬೆಚ್ಚಿಬಿದ್ದ ರೆಡ್ಡಿ ಬ್ರದರ್ಸ್ ಮುಖ್ಯಮಂತ್ರಿ ಯಡ್ಡಿ ಮೇಲೆ ಮತ್ತೆ ರೇಗಾಡಿದ್ದಾರೆ. 'ನಿಮ್ಮನ್ನು ನಂಬಿಕೊಂಡು ನಾವು ಕೋಟಿ ಕೋಟಿ ಸುರಿದೆವು. ಆದರೆ ನೀವು ನಮಗೆ ಚಿಕ್ಕಾಸಿನ ಕೆಲಸವನ್ನೂ ಮಾಡಿಕೊಟ್ಟಿಲ್ಲ. ಈ ಪ್ರಕರಣ ಬಯಲಿಗೆ ಬರಲು ಕಾರಣರಾದ ಐಎಫ್‌ಎಸ್ ಅಧಿಕಾರಿ ಯು.ವಿ.ಸಿಂಗ್‌ರನ್ನು ವರ್ಗಾವಣೆ ಮಾಡುವ ತಾಕತ್ತೂ ನಿಮಗಿಲ್ಲ' ಎಂದೆಲ್ಲಾ ಬಾಯಿಗೆ ಬಂದಹಾಗೆ ಮಾತನಾಡಿದ್ದಾರೆ.

'ಹೀಗೆ ನೀವು ನಮ್ಮನ್ನು ನಿರ್ಲಕ್ಷಿಸಿದರೆ ನಿಮ್ಮನ್ನು ಅಧಿಕಾರಕ್ಕೆ ತಂದ ನಮಗೆ ಇಳಿಸುವುದೂ ಗೊತ್ತಿದೆ' ಎಂದೂ ಬೆದರಿಕೆಯನ್ನೂ ಒಡ್ಡಿದ್ದಾರೆ. ರೆಡ್ಡಿಗಳ ಈ ಆಕ್ರೋಶ ಕಂಡು ಬೆಚ್ಚಿಬಿದ್ದ ಯಡ್ಡಿ ಮತ್ತೊಮ್ಮೆ ಯು.ವಿ. ಸಿಂಗ್‌ರ ವರ್ಗಾವಣೆಗೆ ಸೂಚಿಸಿ ಲೋಕಾಯುಕ್ತರಿಂದ ಛೀಮಾರಿ ಹಾಕಿಸಿಕೊಂಡಿದ್ದಾರೆ. ರೆಡ್ಡಿಗಳ ಒತ್ತಡಕ್ಕೆ ಸಿಲುಕಿ, ಗಣಿ ಹಗರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತರ ತಂಡದಲ್ಲಿರುವ, ಬೆಂಗಳೂರು ಕೆರೆ ಅಭಿವೃದ್ಧಿ ಪ್ರಾಧಿಕಾರದ ಅರಣ್ಯ ಸಂರಕ್ಷಣಾಧಿಕಾರಿಯಾದ ಡಾ. ಯು.ವಿ.ಸಿಂಗ್‌ರನ್ನು ಯಡ್ಡಿ ವರ್ಗಾಯಿಸಿದ್ದು ಇದು ಎರಡನೇ ಬಾರಿ.


ಗಣಿ ಹಗರಣದ ತನಿಖೆ ನಡೆಸಿ ಓಬಳಾಪುರಂ ಮೈನಿಂಗ್ ಕಂಪನಿಯ ವಿರುದ್ಧವೇ ವರದಿ ನೀಡಿರುವ ಸಿಂಗ್ ಈಗ ಸರ್ಕಾರಕ್ಕೆ ಮತ್ತು ರೆಡ್ಡಿ ಬ್ರದರ್ಸ್‌ಗೆ ಬಿಸಿ ತುಪ್ಪವಾಗಿದ್ದಾರೆ. ಹಿಂದೊಮ್ಮೆ ಕಾರವಾರದ ಜಿಲ್ಲಾ ಪಂಚಾಯತ್‌ಗೆ ಅವರನ್ನು ವರ್ಗಯಿಸಲಾಗಿತ್ತು. ಆಗಲೂ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಸರ್ಕಾರಕ್ಕೆ ಬಿಸಿ ಮುಟ್ಟಿಸಿ ಅವರನ್ನು ಉಳಿಸಿಕೊಂಡಿದ್ದರು. ಮಾನ-ಮರ್ಯಾದೆ ಇಲ್ಲದ ಸರ್ಕಾರ ಮತ್ತೆ ಈಗ ಅದೇ ಕೆಲಸ ಮಾಡಿ ಉಗಿಸಿಕೊಂಡಿದೆ.

ಈ ನಡುವೆ ಗಣಿ ಹಗರಣದ ಕುರಿತು ತಾವು ನೀಡಿರುವ ವರದಿ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಲೋಕಾಯುಕ್ತರು ಯಡ್ಡಿ ಮೇಲೆ ಒತ್ತಡ ಹೇರಲಾರಂಭಿಸಿದ್ದಾರೆ. ಮೂರು ತಿಂಗಳ ಕಾಲಾವಕಾಶ ಮುಗಿಯಿತು, ಇನ್ನೊಂದಿಷ್ಟು ದಿನ ನೋಡುತ್ತೇವೆ, ಕ್ರಮ ತೆಗೆದುಕೊಳ್ಳದಿದ್ದರೆ ವರದಿಯನ್ನು ರಾಜ್ಯಪಾಲರಿಗೆ ಕೊಡುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಮೊದಲೇ ರೆಡ್ಡಿಗಳ ಕೋಪದಿಂದ ತತ್ತರಿಸಿರುವ ಯಡ್ಡಿ, ಈಗ ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಮುಂದೇನು ಮಾಡುತ್ತಾರೋ ಕಾದು ನೋಡಬೇಕು.

ಸಿಕ್ಕಿಬಿದ್ದ ರಾಮಚಂದ್ರಗೌಡರ ಶಿಷ್ಯೆ ಜಯಲಕ್ಷ್ಮಿ

ಜೆಂದಾಲ್ ಮಹಿಳಾ ಪದವಿ ಕಾಲೇಜಿನಲ್ಲಿ ಹೊಸ ಕೋರ್ಸುಗಳ ಆರಂಭಕ್ಕೆ ಅನುಮತಿ ಪಡೆಯಲು ಅನುಕೂಲಕರ ವರದಿಗಾಗಿ ಎರಡು ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತರಿಗೆ ಸಿಕ್ಕಿಬಿದ್ದ ಬೆಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯೆ ಜಯಲಕ್ಷ್ಮಿದೇವಿ ಸಚಿವ ರಾಮಚಂದ್ರಗೌಡರ ಪಕ್ಕಾ ಶಿಷ್ಯೆಯಂತೆ.


ರಾಮಚಂದ್ರಗೌಡ

ಕುಣಿಗಲ್ ಮೂಲದ ಈಕೆ ಬಿಜೆಪಿ ಮಹಿಳಾ ಮೋರ್ಚಾದಲ್ಲಿದ್ದವಳು. ಹರಿಕಥೆದಾಸನಂತಾಡುವ ರಾಮಚಂದ್ರಗೌಡರ 'ಪದ್ಧತಿ'ಗೆ ಮನಸೋತು ಅವರ ಹಿಂದೆ-ಮುಂದೆ ಓಡಾಡಿಕೊಂಡಿದ್ದವಳು. ಕುಮಾರಸ್ವಾಮಿ ನೇತೃತ್ವದ ಕೋ-ಜಾ ಸರ್ಕಾರದಲ್ಲಿ ರಾಮಚಂದ್ರಗೌಡ ಇದ್ದಕ್ಕಿದ್ದಂತೆ ಸಚಿವರಾದಾಗ ತಮ್ಮ 'ಹಿಂಬಾಲಕಿ' ಜಯಲಕ್ಷ್ಮಿದೇವಿಯನ್ನು ಕರೆತಂದು ಬೆಂಗಳೂರು ವಿವಿಯನ್ನು ಉದ್ಧಾರ ಮಾಡಲು ಅದರ ಹೆಗಲಿಗೆ ಈಕೆಯನ್ನು ಬಿಟ್ಟಿದ್ದರು.

ಸಚಿವ ರಾಮಚಂದ್ರಗೌಡರು ಈಕೆಗೆ ಭ್ರಷ್ಟಾಚಾರದ ಬಗ್ಗೆ ಥಿಯರೀ ಕ್ಲಾಸ್ ಮಾಡಿದರೆ, ಅಬಕಾರಿ ಇಲಾಖೆಯಲ್ಲಿ ಹಿರಿಯ ಅಧಿಕಾರಿಯಾಗಿರುವ ಈಕೆಯ ಪತಿಮಹಾಶಯ ಪ್ರಾಕ್ಟಿಕಲ್ ಕ್ಲಾಸ್ ಮಾಡಿ ತೋರಿಸುತ್ತಿದ್ದನಂತೆ. ಇವರಿಬ್ಬರ ತರಬೇತಿಯಿಂದ ಸಾಕಷ್ಟು ಎಕ್ಸಪರ್ಟ್ ಆದ ಜಯಲಕ್ಷ್ಮಿ ಸೆನೆಟ್ ಸದಸ್ಯೆಯಾಗಿ ಎಷ್ಟು 'ಮಾರ್ಕ್ಸ್' ಗಳಿಸಿದಳೆಂದರೆ ಮೂರು ತಲೆಮಾರಿಗಾಗುವಷ್ಟು ಚಿನ್ನ, ಹಣ, ಆಸ್ತಿಯನ್ನು ಮಾಡಿಟ್ಟುಕೊಂಡಿದ್ದಳು.

ಈ ಚೆಡ್ಡಿ ಹಿಂಬಾಲಕಿ ಜಯಲಕ್ಷ್ಮಿ ಎಂತಹ ಪಾಖಂಡಿ ಎಂದರೆ ತಾನು ನೇರವಾಗಿ ಲಂಚ ಸ್ವೀಕರಿಸಿದರೆ ಸಿಕ್ಕಿಬೀಳಬಹುದೆಂದು ಹೆದರಿ ತನ್ನ ಮರಿ ಚೆಡ್ಡಿಯಾದ ಮಗನನ್ನೂ ತನ್ನ ಭ್ರಷ್ಟಾಚಾರದ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದಳು. ಆದರೂ ಆಕೆಯ ಹಣಬರಹ, ಏನು ಮಾಡುತ್ತೀರಿ? ಆಕೆ ಎಷ್ಟೇ ಚಾಣಾಕ್ಷತನ ತೋರಿದರೂ ಲೋಕಾಯುಕ್ತರಿಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾಳೆ.

ಅಂದಹಾಗೆ, ಈಕೆ ಏನೇ ಮಾಡಿದರೂ ರಾಮಚಂದ್ರಗೌಡರಿಗೆ ಹೇಳಿಯೇ ಮಾಡುತ್ತಿದ್ದಳು. ಎಷ್ಟರಮಟ್ಟಿಗೆ ಎಂದರೆ ತನ್ನ ಬಲಗೈಗೆ ಬಂದದ್ದೆಷ್ಟು, ಎಡಗೈಗೆ ಸಿಕ್ಕಿದ್ದೆಷ್ಟು ಎಂದೆಲ್ಲಾ ಗೌಡರಿಗೆ ವರದಿ ಮಾಡುತ್ತಿದ್ದಳು. ಆ ಕಾರಣಕ್ಕಾಗಿಯೇ ಆಕೆ ಗಳಿಸಿದ ಹಣದಲ್ಲಿ ಗೌಡರಿಗೂ ಪಾಲಿರುತ್ತಿತ್ತು ಎಂದು ವಿವಿ ಮಂದಿಯೇ ಈಗ ಬಹಿರಂಗವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಲೋಕಾಯುಕ್ತರು ಈಕೆಯನ್ನು ಬಂಧಿಸುತ್ತಿದ್ದಂತೆಯೇ ಸಚಿವ ರಾಮಚಂದ್ರೇಗೌಡ ಮತ್ತಿತರ ಬಿಜೆಪಿ ನಾಯಕರು ಆಕೆಯನ್ನು ಬಚಾವು ಮಾಡಲು ಎಲ್ಲಿಲ್ಲದ ಪ್ರಯತ್ನ ನಡೆಸಿದರು. "ಆಕೆ ಹಣ ತೆಗೆದುಕೊಂಡಿಲ್ಲ, ಮಗ ತೆಗೆದುಕೊಂಡಿದ್ದು" ಎಂದು ಲೋಕಾಯುಕ್ತರ ದಿಕ್ಕು ತಪ್ಪಿಸಲು ಹೊರಟಿದ್ದರು. ಆದರೆ ಲೋಕಾಯುಕ್ತ ಅಧಿಕಾರಿಗಳು ಇದಕ್ಕೆಲ್ಲ ಸೊಪ್ಪು ಹಾಕಲಿಲ್ಲ. ಬದಲಾಗಿ ಜಯಲಕ್ಷ್ಮಿಗೆ ಜೈಲಿನ ದಿಕ್ಕು ತೋರಿಸಿದ್ದಾರೆ.


ಜಯಲಕ್ಷ್ಮಿ

"ಹಣ ಕೊಡದಿದ್ದರೆ ಕಾಲೇಜಿನ ಸೀಟು ಕಡಿಮೆ ಮಾಡಿಸುತ್ತೇನೆ, ಮಾನ್ಯತೆ ರದ್ದು ಮಾಡಿಸುತ್ತೇನೆ" ಎಂದೆಲ್ಲಾ ಕಾಲೇಜುಗಳಿಗೆ ಬೆದರಿಕೆಯೊಡ್ಡುತ್ತಿದ್ದ ಈ 'ರಾಷ್ಟ್ರ ಸೇವಕಿ' ಇಂತಿಷ್ಟು ಎಂದು ಎಲ್ಲದಕ್ಕೂ ದರ ನಿಗದಿಪಡಿಸಿದ್ದಳು. ಆಕೆ ಕೇಳಿದ ಹಣ ಸಿಕ್ಕರೆ ಮಾತ್ರ ಕಾಲೇಜುಗಳ ಕೆಲಸ ಸುಗಮವಾಗುತ್ತಿತ್ತು. ಜಯಲಕ್ಷ್ಮಿ ಫಿಕ್ಸ್ ಮಾಡಿದ ರೇಟನ್ನು ವಸೂಲಿ ಮಾಡುತ್ತಿದ್ದದ್ದು ಆಕೆಯ ಉಂಡಾಡಿ ಗುಂಡ ಮಗ ಅಲೋಕ್ ಎಮ್ಮಷ್ಟು ಈತನ ಕಸುಬೇ ಅಮ್ಮ ಲೂಟಿ ಹೊಡೆದ ದುಡ್ಡನ್ನು ಕಲೆಕ್ಟ್ ಮಾಡುವ ಕೆಲಸ.

ಕಳೆದ ಒಂದೆರಡು ವರ್ಷಗಳಲ್ಲೇ ಈ ಜಯಲಕ್ಷ್ಮಿ ಅದೆಷ್ಟು ದುಡ್ಡು ಹೊಡೆದಿದ್ದಾಳೆಂದರೆ ಅದನ್ನೆಲ್ಲ ಸಿಕ್ಕಸಿಕ್ಕ ಜಾಗಗಳಲ್ಲಿ ಬಚ್ಚಿಟ್ಟಿದ್ದಳು. ಅದೂ ಸಾಲದಾದಾಗ ಲಂಚದ ಹಣವನ್ನು ನೇರವಾಗಿ ಬ್ಯಾಂಕುಗಳ ಲಾಕರ್‌ಗಳಲ್ಲಿಟ್ಟಿದ್ದಳು ಅಂದರೆ ಈಕೆಯ ನುಂಗುವಿಕೆ ಇನ್ನೆಷ್ಟಿದ್ದಿರಬಹುದೆಂದು ನೀವೇ ಊಹಿಸಿ.


ಈಕೆಯ ಹೆಸರಲ್ಲಿದ್ದ ಎರಡು ಲಾಕರ್‌ಗಳನ್ನು ತೆರೆದ ಲೋಕಾಯುಕ್ತ ಅಧಿಕಾರಿಗಳೇ ದಂಗು ಬಡಿದು ಹೋಗಿದ್ದಾರೆ. ಇನ್ನೂ ಒಂದೆರಡು ಲಾಕರ್‌ಗಳನ್ನು ತೆಗೆಯಬೇಕಿದೆ. ಅವುಗಳಲ್ಲೂ ಖಂಡಿತವಾಗಿ ಲಕ್ಷ ಲಕ್ಷ ಸಿಗುತ್ತದೆ. ಜಯಲಕ್ಷ್ಮಿಯ ಲಂಚ ಪುರಾಣದ ತನಿಖೆ ಇನ್ನೂ ಪೂರ್ಣಗೊಂಡಿಲ್ಲ. ಕುಣಿಗಲ್, ತುಮಕೂರು, ತಮಿಳುನಾಡು ಸೇರಿದಂತೆ ಹಲವೆಡೆ ಈಕೆ ಅವ್ಯವಹಾರ ನಡೆಸಿರುವುದೂ ಬೆಳಕಿಗೆ ಬರುತ್ತಲೇ ಇದೆ.

ಜಯಲಕ್ಷ್ಮಿದೇವಿಯಂತ ತಿಮಿಂಗಿಲವನ್ನು ಬೆಳೆಸಿ, ಈ ಸಮಾಜಕ್ಕೆ ಕೊಡುಗೆಯಾಗಿ ನೀಡಿದ ಬಿಜೆಪಿಯನ್ನು, ಸಚಿವ ರಾಮಚಂದ್ರಗೌಡರನ್ನು ಏನೆಂದು ಕರೆಯೋಣ ನೀವೇ ಹೇಳಿ?!

● ವರದಿಗಾರ

ಕೇಂದ್ರದಲ್ಲಿ ಕರ್ನಾಟಕದ ಮಂತ್ರಿಗಳು

ಕರ್ನಾಟಕದಲ್ಲಿ ದುರ್ಬಲವಾಗಿರುವ ಕಾಂಗ್ರೆಸ್ಸಿಗೆ ಮತ್ತೆ ಬಲ ತುಂಬುವ ಉದ್ದೇಶದಿಂದಲೋ ಅಥವಾ ಹಿರಿತನ ಪರಿಗಣಿಸಿಯೋ ಅಂತೂ ಕರ್ನಾಟಕದ ನಾಲ್ವರು ಸಂಸದರು ಈ ಬಾರಿ ಕೇಂದ್ರದಲ್ಲಿ ಮಂತ್ರಿಗಳಾಗುತ್ತಿದ್ದಾರೆ. ಆಶ್ಚರ್ಯ ಅಂದರೆ ರಾಜ್ಯದಿಂದ ಮೊನ್ನೆ ಗೆದ್ದು ದೆಹಲಿಗೆ ಹೋದವರೇ ಆರು ಮಂದಿ. ಅವರಲ್ಲಿ ಅರ್ಧಕ್ಕರ್ಧ ಅಂದರೆ ಮೂವರು ಈಗ ಸಚಿವರು. ಇವರಲ್ಲಿ ರಾಜ್ಯಸಭಾ ಮೆಂಬರ್ ಎಸ್.ಎಂ.ಕೃಷ್ಣ ಸಂಸದರಾದ ವೀರಪ್ಪ ಮೊಯ್ಲಿ, ಕೆ.ಹೆಚ್.ಮುನಿಯಪ್ಪ ಹಾಗೂ ಮಲ್ಲಿಕಾರ್ಜುನ ಖರ್ಗೆ ಇವರ ಬಗ್ಗೆ ಹೇಳಬೇಕೆಂದರೆ....



ಎಸ್.ಎಂ.ಕೃಷ್ಣಗೆ ಅರ್ಹತೆ ಇದೆಯಾ?

ಕರ್ನಾಟಕ ಕಂಡ ಅತ್ಯಂತ ಭ್ರಷ್ಟ ಹಾಗೂ ಕಳಪೆ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಈಗ ಭಾರತದ ವಿದೇಶಾಂಗ ಮಂತ್ರಿ, ಹೇಳಿಕೇಳಿ ಕೃಷ್ಣ ಪ್ರಕಾರ ವಿದೇಶವೆಂದರೆ ಒಂದೋ ಇಂಗ್ಲೆಂಡಿನ ವಿಂಬಲ್ಡನ್ ಟೆನ್ನಿಸ್ ಆಟದ ಕೋರ್ಟು ಇಲ್ಲ ಅಮೆರಿಕದ ಲಾಸ್ ವೇಗಾಸ್ ಎಂಬ ಬೆಟ್ಟಿಂಗ್ ಆಟದ ಹೋಟೆಲುಗಳು. ನೇರವಾಗಿ ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಈ ಜವಾಬ್ದಾರಿ ಹೊತ್ತುಕೊಳ್ಳುವಷ್ಟು ಯೋಗ್ಯತೆ, ಸಾಮರ್ಥ್ಯ ಕೃಷ್ಣಗಿಲ್ಲ.

ಜಾಗತಿಕ ವಿದ್ಯಮಾನಗಳನ್ನು ನೋಡಿದಾಗ ಭಾರತಕ್ಕೆ ಈಗ ಕಷ್ಟದ ದಿನಗಳು. ಒಂದೆಡೆ ಆರ್ಥಿಕ ಕುಸಿತದ ಸಮಸ್ಯೆ, ಮತ್ತೊಂದೆಡೆ ನೆರೆದೇಶಗಳಲ್ಲಿ ಅಶಾಂತಿ. ಇವೆಲ್ಲ ಭಾರತಕ್ಕೊಂದು ಸವಾಲೇ ಸರಿ.

ಆದರೆ ಈ ವಿಚಾರಗಳಲ್ಲಿ ಕೃಷ್ಣ ಡಲ್ಲು ಕ್ಯಾಂಡಿಡೇಟ್. ಈಗಾಗಲೇ ಅಮೆರಿಕದ ಗುಮಾಸ್ತರು ಹೇಳಿಕೊಟ್ಟ ಮಾತುಗಳನ್ನು ಬಾಯಿಪಾಠ ಮಾಡಿದಂತೆ ಕೃಷ್ಣ ಮೂರ್ನಾಲ್ಕು ಹೇಳಿಕೆ ಕೊಟ್ಟಿದ್ದಾರೆ. ಅದ್ಯಾವುದರಲ್ಲೂ ಮುತ್ಸದಿತನ, ಅನುಭವದ ತಿಳಿವಳಿಕೆಗಳಿರಲಿಲ್ಲ.

ಭಾರತಕ್ಕೆ ಮೊದಲಿನಿಂದಲೂ ಒಂದು ಸ್ವತಂತ್ರ ವಿದೇಶಾಂಗ ನೀತಿ ಅಂತಾ ಇರಲೇ ಇಲ್ಲ. ಈಗ ಕೃಷ್ಣನಂತ ಅಸಂಬದ್ಧ ಜನ ವಿದೇಶ ಸಚಿವರಾಗಿರುವುದರಿಂದ ಈ ಇಲಾಖೆ ಚೇತರಿಸಿಕೊಳ್ಳುವುದು ಕಷ್ಟ. ಆದರೆ ಕೃಷ್ಣ ಅಳಿಯ ಸಿದ್ಧಾರ್ಥನಿಗೆ ಅವಕಾಶ ಸಿಕ್ಕರೆ ದೇಶದ ವಿದೇಶಾಂಗ ನೀತಿಯನ್ನೂ ಯಾವ ದೇಶಕ್ಕಾದರೂ ಮಾರಿ ಕಮಿಷನ್ ಹೊಡೆದು ಬಿಡುತ್ತಾನಷ್ಟೇ

ಮಲ್ಲಿಕಾರ್ಜುನ ಖರ್ಗೆ - ಶಬರಿ ಕಾದ ಹಾಗೆ ಕಾದು...

ದೆಹಲಿಯಲ್ಲಿ ಇದೇ ಮೊದಲ ಬಾರಿಗೆ ಖರ್ಗೆಗೆ ಅಧಿಕಾರ ಸಿಗುತ್ತಿದೆ. ಮೂಲತಃ ಕಷ್ಟಪಡುವ ರಾಜಕಾರಣಿಯಾಗಿರುವ ಖರ್ಗೆ ದಕ್ಷ ಆಡಳಿತಗಾರರು. ಆದರೆ ತಮ್ಮ ಅಳಿಯ ರಾಧಾಕೃಷ್ಣನ ಭ್ರಷ್ಟಾಚಾರಗಳನ್ನು ಬೆಂಬಲಿಸಿ ಶ್ರೀಮಂತರಾದ ಅಪಕೀರ್ತಿಯೂ ಇವರಿಗಿದೆ.

ಕರ್ನಾಟಕದ ಮುಖ್ಯಮಂತ್ರಿಯಾಗುವ ಹಂಬಲ ಖರ್ಗೆಗಿತ್ತು, ಆ ಅರ್ಹತೆಯೂ ಅವರಿಗಿತ್ತಾದರೂ ಸಂದರ್ಭ ಕೂಡಿ ಬರಲಿಲ್ಲ, ರಾಜ್ಯ ರಾಜಕಾರಣದಲ್ಲಿ ಸಿದ್ಧರಾಮಯ್ಯನವರು ಬೇರು ಬಿಡಲು ತಮ್ಮ ಜಾಗ ಬಿಟ್ಟಿರುವ ಖರ್ಗೆ ಶಬರಿ ಕಾದ ಹಾಗೆ ಕಾದ ನಂತರ ಕೇಂದ್ರದಲ್ಲಿ ಕ್ಯಾಬಿನೆಟ್ ಮಂತ್ರಿ ಸ್ಥಾನ ಸಿಕ್ಕಿದೆ.

ಕರ್ನಾಟಕದ ಜನ ಹಾಗೂ ನಿರ್ದಿಷ್ಟವಾಗಿ ಹೈದರಾಬಾದ್ ಕರ್ನಾಟಕದ ಜನ ಖರ್ಗೆಯವರಿಂದ ಬಹಳ ನಿರೀಕ್ಷೆ ಇಟ್ಟುಕೊಂಡಂತಿದೆ. ಖರ್ಗೆಗೆ ಯಾವ ಖಾತೆ ಸಿಗಲಿದೆ ಎಂಬುದನ್ನು ಇದು ಆಧರಿಸಿದೆ.

ಮೊಯ್ಲಿ ಸೂಕ್ತ ಆಯ್ಕೆ

ಲೋಕಸಭಾ ಉಪಸಭಾಪತಿ ಆಗುತ್ತಾರೆ ಎಂಬ ರೂಮರ್ ಇತ್ತಾದರೂ ಮೊಯ್ಲಿ ಈಗ ಕೇಂದ್ರ ಮಂತ್ರಿ. ಬಹುಶಃ ಈ ಹಿಂದೆ ಅರ್ಜುನ್ ಸಿಂಗ್ ನಿರ್ವಹಿಸಿದ್ದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವೀರಪ್ಪ ಮೊಯ್ಲಿಯವರಿಗೆ ಸಿಗಬಹುದು. ಕರ್ನಾಟಕದ ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ ಕೊಟ್ಟ ಮೊಯ್ಲಿ ಅಪಾರ ಜನಪರ ಕಾಳಜಿಗಳಿರುವ ರಾಜಕಾರಣಿ. ಆದರೆ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ವಿಶ್ವಬ್ಯಾಂಕಿನ ಮೂಗಿನ ನೇರಕ್ಕೆ ಕೆಲಸ ಮಾಡಿದ ಮೊಯ್ಲಿಯಿಂದ ಜನರಿಗೇನೂ ಉಪಕಾರವಾಗಿರಲಿಲ್ಲ, ಬದಲಾಗಿ [illegible] ಜನರಿಂದ ಇನ್ನಷ್ಟು ದೂರ ಸರಿದಿತ್ತು,

ತಮಗೆ ಅಷ್ಟು ಪರಿಚಿತವಲ್ಲದ [illegible]ಪುರದಿಂದ ಈ ಬಾರಿ ಸ್ಪರ್ಧಿಸಿ ಬಾಲಪ್ಪನ ವಂಚನೆ, ಬಿಜೆಪಿಗಳ ಅಬ್ಬರದ ನಡುವೆಯೂ ಜನ ಮೊಯ್ಲಿಯನ್ನು ಬೆಂಬಲಿಸಿ ಗೆಲ್ಲಿಸಿದ್ದಾರೆ.

ಮೊಯ್ಲಿಯವರಿಗೆ ಯಾವುದೇ ಖಾತೆ ಸಿಕ್ಕರೂ ಅದರಿಂದ ಕರ್ನಾಟಕಕ್ಕೆ ಹಾಗೂ ದೇಶದ ಜನತೆಗೆ ಕೊಂಚವಾದರೂ ಉಪಯೋಗವಾಗಲಿದೆ. ಕರ್ನಾಟಕದ ಮಟ್ಟಿಗೆ ಕಾಂಗ್ರೆಸ್ ಹೆಮ್ಮೆಪಡಬೇಕಾದ ಆಯ್ಕೆ ಇದು.

ಕೆ.ಹೆಚ್. ಮುನಿಯಪ್ಪ ಸಾಧನೆ ಏನು?

ಈ ಬಾರಿಗೆ ಕಳೆದ ಬಾರಿ ರಾಜ್ಯ ಸಚಿವರಾಗಿದ್ದ ಕೋಲಾರದ ಕೆ.ಹೆಚ್. ಮುನಿಯಪ್ಪ ಈ ಬಾರಿಯೂ ರಾಜ್ಯ ಸಚಿವರಾಗಿದ್ದಾರೆ.

ಪಕ್ಷದ ಅತ್ಯಂತ ಹಿರಿಯ ದಲಿತ[illegible] ಎಡಗೈ ಹಾಗೂ ಸತತ 6ನೇ ಬಾರಿಗೆ ಗೆದ್ದು ಬಂದ ಸಾಧನೆಗಳೇ ಮುನಿಯಪ್ಪಗೆ ಮತ್ತೆ ಮಂತ್ರಿ ಸ್ಥಾನ ತಂದುಕೊಟ್ಟಿದೆಯೇ ವಿನಃ ದಕ್ಷತೆ, ಸಾಧನೆಗಳಲ್ಲ. ■

ನಾನು ನಮ್ಮಪ್ಪನಿಗೇ ಹುಟ್ಟಿದ್ದೀನಿ!

ಅನಂತಕುಮಾರನ ಆರಾಧ್ಯ ದೈವವಾಗಿದ್ದ ಅಧ್ವಾನಿಜಿಯವರು ಸೊಂಟ ಮುರಿದ ಚೆಕ್ಕಿನಂತೆ ತಟಸ್ಥವಾದುದನ್ನು ಕಂಡ ಕರ್ನಾಟಕದ ಮುಖ್ಯಮಂತ್ರಿಗಳು, ಪ್ರಧಾನಿ ಮನಮೋಹನ ಸಿಂಗರನ್ನು ಅಭಿನಂದಿಸಿ ಹಾರ ಹಾಕಲು ಹಾತೊರೆಯುತ್ತಿದ್ದಾರಂತಲ್ಲಾ, ಮೊದಲು ಮನಮೋಹನ ಸಿಂಗರನ್ನು ಮಾತ್ರ ಅಭಿನಂದಿಸಬೇಕೆಂದಿದ್ದ ಎಡೂರಪ್ಪ ಮತ್ತವರ ಪೂಜಾರಿ, ಈಗ ಕೇಂದ್ರದಲ್ಲಿನ ಕರ್ನಾಟಕದ ಸಚಿವರನ್ನು ಅಭಿನಂದಿಸಿ ಹಾಡಿ ಹೊಗಳಿ ಬರುವ ಕಾರ್ಯಕ್ರಮವನ್ನೆ ಹಾಕಿಕೊಂಡಿದ್ದಾರಂತಲ್ಲಾ, ತನ್ನ ಸಂಪುಟದ ಸಚಿವರನ್ನು ಕರೆದುಕೊಂಡು ಹೋಗಿ ಪ್ರಧಾನಿಯನ್ನು ಅಭಿನಂದಿಸುವ ಅಗತ್ಯ ಎಡೂರಪ್ಪನಲ್ಲಿ ಕಂಡಿರುವುದಕ್ಕೆ ಅಚ್ಚರಿಗೊಂಡಿರುವ ಕಾಂಗೈಗಳು "ಎಡೂರಪ್ಪನ ಈ ನಡವಳಿಕೆಯಲ್ಲಿ ಪ್ರಾಮಾಣಿಕತೆಯಿಲ್ಲ, ಕಾಂಗೈ ಮುಖ್ಯಮಂತ್ರಿಗಿಂತಲೂ ಪ್ರಧಾನಿ ಓಲೈಕೆಗೆ ಹಾತೊರೆಯುವ ಎಡೂರಪ್ಪನನ್ನ ನಂಬಬೇಡಿ" ಅಂತ ಮನಮೋಹನಸಿಂಗನಿಗೆ ಹೇಗೆ ಹೇಳುವುದು? ಹೇಳಿದರೂ ಆ ಸಿಂಗ ಕೇಳುತ್ತಾರೆಯೋ? ಎಂದು ತಮ್ಮಲ್ಲೇ ಗೊಣಗಿಕೊಂಡು ಸುಮ್ಮನಾದವಂತಲ್ಲಾ, ಥೂತ್ತೇರಿ!

ಥೂತ್ತೇರಿ

ಯಾಹೂ

* * * *

ಆಡಳಿತ ಪಕ್ಷದಲ್ಲಿದ್ದುಕೊಂಡೇ ಆರಾಮವಾಗಿ ಕಾಲಹಾಕಿರುವ ಕಾಂಗೈಗಳ ಪಾಲಿಗೆ ಇತ್ತೀಚಿಗೆ ಅಮರಿಕೊಂಡಿರುವ ಕಷ್ಟವೆಂದರೆ ಚುನಾವಣೆಯಲ್ಲಿ ಗೆಲ್ಲುವುದು. ಬರುಬರುತ್ತ ಇದೂ ಕೂಡ ಅಸಾಧ್ಯವಾಗುತ್ತ ಕರ್ನಾಟಕದಲ್ಲಿ ಇದ್ದಬದ್ದ ಸ್ಥಾನವನ್ನು ಕಳೆದುಕೊಂಡ ಹೊಣೆಯನ್ನು ಅಪರೂಪದ ಅಧ್ಯಕ್ಷ ದೇಶಪಾಂಡೆ ಮತ್ತು ಡಿಕೆಶಿ ಹೊತ್ತುಕೊಂಡಿದ್ದಾರಂತಲ್ಲಾ. "ಅಖಂಡ ಕರ್ನಾಟಕದಲ್ಲಿ ನಾವಿಬ್ಬರೂ ಅಧಿಕಾರ ವಹಿಸಿಕೊಂಡ ಮೇಲೆ ಕಾಂಗ್ರೆಸ್ಸಿನ ಪರಸಂಟೇಜು ಎರಡು ಪಟ್ಟು ಜಾಸ್ತಿಯಾಗಿದೆ. ಒಂದು ಪಟ್ಟನ್ನು ಏರಿಸಿದ್ದು ನಾನು, ಇನ್ನೊಂದರ ಶ್ರಮ ದೇಶಪಾಂಡೆಯದು. ಹೀಗೆ ನಮ್ಮ ಪರಸಂಟೇಜನ್ನು ಹೆಚ್ಚು ಮಾಡಿಕೊಂಡು ಮುಂದಿನ ಲೋಕಸಭಾ ಚುನಾವಣೆಗೆ ಇನ್ನೆರಡು ಸ್ಥಾನ ಹೆಚ್ಚಿಗೆ ಪಡೆಯುತ್ತೇವೆ" ಎಂದು ಶಿವಕುಮಾರ್ ತೊಡೆ ತಟ್ಟಿದರಂತಲ್ಲಾ. ಶಿವಕುಮಾರನ ಠೇಂಕಾರಕ್ಕೆ ಕಾಂಗೈನ ಯಾರೊಬ್ಬರೂ ತಲೆ ಕೆಡಿಸಿಕೊಳ್ಳದಿದ್ದಾಗ "ಇದೇ ವಿಷಯವನ್ನು ಸೋನಿಯಾಗಾಂಧಿಗೆ ಹೇಳಿಬರುತ್ತೇನೆ" ಎಂದು ದೆಹಲಿಗೆ ಹೋದರಂತಲ್ಲಾ, ಥೂತ್ತೇರಿ!

* * * *

ದಕ್ಷಿಣ ಕನ್ನಡದ ದಡ್ಡ ಧನಂಜಯಕುಮಾರ್ ಸುಭಾಷ್ ಭರಣಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದೂ ಅಲ್ಲದೆ ಅದನ್ನು ಪಡೆದ ಖುಷಿಯಲ್ಲಿ ದೆಹಲಿ ತುಂಬ ಓಡಾಡುತ್ತಿದ್ದಾರಂತಲ್ಲಾ, ಇತ್ತ ಭರಣಿ ಸಾಹೇಬರು ಪ್ರೆಸ್‌ಮೀಟ್ ಮಾಡಿ ತಮ್ಮ ಸಾಮರ್ಥ್ಯವನ್ನು ಹೇಳಿಕೊಂಡರಲ್ಲದೆ "ನಾನು ಅಪ್ಪನಿಗೆ ಹುಟ್ಟಿದ್ದೇನೆ" ಎಂದು ಹೇಳಿದರಂತಲ್ಲಾ, ಭರಣಿಯವರು ಇಂತಹ ಗಹನವಾದ ಮಾತನ್ನು ಹೇಳಬೇಕಾದರೆ, ಒಂದೋ ಅವರ ಸ್ಥಾನಕ್ಕೆ ಬಂದವನು ಅಪ್ಪನಿಗೆ ಹುಟ್ಟಿರಲಾರ ಅಥವಾ ಭರಣಿಯನ್ನು ಬದಲಿಸಿದವನು ತನ್ನ ಅಪ್ಪನಿಗೆ ಹುಟ್ಟಿರಲಾರ ಎಂಬ ಸಂಶಯದ ಮಾತುಗಳನ್ನು ಹುಟ್ಟಿಸಿವೆಯಂತಲ್ಲಾ, ಸ್ವತಃ ಭರಣಿ ಸಾಹೇಬರಿಗೆ ಇಂತಹ ಮಾತನ್ನು ಆಡುವ ಅಧಿಕಾರವಿದೆಯೇ? ಆ ಮಾತನ್ನಾಡಲು ಅಧಿಕಾರವಿರುವವರೆಂದರೆ ಭರಣಿಯವರ ತಂದೆ ಮತ್ತು ತಾಯಿ. ಅಂಥವರ ಬಗ್ಗೆ ಸಂಶಯ ಬರುವಂತೆ ಮಾತನಾಡಬೇಕಾದರೆ ಭರಣಿಗಾಗಿರುವ ಆಘಾತವೇನು ಎಂದು ದಲಿತ ಕವಿಯ ಗುಂಪು ಚರ್ಚಿಸುತ್ತಿದೆಯಂತಲ್ಲಾ, ಈ ಮಧ್ಯೆ ಮೀಸಲಾತಿ ವಿರೋಧಿ ಚೆಡ್ಡಿ ಗುಂಪು ಭರಣಿಯ ಹಿಂಬಡ್ತಿಯ ಖುಷಿಯನ್ನು ಯಾರಲ್ಲೂ ಹೇಳಿಕೊಳ್ಳದೆ ಮುಗುಮ್ಮಾಗಿದ್ದಾವಂತಲ್ಲಾ, ಭರಣಿ ಅಸಮರ್ಥ ಎಂಬ ಸುದ್ದಿ ಹಬ್ಬಿಸಿ ಯಶಸ್ವಿಯಾದ ಚೆಡ್ಡಿಗಳು ಇನ್ನಾರಾದರೂ ಚೆಡ್ಡಿಗಳಲ್ಲದವರು ಹುದ್ದೆಯಲ್ಲಿದ್ದಾರೆಯೇ ಎಂದು ಶೋಧಿಸುತ್ತಿವೆಯಂತಲ್ಲಾ, ಥೂತ್ತೇರಿ!

* * * *

ಮಂತ್ರಿಸ್ಥಾನ ಸಿಗದಿದ್ದರೆ ಗತಿಯೇನೆಂದು ಕಂಗಾಲಾಗಿ ಕುಳಿತಿದ್ದ ಖರ್ಗೆ ಕಡೆಗೂ ಮಂತ್ರಿಯಾಗಿ, ಸಿದ್ಧರಾಮಯ್ಯ ನಿಟ್ಟುಸಿರು ಬಿಡುತ್ತಿರುವಾಗಲೇ ಕರ್ನಾಟಕದ ಮುಜರಾಯಿ ಮಂತ್ರಿ ಶೆಟ್ಟಿ, ಏದುಸಿರು ಬಿಡುತ್ತಿದ್ದಾನಂತಲ್ಲಾ, ಮುಜರಾಯಿ ಮಂತ್ರಿ ಎಂದರೆ ಅವರಿವರ ಹೆಸರಲ್ಲಿ ಪೂಜೆ ಮಾಡಿಸುವುದು, ಪ್ರಸಾದ ಹಂಚುವುದು, ತೀರ್ಥ ಕ್ಷೇತ್ರಗಳ ನೀರು ತರಿಸಿ ಮಾರುವುದು, ಮಾರಿದ ದುಡ್ಡನ್ನು ಹುಂಡಿಗೆ ತುಂಬುವುದು, ಅದನ್ನ ಕಾಯುವುದು ಹೀಗೆಂದು ಭಾವಿಸಿಕೊಂಡು ಅದರಂತೆಯೇ ನಡೆಯುತ್ತಿದ್ದ ಶೆಟ್ಟಿಗೆ ಸಂಪುಟದಿಂದ ಕೊಕ್ ಕೊಡುವುದು ಯಾವ ನ್ಯಾಯ ಎಂದು ಕುಂಕುಮಧಾರಿ ಚೆಡ್ಡಿಗಳು ಯಡ್ಡಿ ಬಳಿ ನಿಯೋಗ ಹೋಗಲಿವೆಯಂತಲ್ಲಾ, ಇತ್ತ ಶೆಟ್ಟಿಯೂ ಕೂಡ ಶ್ರೀಮಂತರ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವ ನೀಲಿನಕ್ಷೆ ತಯಾರಿಸಿಕೊಂಡು, ಕನಿಷ್ಠ ಹದಿಮೂರು ಸಾವಿರ ದೇವಸ್ಥಾನಗಳನ್ನು ಜೀರ್ಣ ಮಾಡುತ್ತೇನೆ ಎಂದು ಹೇಳಿದ್ದನ್ನು ಕೇಳಿಸಿಕೊಂಡ ಪೇಜಾವರ ಶ್ರೀಗಳು, "ಶೆಟ್ಟಿ ಮಾಡ್ಯ ಪಂಥದ ದೇವಸ್ಥಾನಗಳಿಗೆ ಆದ್ಯತೆ ಕೊಡುವುದಾದರೆ, ನಾನು ಮುಖ್ಯಮಂತ್ರಿ ಮತ್ತು ಶೆಟ್ಟರ ನಡುವೆ ಸಂಧಾನ ನಡೆಸಿ ಅವರ ಖಾತೆ ಉಳಿಸಬಲ್ಲೆ" ಎಂದರಂತಲ್ಲಾ, ಥೂತ್ತೇರಿ!!!


■



ಲಿಂಗಾಯತರ ಬಾಡೂಟ

ಬಿಜೆಪಿ ಮತ್ತು ಅದರ ಆತ್ಮರೂಪಿ ಆರೆಸ್ಸೆಸ್‌ನ ನೀತಿ, ಸಿದ್ಧಾಂತ ಮತ್ತು ಧರ್ಮದ ಪ್ರಕಾರವೇ ಹೇಳಬೇಕೆಂದರೆ ಅವುಗಳ ಪಾಲಿಗಿದೊಂದು 'ಸಾಮೂಹಿಕ ಜಾತಿ ಕೆಡುವ' ಕಾರ್ಯಕ್ರಮ?

ಒಂದೆಡೆ 'ಭೋಲೋ ಭಾರತ್ ಮಾತಾಕೀ....' ಜೈಘೋಷ ಮುಗಿಲು ಮುಟ್ಟಿತ್ತು. ಮತ್ತೊಂದೆಡೆ ಸಹಸ್ರಾರು ಜನ ಸೇರಿ ಕುರಿ-ಕೋಳಿಗಳ ಮಾಂಸ ಮೆಲ್ಲುತ್ತಿದ್ದರು. ಚಿಕನ್ ಬಿರಿಯಾನಿ, ಮುದ್ದೆ ಜೊತೆಗೆ ಮಟನ್ ಕುರ್ಮಾ, ಪ್ಲಾಸ್ಟಿಕ್‌ನ ದೊನ್ನೆಗಳ ತುಂಬ ಚೆಲ್ಲಿ ಚಿಕನ್‌ನ ತುಂಡುಗಳು! ಒಂದೇ ಎರಡೇ....? ಕಮ್ಮಿಯೆಂದರೂ ಐನೂರು ಕುರಿಗಳನ್ನು ಕೊಂದು ಅಡುಗೆ ಮನೆಯಲ್ಲಿ ಮಾಂಸದ ಗುಡ್ಡೆ ಹಾಕಲಾಗಿತ್ತು. ಬಲಿಯಾದ ಕೋಳಿಗಳ ಸಂಖ್ಯೆಯೇ ಐದು ಸಾವಿರವನ್ನು ದಾಟಿತ್ತು. ತಿಂದು ಬಿಸಾಕಿದ ಮೂಳೆಗಳ ಅವಶೇಷವೇ ಅರ್ಧಲೋಡು ಲಾರಿಗಾಗುವಷ್ಟಿತ್ತು.

ಇಂಥದೊಂದು ಭರ್ಜರಿ ಬಾಡೂಟದ ಹೆಸರು ಸಮ್ಮಿಲನ!

ಇದೇ ಮೇ 27 ರ ಅಪರಾಹ್ನ ನಗರದ ಪ್ಯಾಲೇಸ್ ಗ್ರೌಂಡಿನ ಗಾಯತ್ರಿ ವಿಹಾರವೆಂಬ ಐಷಾರಾಮಿ ಸಭಾಂಗಣದಲ್ಲಿ ಕನಿಷ್ಠ ಇಪ್ಪತ್ತು ಸಾವಿರ ಮಂದಿ ಬಿಜೆಪಿ ಕಾರ್ಯಕರ್ತರು ಮೂಳೆ ಕಡಿಯುತ್ತಿದ್ದರೆ ಹೊರಗೆ ಮುಖ್ಯಮಂತ್ರಿ ಯಡಿಯೂರಪ್ಪ ಹಿಂದೂತ್ವದ ಭಾಷಣ ಬಿಗಿಯುತ್ತಿದ್ದರು. ಬಿಜೆಪಿಯ ಮತ್ತೊಬ್ಬ ರಾಷ್ಟ್ರನಾಯಕ ಅನಂತ್‌ಕುಮಾರ್ ಕೂತು ಬಾಡೂಟದ 'ಯೋಗಕ್ಷೇಮ' ನಿಭಾಯಿಸುತ್ತಿದ್ದರು. ಇಡೀ ಬಾಡೂಟದ ರೂವಾರಿಯಂತಿದ್ದದ್ದು ವಿಜಯನಗರದ ಸ್ವಘೋಷಿತ ವೀರಪುತ್ರ ಸೋಮಣ್ಣ!

■ ರಾ. ಸೋಮನಾಥ್

ಗೆದ್ದ ಬಿಜೆಪಿಯ ಸಂಸದರಾದ ಪಿ.ಸಿ. ಮೋಹನ್, ಡಿ.ಬಿ. ಚಂದ್ರೇಗೌಡ, ಮಂತ್ರಿಗಳಾದ ಅಶೋಕ್, ಕಟ್ಟಾನಾಯ್ಡು, ರಾಮಚಂದ್ರಗೌಡ, ಶೋಭಾ ಕರಂದ್ಲಾಜೆ ಸಮೇತವಾಗಿ ಮುಖ್ಯಮಂತ್ರಿ ಯಡ್ಡಿಯ ಜೊತೆ ಕೂತು ಮುದ್ದೆ ಸಾರು ಸವಿದರು. ಒಂದಿಬ್ಬರು ಆರೆಸ್ಸೆಸ್ ಮುಖಂಡರೂ ಬಾಡೂಟದ ವಿವಿಐಪಿ ಪಡಸಾಲೆಯಲ್ಲಿ ಕಂಗೊಳಿಸುತ್ತಿದ್ದರು. ಬಾಡೂಟದ ಸಭಾಂಗಣದ ಸುತ್ತಮುತ್ತೆಲ್ಲ ಬಿಜೆಪಿಯ ಕಮಲದ ರಕ್ಕಸ ಕಟೌಟುಗಳು. ಇಡೀ ಔತಣಕೂಟದ ಬ್ಯಾನರ್, ಫ್ಲೆಕ್ಸ್ ಬೋರ್ಡುಗಳ ತುಂಬ ಸೋಮಣ್ಣನದೇ ಫೋಟೋಗಳು. ಕೆಲವು ಫ್ಲೆಕ್ಸ್‌ಗಳಲ್ಲಿ ಅನಂತ್‌ಕುಮಾರ್, ಅಡ್ವಾಣಿಯ ಫೋಟೋಗಳಿದ್ದರೆ, ಇನ್ನೂ ಕೆಲವಕ್ಕೆ ಯಡ್ಡಿಯ ಫೋಟೋಗಳು.

ವಿಶೇಷವೆಂದರೆ ಬಾಡೂಟಕ್ಕೆಂದೇ ಸಾರಿಗೆ ಸಂಸ್ಥೆಯ ನೂರಕ್ಕೂ ಅಧಿಕ ಸರ್ಕಾರಿ ಬಸ್ಸುಗಳನ್ನು ಮೀಸಲಿಡಲಾಗಿತ್ತು. ಒಂದರ್ಥದಲ್ಲಿ ಇದು ಬಿಜೆಪಿಯ ಸರ್ಕಾರಿ ಪ್ರಾಯೋಜಿತ ಬಾಡೂಟ!

ಈ ಹಿಂದೆ ಬಿಜೆಪಿ ಪಾಳಯದಲ್ಲಿ ಇಂಥ ಮಾಂಸಕೂಟಗಳು ನಡೆದಿಲ್ಲವೆಂದಲ್ಲ, ಮೊನ್ನೆಯಷ್ಟೇ ಚಂದ್ರೇಗೌಡರು ಮಟನ್ ಪಾರ್ಟಿ ಕೊಟ್ಟಿದ್ದಾರೆ. ಗೆದ್ದ ಒಂದೇ ವಾರಕ್ಕೆ ಬೆಂಗಳೂರು ಸೆಂಟ್ರಲ್‌ನ ಸಂಸದ ಪಿ.ಸಿ. ಮೋಹನ್ ನಾನ್ ವೆಜ್ ಡಿನ್ನರ್ ನಡೆಸಿದ್ದಾರೆ. ಕಟ್ಟಾ ನಾಯ್ಡುವಿನ ಬಿರಿಯಾನಿ ಪಾರ್ಟಿಯೆಂದರೆ ಶಿವಾಜಿನಗರದ ಮುಸ್ಲಿಮರೇ ಮುಗಿಬಿದ್ದು ನುಗ್ಗುತ್ತಾರೆ. ಆದರೆ ವಿಜಯನಗರದ ವೀರಪುತ್ರ ವಿ. ಸೋಮಣ್ಣನ ಬಾಡೂಟಕ್ಕೆ ಸರ್ಕಾರ ನೂರಕ್ಕೂ ಅಧಿಕ ಬಸ್ಸುಗಳನ್ನು ಬಿಡುತ್ತದೆಯೆಂದರೆ,



ಶಾಲಾ ಮಕ್ಕಳಿಗೆ ಮೊಟ್ಟೆ ಕೊಡಕೂಡದು ಎಂದು ಕಿತಾಪತಿ ಮಾಡಿದ್ದ ಕರಂದ್ಲಾಜೆ ಆನಂದವಾಗಿ ಕಬಾಬ್ ಕತ್ತರಿಸುತ್ತಿರುವ ಈ ದೃಶ್ಯವನ್ನು ನೋಡಿ...

ಸಚಿವ ಸಂಪುಟದ ಅರ್ಧ ಡಜನ್ ಮಂತ್ರಿಗಳ ಸಮೇತ ಮುಖ್ಯಮಂತ್ರಿಗಳೇ ಬಂದು ಭಾಷಣ ಬಿಗಿದು ಮುದ್ದೇ ಸಾರು ಉಣ್ಣುತ್ತಾರೆಂದರೆ- ಬಿಜೆಪಿಯ ಬ್ರಾಹ್ಮಣ್ಯ ತನ್ನ ಜಾತಿ ಕೆಟ್ಟಿತೆ? ಅಥವಾ ಅದರ ಲಿಂಗಾಯತ ನಾಯಕರೇ ಕುಲಗೆಟ್ಟರೆ?

ಇದು ನಿರ್ಲಜ್ಜ ಆತ್ಮವಂಚನೆಯಲ್ಲದೇ ಮತ್ತೇನಲ್ಲ. ಬ್ರಾಹ್ಮಣ್ಯವನ್ನೇ ಹಿಂದೂತ್ವವೆಂದು ಪ್ರತಿಪಾದಿಸುತ್ತಿರುವ ಸಂಘ ಪರಿವಾರ ಆ ಕಾಲದಿಂದಲೂ ಮಾಂಸಾಹಾರದ ಕಡುವಿರೋಧಿ. ಶಾಲಾ ಮಕ್ಕಳ ಬಿಸಿಯೂಟದಲ್ಲಿ ಮೊಟ್ಟೆ ಸೇರಿಸಿದ್ದನ್ನೇ ಮಹಾಪಾಪವೆಂದು ಪ್ರತಿಭಟಿಸಿದ ಪೇಜಾವರ ಸ್ವಾಮಿ ಸೇರಿದಂತೆ ಬಹುತೇಕ ಲಿಂಗಾಯತ ಮಠಾಧಿಪತಿಗಳೆಲ್ಲ ಮೊಟ್ಟೆ ಊಟದ ವಿರುದ್ಧ ಬೀದಿಗಿಳಿಯುವಂತೆ ಮಾಡಿದ್ದೇ ಸಂಘ ಪರಿವಾರ. ಈಗ ಬಿಜೆಪಿಯೇ ಬಾಡೂಟವನ್ನು ಪಕ್ಷದ ಅಧಿಕೃತ ಕಾರ್ಯಕ್ರಮವನ್ನಾಗಿ ಆಚರಿಸಹೊರಟರೆ ಅದೇ ಆರೆಸ್ಸೆಸ್ ಮುಖಂಡರು ಲಜ್ಜೆಗೆಟ್ಟು ಮುದ್ದೇ ನುಂಗುತ್ತಾರೆ!

ಗುಂಡು ತುಂಡಿನ ಪಾರ್ಟಿಗಳ ವಿಷಯಕ್ಕೆ ಬಂದರೆ ಅದು ಕಾಂಗ್ರೆಸ್ ಸಂಸ್ಕೃತಿಯಲ್ಲೇ ಇದೆ. ಜೆಡಿಎಸ್ ಕೂಡ ಹೊರತೇನಲ್ಲ. ಆದರೆ ಬಿಜೆಪಿಯದು ಕಟ್ಟರ್ ಬ್ರಾಹ್ಮಣ್ಯ. ಮಾಂಸಾಹಾರವನ್ನದು ತಾಮಸ, ರಕ್ಕಸ, ಪೈಶಾಚಿಕವೆಂದು ಬಗೆದಿದೆ. ತೀರಾ ಖಾಸಗಿಯಾಗಿ ಬಿಜೆಪಿಯ ಕೆಲ ಶೂದ್ರ ನಾಯಕರು ಬಾಡೂಟ ಇಟ್ಟಾಗಲೂ ಆರೆಸ್ಸೆಸ್

ಶಾಲಾ ಮಕ್ಕಳಿಗೆ ಮೊಟ್ಟೆ ಬೇಡ ಇವರಿಗೆ ಮಟನ್ ಬೇಕು!

ನೀಡಿದ ಅನೇಕ ನಿದರ್ಶನಗಳಿವೆ. ಹಾಗಂತ ಸೋಮಣ್ಣನಿಗಾಗಲಿ, ಮುಖ್ಯಮಂತ್ರಿ ಯಡಿಯೂರಪ್ಪನವರಿಗಾಗಲಿ ಗೊತ್ತಿಲ್ಲವೆಂದಲ್ಲ.

ಸೋಮಣ್ಣನಿಗೆ ಪ್ರತಿ ಚುನಾವಣೆಯಲ್ಲೂ ಈ ಥರದ ಬಾಡೂಟ ಏರ್ಪಡಿಸುವ ಖಯಾಲಿಯಿದೆ. ಈ ಹೊತ್ತಿಗಾಗಲೇ ಚಂದ್ರೇಗೌಡ, ಪಿ.ಸಿ. ಮೋಹನ್ ಮತ್ತು ಕಟ್ಟಾ ಬಾಡೂಟ ಏರ್ಪಡಿಸಿದ್ದರಿಂದ ಸಹಜವಾಗೇ ಅನಂತ್‌ಕುಮಾರ್ ಮತ್ತು ಸೋಮಣ್ಣನ ಮೇಲೆ ಒತ್ತಡವಿತ್ತು. ತಾನು ಬಿಜೆಪಿ ಸೇರಿದ್ದು, ತನ್ನಿಂದಲೇ ಕೃಷ್ಣ ಭೈರೇಗೌಡ ಸೋತು ಅನಂತ್‌ಕುಮಾರ್ ಗೆದ್ದಿದ್ದು ಮತ್ತು ತನಗೆ ಮಂತ್ರಿಗಿರಿ ದಕ್ಕುತ್ತಿರುವುದರ ಹಿನ್ನೆಲೆಯಲ್ಲಿ ತನ್ನ ತಾಕತ್ ಪ್ರದರ್ಶನಕ್ಕೊಂದು ನೆಪ ಸೋಮಣ್ಣನಿಗೆ ಬೇಕಿತ್ತು.

ಸರಿಸುಮಾರು ಐನೂರು ಕುರಿಗಳಷ್ಟು ಮಾಂಸ ಮತ್ತು ಐದು ಸಾವಿರಕ್ಕೂ ಅಧಿಕ ಕೋಳಿಗಳನ್ನು ಪೂರೈಸುವ ಕಾಂಟ್ರಾಕ್ಟ್ ವಹಿಸಿಕೊಂಡಿದ್ದು ಮೆಟ್ರೋ ಕಂಪೆನಿ. ಅಡುಗೆ ಮಾಡಿ ಬಡಿಸುವ ಉಸ್ತುವಾರಿ ಹೊತ್ತವನು ಆ ಕಾಲದಿಂದಲೂ ಸುತ್ತೂರು ಸ್ವಾಮಿಗಳ ಜೆಡಿಎಸ್ ಸಂಸ್ಥೆಯ ಅಧಿಕೃತ ಬಾಣಸಿಂಗನಂತಿರುವ ಕೇಶವ ಎಂಬಾತ. ಅನಂತ್‌ಕುಮಾರ್ ಪ್ರತಿನಿಧಿಸುವ ಬೆಂಗಳೂರು ದಕ್ಷಿಣದ ವಿವಿಧ ಸ್ಲಮ್ಮುಗಳಿಂದ ಜನರನ್ನು ಕರೆತರಲೆಂದೇ ನೂರಕ್ಕೂ ಹೆಚ್ಚು ಕೆಎಸ್ಸಾರ್ಟಿಸಿ ಬಸ್ಸುಗಳನ್ನು ಬಿಟ್ಟರು. ಪ್ಯಾಲೇಸ್ ಮೈದಾನದ ಗಾಯತ್ರಿ ವಿಹಾರವೆಂಬ ವಿಶಾಲ ಪಾರ್ಟಿ ಹಾಲ್ ಮತ್ತು ಅದರ ಆಸುಪಾಸಿನ ಮೇಖ್ರಿ ಸರ್ಕಲ್, ವಿಂಡ್ಸರ್ ಮೇನರ್, ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದ ಸುತ್ತಮುತ್ತ ಬಿಜೆಪಿಯ ಕಮಲದ ಜೊತೆಗೆ ಸೋಮಣ್ಣನ ಥರೇವಾರಿಯ ಕಟೌಟುಗಳನ್ನು ಹಾಕಿ ಜೊತೆಗೆ ಯಡ್ಡಿ, ಅನಂತ್‌ಕುಮಾರ್, ಅಡ್ವಾಣಿಯವರ ಫೋಟೋಗಳೂ ರಾರಾಜಿಸತೊಡಗಿದವು.

ಒಂದೇ ಮಾತಲ್ಲಿ ಹೇಳಬೇಕೆಂದರೆ ಸೋಮಣ್ಣನ ಬಾಡೂಟವೆಂಬುದು ಬಿಜೆಪಿ ಸರ್ಕಾರದ ಮೊಟ್ಟಮೊದಲ ಅಧಿಕೃತ, ಸರ್ಕಾರಿ ಪೋಷಿತ, ಪಕ್ಷಸಮ್ಮತ, ಮುಖ್ಯಮಂತ್ರಿ ಆದಿಯಾಗಿ ಸಂಪುಟದ ಅರ್ಧಡಜನ್ ಮಂತ್ರಿಗಳು ಭಾಗವಹಿಸಿದ ವಿಶಿಷ್ಟ 'ಮಾಂಸ ಭಕ್ಷಣಾ ಕೂಟ.'

ಅಲ್ಲಿಗೆ ಮಾಂಸ ಭಕ್ಷಣೆಗಾಗಲಿ, ಮಾಂಸಾಹಾರಿ ಔತಣಕೂಟವಾಗಲಿ ಬಿಜೆಪಿಯಂಥ ಮಡಿವಂತ ಪಕ್ಷವೊಂದಕ್ಕೆ ಅಪಥ್ಯವಲ್ಲ ಎಂದಾಯ್ತು. ಮಾಂಸ ಭಕ್ಷಣಾ ಕೂಟ ಕೂಡ ಬಿಜೆಪಿ ಅಧಿಕೃತ ಕಾರ್ಯಕ್ರಮವಾಗುವುದಾದರೆ, ಇನ್ನು ಮುಂದೆ ಮಾಂಸದ ಜೊತೆ ಮದ್ಯ ಕೂಡ ಸೇರುವುದು ಯಾವ ಲೆಕ್ಕ?

ಶಾಲಾಮಕ್ಕಳ ಬಿಸಿಯೂಟಕ್ಕೆ ಮೊಟ್ಟೆ ಸೇರಿಸಿದ್ದನ್ನೇ ಪ್ರತಿಭಟಿಸಿದ ಪೇಜಾವರ ಸ್ವಾಮೀಜಿ ತನ್ನದೇ ಪಕ್ಷದ ನಾಯಕರು ಏರ್ಪಡಿಸಿದ್ದ ಬಿರಿಯಾನಿ ಪಾರ್ಟಿಯನ್ನು ಸಮರ್ಥಿಸುತ್ತಾರಾ? ಮೊಟ್ಟೆಯನ್ನು ತಾಮಸ ಭಕ್ಷ್ಯವೆಂದು ಬಿಸಿಯೂಟದ ವಿರುದ್ಧ ದನಿಯೆತ್ತಿದ ಲಿಂಗಾಯತ ಮಠಾಧಿಪತಿಗಳೆಲ್ಲ ತಮ್ಮದೇ ಜಾತಿಯ ಮುಖ್ಯಮಂತ್ರಿ ಮತ್ತು ಸೋಮಣ್ಣನಂಥ ನಾಯಕರು ಏರ್ಪಡಿಸಿದ ಬಾಡೂಟದ ವಿರುದ್ಧ 'ಫತ್ವಾ' ಹೊರಡಿಸುತ್ತಾರಾ?

ಕನಿಷ್ಠ ಈ ಬಗ್ಗೆ ರಾಮಸೇನೆ, ಭಜರಂಗಿಗಳಾದರೂ ಉಸಿರೆತ್ತಬೇಕಲ್ಲವೆ? ಏಕೆಂದರೆ ಕಸಾಯಿಖಾನೆಗೆ ದನ ಸಾಗಿಸುತ್ತಾರೆಂದು ಆದಿ ಉಡುಪಿಯ ಬೆತ್ತಲೆ ಪ್ರಕರಣಕ್ಕೆ ಕಾರಣರಾದವರು ಇದೇ ಭಜರಂಗಿ, ಶ್ರೀರಾಮ ಸೈನಿಕರು. ಮಾಂಸ ಗೋವಿನದಾದರೇನು, ಕುರಿಯದಾದರೇನು? ಗೋಮಾಂಸ ತಿನ್ನುವುದಷ್ಟೇ ಅಕ್ಷಮ್ಯವೆ? ಕುರಿಗೂ ಜೀವವಿದೆಯಲ್ಲವೆ?

ಮಾಂಸ ಭಕ್ಷಣೆಯ ವಿರುದ್ಧ ಅದರಲ್ಲೂ ಪಕ್ಷದ ಕಾರ್ಯಕ್ರಮವಾಗಿ ಮಾಂಸಾಹಾರಿ ಔತಣಕೂಟದ ವಿರುದ್ಧ ಹಿಂದಿನಿಂದಲೂ ಮಡಿವಂತಿಕೆಯನ್ನು ಆಚರಿಸಿಕೊಂಡೇ ಬಂದ ಆರೆಸ್ಸೆಸ್, ಬಿಜೆಪಿ ಸಂಘ ಪರಿವಾರದ ಕಪಟತನಕ್ಕಿದೊಂದು ನಿದರ್ಶನವಷ್ಟೇ. ಜನಸಾಮಾನ್ಯರು ಮಾಂಸ ತಿಂದರೆ ತಪ್ಪು. ಕಾಂಗ್ರೆಸ್, ಜೆಡಿಎಸ್‌ಗಳು ಬಿರಿಯಾನಿ ಪಾರ್ಟಿ ಇಟ್ಟರೆ ಅದು ಅವಲಕ್ಷಣ. ಅದೇ ಬಿಜೆಪಿ ಲಿಂಗಾಯತ ನಾಯಕರು ಬಾಡೂಟವಿಟ್ಟರೆ ಆ ಬಗ್ಗೆ ಯಾರಿಗೂ ಆಕ್ಷೇಪವಿಲ್ಲ?

ವಿಕಟ ಹೇಗಿದೆಯೆಂದರೆ, ಸೋಮಣ್ಣನ ಬಾಡೂಟದ ಮುಖ್ಯ ಆಕರ್ಷಣೆಯಂತಿದ್ದವರ ಪೈಕಿ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ ಕೂಡ ಒಬ್ಬರು. ಸೋಮಣ್ಣನಂತೆ ಸಿದ್ಧಗಂಗೆಯ ಶಿವಕುಮಾರ ಸ್ವಾಮಿಗಳಿಗೆ ಪರಮಶಿವಯ್ಯ ಕೂಡ ಪರಮಾಪ್ತರು. ಒಳಗೆ ಸಹಸ್ರಾರು ಜನ ಕೂತು ಮಾಂಸ ಭಕ್ಷಿಸುತ್ತಿದ್ದರೆ ಹೊರಗೆ ನಿಲ್ಲಿಸಿದ್ದ ಪರಮಶಿವಯ್ಯನವರ ಕಾರಿನಿಂದ ಕೇಳಿಬರುತ್ತಿದ್ದ ಬಸವಣ್ಣನವರ ವಚನವೊಂದು ಹೀಗಿತ್ತು-

ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ
ತಳಿರಾ ಮೇಯ್ದಿತ್ತು
ಕೊಂದಹರೆಂಬುದನರಿಯದೆ ತನ್ನ ಬೆಂದೊಡಲ
ಹೊರೆಯ ಹೊರೆದಿತ್ತು
ಕೊಂದವರುಳಿವರೆ ಕೂಡಲ ಸಂಗಮದೇವಾ....

ಬ್ರಾಹ್ಮಣ್ಯದ ಪಾಪಕ್ಕೆ ಬಿದ್ದು ಕುಲಗೆಟ್ಟ ಲಿಂಗವಂತ ನಾಯಕರಿಗೆ ಕನಿಷ್ಠ ಬಸವಣ್ಣನ ವಚನವಾದರೂ ಕಣ್ಣು ತೆರೆಸಬೇಕಿತ್ತಲ್ಲವೆ? ■

ಬೀದಿನಾಯಿಗಳ ಹತ್ಯಾಕಾಂಡವೂ ಚೆಡ್ಡಿ ಪತ್ರಕರ್ತರ ದುರ್ಬುದ್ಧಿಯೂ

ಮಾಂಸದಂಗಡಿಗಳ ವಿರುದ್ಧ ಕಳೆದೆರಡು ವರ್ಷಗಳಿಂದ ಬೊಬ್ಬೆ ಹಾಕುತ್ತಿರುವ ಚೆಡ್ಡಿ ಪತ್ರಕರ್ತರ ಕುಚೋದ್ಯಕ್ಕೆ ಅನ್ಯಾಯವಾಗಿ ಬೀದಿನಾಯಿಗಳು ಬಲಿಯಾದವು. ವಿಶೇಷವಾಗಿ ಮುಸ್ಲಿಮರೇ ಮಟನ್‌ಶಾಪ್‌ಗಳನ್ನು ನಡೆಸುವುದರಿಂದ, ಮುಸ್ಲಿಮರು 'ಹಲಾಲ್' ಮಾಡಿದ ಕುರಿಮಾಂಸಕ್ಕೇ ಜನ ಮುಗಿ ಬೀಳುವುದರಿಂದ ಸಹಜವಾಗೇ ಮಾಂಸದಂಗಡಿಗಳ ವಿರುದ್ಧ ಚೆಡ್ಡಿ ಪತ್ರಕರ್ತರಿಗೆ ಸಿಟ್ಟಿತ್ತು. ಏಕಾಏಕಿ ಬೀದಿನಾಯಿಗಳು ಕಚ್ಚಿದ ಪ್ರಕರಣಕ್ಕೆ ಪತ್ರಿಕೆಗಳೆಲ್ಲ ವಿಪರೀತ ಪ್ರಚಾರ ಕೊಟ್ಟಿದ್ದಕ್ಕೆ ಇದೇ ಕಾರಣವಾಗಿತ್ತು.

ಮಾಂಸದಂಗಡಿಗಳವರು ತಮ್ಮ ತ್ಯಾಜ್ಯವನ್ನು ಬೇಕಾಬಿಟ್ಟಿ ಎಸೆಯುತ್ತಾರಾದ್ದರಿಂದ ಅದನ್ನು ತಿಂದೇ ಬೀದಿನಾಯಿಗಳು ಮನುಷ್ಯರನ್ನು ಕಚ್ಚುತ್ತಿವೆಯೆಂಬ ವಿಚಿತ್ರ ವಾದವೊಂದನ್ನು ಹುಟ್ಟು ಹಾಕಿದ ಚೆಡ್ಡಿ ಪತ್ರಕರ್ತರ ದುರ್ಬುದ್ಧಿಯ ಫಲವಾಗಿ ಕುಮಾರಸ್ವಾಮಿ ಸರ್ಕಾರ 30 ಸಾವಿರಕ್ಕೂ ಅಧಿಕ ಬೀದಿನಾಯಿಗಳನ್ನು ಕೊಂದು ಹಾಕಿತು. ಬೀದಿನಾಯಿಗಳ ಮಾರಣಹೋಮಕ್ಕೆ ಅತೀ ಮುಖ್ಯ ಪಾತ್ರಧಾರಿಯಾಗಿದ್ದ ಆರೋಗ್ಯ ಮಂತ್ರಿ ಅಶೋಕ್ ಕೂಡ ತಾನು ಒಂದಿಬ್ಬರು ಚೆಡ್ಡಿ ಪತ್ರಕರ್ತರ ಮುಲಾಜಿಗೆ ಬಿದ್ದೇ ನಾಯಿಗಳನ್ನು ಕೊಲ್ಲಿಸಬೇಕಾಯಿತೆಂದು ತಲೆ ಚಚ್ಚಿಕೊಂಡರು.

ಜನ್ಮತಃ ನಾಯಿಯೇ ಮಾಂಸಾಹಾರಿ ಪ್ರಾಣಿ. ಮಾಂಸ ತಿಂದಾಕ್ಷಣ ಅದು ಮನುಷ್ಯರನ್ನು ಕಚ್ಚುತ್ತದೆಯೆಂಬುದೇ ಚೆಡ್ಡಿ ಪತ್ರಕರ್ತರ ವಾದವಾದರೆ ಈಗ ಬಿಜೆಪಿ ಪಕ್ಷವೇ ಬಿರಿಯಾನಿ ಪಾರ್ಟಿ ಏರ್ಪಡಿಸಿದೆಯಲ್ಲ; ಅದಕ್ಕೇಕೆ ಚೆಡ್ಡಿ ಪತ್ರಕರ್ತರು ತೆಪ್ಪಗಿದ್ದಾರೆ. ಮಾಂಸ ತಿಂದ ಮಾತ್ರಕ್ಕೆ ಬೀದಿನಾಯಿ ಮನುಷ್ಯರನ್ನು ಕಚ್ಚುತ್ತದೆ ಎನ್ನುವುದಾದರೆ, ಮಾಂಸ ತಿಂದ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಕೊಲೆ, ಸುಲಿಗೆ, ಗೂಂಡಾಗಿರಿ, ರೋಲ್‌ಕಾಲ್‌ಗಿಳಿಯುವುದಿಲ್ಲವೆ? ಮಾಂಸಕೂಟ ನಡೆಸಿದ ಬಿಜೆಪಿ ನಾಯಕರು ಲೂಟಿಗಿಳಿಯುವುದಿಲ್ಲವೆ? ಮುಸ್ಲಿಮರು ಮಟನ್ ಅಂಗಡಿಯಿಟ್ಟರೆ ತಪ್ಪು; ಬೀದಿಯ ನಾಯಿಗಳು ಮೂಳೆ ಕಡಿದರೆ ತಪ್ಪು; ಅದೇ ಬಿಜೆಪಿ ನಾಯಕರು ಬಿರಿಯಾನಿ ಪಾರ್ಟಿಯಿಟ್ಟರೆ ಮಾತ್ರ ಸಮ್ಮತವೆ?


ಚೆಡ್ಡಿ ಪತ್ರಕರ್ತರ ಕಪಟಕ್ಕೂ ಆರೆಸ್ಸೆಸ್ ಆತ್ಮವಂಚನೆಗೂ ದೊಡ್ಡ ವ್ಯತ್ಯಾಸವೇನಿಲ್ಲ. ■



ಕಬಾಬ್ ತಿನ್ನೋಕೆ...ಅರಮನೆ ಮೈದಾನದಲ್ಲಿ ಚಿಕನ್-ಮಟನ್ ತಿನ್ನಲು ಗಡಿಗಟ್ಟಿದಂತೆ ಬಂದಿರುವ ಹಿಂದುತ್ವವಾದಿಗಳು...

ಮಂತ್ರಿಗಳ ಟೆಲಿಫೋನ್ ಕದ್ದಾಲಿಕೆ

ಬಾಯಲ್ಲಿ ಬೆಣ್ಣೆ ಬಗಲಲ್ಲಿ ದೊಣ್ಣೆ





ಜ್ಯೋತಿಪ್ರಕಾಶ್ ಮಿರ್ಜಿ

...ನ್ನದೇ ಸಚಿವ ಸಂಪುಟದ ಮಂತ್ರಿಗಳ ... ಯಡ್ಡಿಗೆ ವಿಶ್ವಾಸವಿಲ್ಲ. ಎಲ್ಲಿ ಈಶ್ವರಪ್ಪ ...ಕುಯ್ಯಬಹುದು? ಕೃಷ್ಣಯ್ಯಶೆಟ್ಟಿ ಯಾವ ...ಮುಲ್ಲಿ ಬೆನ್ನಿಗಿರಿದಾನು? ಮಗನ ಸೋಲಿಗೆ ...ಮೂರ್ತಿ ಏನೆಲ್ಲಾ ಕತ್ತಿ ...ಮುತ್ತಿರಬಹುದು? ಸುರೇಶ್ ...ರ್ ನಿಷ್ಠೆ ಎಲ್ಲಿಯತನಕ? ...ಲ್ಲ ಯತ್ನಾಳ್ ಜೊತೆ ...ೀಡಿಸಬಹುದು? ಜಗದೀಶ್ ... ಬತ್ತಿ ಇಟ್ಟರೆಂದರೆ ...ೀತು?

...ಡ್ಡಿಯ ತಲೆತಿನ್ನುತ್ತಿರುವ ... ಅನುಮಾನದ ಹುಳಗಳೇ ...ದೊಮ್ಮೆ ಸರ್ಕಾರದ ...ವನ್ನೇ ಕೊರೆಯಬಹುದೆಂಬ ...ತ್ರ ನಿಚ್ಚಳಗೊಂಡಿದ್ದು ...ಗಳ ಟೆಲಿಫೋನ್ ...ಕೆಯಲ್ಲಿ.

...ಮಾರೆಲ್ಲ ಮಂತ್ರಿಗಳು ...ಫೋನ್ ಕದ್ದಾಲಿಕೆಗೆ ...ಮಾಗಿದ್ದಾರೋ ಅವರೆಲ್ಲ ...ಂಗವಾಗೇ ಕಿಡಿಕಾರಿದ್ದಾರೆ. ...ರಾಯಿ ಮಂತ್ರಿ ಕೃಷ್ಣಯ್ಯ ...ಮ ಫೋನ್ ಕದ್ದಾಲಿಸಿದ್ದು ...ರಪ್ಪ ಆದಿಯಾಗಿ ಕಾನೂನು ...ತ್ರಿ ಸುರೇಶ್‌ಕುಮಾರ್ ತನಕ ಯಡ್ಡಿ ...ಟದ ಒಂದು ಡಜನ್ ಮಂತ್ರಿಗಳೂ, ಅವರ ... ಸಹಾಯಕರ ಫೋನುಗಳನ್ನೆಲ್ಲ ಇಂಟಲಿಜೆನ್ಸ್ ...ಗದ ಪೊಲೀಸರು ಕದ್ದಾಲಿಸುತ್ತಿರುವುದು ...ದೊಂದು ಅಂತಃಕಲಹದ ಮುನ್ಸೂಚನೆಯಷ್ಟೆ.

...ಇದು ಶುರುವಾಗಿದ್ದು ಕಳೆದ ಲೋಕಸಭಾ ...ವಣೆಯಲ್ಲಿ, ಕೋಲಾರದ ಬಿಜೆಪಿ ಅಭ್ಯರ್ಥಿ ...ಸ್. ವೀರಯ್ಯ ಏಕಾಏಕಿ ಕೃಷ್ಣಯ್ಯ ಶೆಟ್ಟಿಯ ...ದ್ಧ ಮುಖ್ಯಮಂತ್ರಿಗೆ ದೂರು ಕೊಡುತ್ತಾರೆ. ... ಪಕ್ಷವಿರೋಧಿ ಚಟುವಟಿಕೆಯ ಆರೋಪ. ...ಯ್ಯ ಶೆಟ್ಟಿ ಒಳಗೊಳಗೇ ಕಾಂಗ್ರೆಸ್ ಅಭ್ಯರ್ಥಿ ...ಚ್. ಮುನಿಯಪ್ಪನವರ ಪರ ಕೆಲಸ ...ಮುತ್ತಿದ್ದಾರೆಂಬುದು ವೀರಯ್ಯನ ಸಿಟ್ಟಿಗೆ ...ಣವಾಗಿತ್ತು.

...ಅದು ನಿಜ ಕೂಡ. ಪಕ್ಷದ ಅಭ್ಯರ್ಥಿಯಾಗಿದ್ದ ...ಯ್ಯ ಏನಾದರೂ ಗೆದ್ದನೆಂದರೆ ಮುಂದೊಮ್ಮೆ ... ಮುಳುವಾಗುತ್ತಾನೆ. ಹೇಗಿದ್ದರೂ ಕಾಂಗ್ರೆಸ್ಸಿನ ...ನಿಯಪ್ಪ ತನ್ನ ಹಳೇ ಹಿತೈಷಿ. ಪಕ್ಷ ...ಯಾದರೂ ಕೃಷ್ಣಯ್ಯ ಶೆಟ್ಟಿ ಮತ್ತು ಕೆ.ಎಚ್. ...ನಿಯಪ್ಪನವರ ಮಧ್ಯೆ ವ್ಯಾವಹಾರಿಕ ನಂಟಿದೆ. ...ಮ, ವ್ಯವಹಾರದ ಮುಂದೆ ಶೆಟ್ಟಿಗೆ ಪಕ್ಷನಿಷ್ಠೆ ...ವ ಲೆಕ್ಕ?

...ಮುನಿಯಪ್ಪನವರ ಹಂಗಿಗೆ ಬಿದ್ದ ಕೃಷ್ಣಯ್ಯ ... ಮಾಲೂರಿನ ತನ್ನೆಲ್ಲಾ ಬೆಂಬಲಿಗರನ್ನು ಕರೆದು ...ಬಾರಿ ಕಾಂಗ್ರೆಸ್ಸಿಗೆ ಕೆಲಸ ಮಾಡುವಂತೆ ...ನಾಗಸು ಹೊರಡಿಸಿಬಿಟ್ಟ. ಇದು ಮುಖ್ಯಮಂತ್ರಿ ... ಮಾಡಿದ್ದಾರೆ.



ಸುರೇಶ್‌ಕುಮಾರ್



ಶಂಕರ್‌ಮೂರ್ತಿ

ಆದರೆ ಇಂಟಲಿಜೆನ್ಸ್ ಪೋಲೀಸ್ವರ ಅಜ್ಞಾನವಿತ್ತಲ್ಲ, ಕೋಲಾರದಲ್ಲಿ ಕಾಂಗ್ರೆಸ್‌ನ ಜಿಲ್ಲಾ ಪಂಚಾಯ್ತಿ ಸದಸ್ಯರೊಬ್ಬರ ಜೊತೆ ಕೃಷ್ಣಯ್ಯ ಶೆಟ್ಟಿ ಡೀಲು ಕುದುರಿಸುತ್ತಿರುವುದನ್ನು ಯಾರೋ ಅಪರಿಚಿತನೊಬ್ಬ ತನ್ನ ವಿಡಿಯೋ ಕ್ಯಾಮೆರಾದಲ್ಲಿ ಸೆರೆಹಿಡಿಯುತ್ತಿದ್ದ. ಗುಮಾನಿ ಬಂದ ಶೆಟ್ಟಿ ಆತನನ್ನು ಪ್ರಶ್ನಿಸಲೆತ್ನಿಸಿದರೆ ಆತ ಸರ್ಕಾರಿ ಕಾರೊಂದರಲ್ಲಿ ಪರಾರಿಯಾದ. ಆಗಲೇ ಕೃಷ್ಣಯ್ಯ ಶೆಟ್ಟಿಗೆ ಗುಮಾನಿ ಶುರುವಾಗಿದೆ. ಇದಾದ ಎರಡನೇ ದಿನಕ್ಕೆ ಮಾಲೂರಿನಲ್ಲೂ ಇದೇ ರೀತಿಯ ಅನುಭವ ಶೆಟ್ಟಿಗಾಗಿದೆ. ಮಾಲೂರಿನ ಹಳ್ಳಿಹಳ್ಳಿಗಳಲ್ಲಿ ಸುತ್ತಾಡುತ್ತಾ ತನ್ನ ಜೊತೆ ಒಂದಿಬ್ಬರು ಕಾಂಗ್ರೆಸ್ಸಿನ ಜಿಲ್ಲಾ ಪಂಚಾಯ್ತಿ ಸದಸ್ಯರನ್ನು ಕರಕೊಂಡು ಕೆ.ಎಚ್. ಮುನಿಯಪ್ಪನವರಿಗೆ ಮತ ಕೇಳಿದ್ದನ್ನೂ ಹಿಂಬಾಲಿಸುತ್ತಿದ್ದ ಪೊಲೀಸರು ಚಿತ್ರೀಕರಿಸಿದ್ದಾರೆ. ಅದು ಬೆಂಗಳೂರಿನ ಬನಶಂಕರಿ ದೇವಸ್ಥಾನಕ್ಕೂ ಬಿಡದೇ ಕೃಷ್ಣಯ್ಯ ಶೆಟ್ಟಿಯನ್ನು ಪೊಲೀಸರು ಹಿಂಬಾಲಿಸುವಷ್ಟರಮಟ್ಟಿಗೆ ಬೆಳೆದಿದೆ.

ಇದು ಗೊತ್ತಾಗಿದ್ದೇ ಕೃಷ್ಣಯ್ಯ ಶೆಟ್ಟಿ ಪತ್ರಕರ್ತರ ಮುಂದೆ ಇಂಟಲಿಜೆನ್ಸ್ ಪೊಲೀಸರ ವಿರುದ್ಧ ಕಿಡಿಕಾರಿದ್ದಾನೆ. ಅಲ್ಲಿಗೆ ಮಂತ್ರಿಗಳ ಟೆಲಿಫೋನ್ ಕದ್ದಾಲಿಕೆ ಬಯಲಾಗಿದೆ. ಇದಕ್ಕೂ ಮೊದಲೇ ಶಿವಮೊಗ್ಗದಲ್ಲಿ ಈಶ್ವರಪ್ಪನವರಿಗಿದು ಗೊತ್ತಾಗಿದೆ. ಮಗ ರಾಘುವನ್ನು ಸೋಲಿಸಲು ಈಶ್ವರಪ್ಪ ಬಂಗಾರಪ್ಪನವರ ಜೊತೆ ಕೈಜೋಡಿಸಿದ್ದಾರೆಂಬ ಗುಮಾನಿ ಯಡ್ಡಿಗಿತ್ತು. ಅದಕ್ಕೆ ತಕ್ಕಂತೆ ಡಿ.ಎಚ್. ಶಂಕರಮೂರ್ತಿ ಶಿವಮೊಗ್ಗ ತೊರೆದು ಸದಾನಂದಗೌಡರ ಪರ ಪ್ರಚಾರಕ್ಕೆಂದು ಚಿಕ್ಕಮಗಳೂರಿಗೆ ಹೊರಟುಬಿಟ್ಟರು.

ತನ್ನ ಮಗನನ್ನು ಸೋಲಿಸಲು ಶಂಕರಮೂರ್ತಿ ಮತ್ತು ಈಶ್ವರಪ್ಪ ಒಟ್ಟೊಟ್ಟಿಗೇ ಕತ್ತಿ ಮಸೆಯುತ್ತಿದ್ದಾರೆಂಬ ಅನುಮಾನ ಒಂದೆಡೆಯಾದರೆ ಮತ್ತೊಂದೆಡೆ ಗೂಳಿಹಟ್ಟಿ ಶೇಖರ್, ನರೇಂದ್ರ ಸ್ವಾಮಿ ಮತ್ತು ಪಾವಗಡದ ವೆಂಕಟರಮಣಪ್ಪನಂಥ ಪಕ್ಷೇತರರ ಮೇಲೆ ಸಂಶಯ.

ಇದಕ್ಕೆ ಮುಖ್ಯ ಕಾರಣ ಗೂಳಿಹಟ್ಟಿ ಶೇಖರ್ ಚಿತ್ರದುರ್ಗಕ್ಕೆ ತನ್ನ ತಮ್ಮನನ್ನೇ ಕಣಕ್ಕಿಳಿಸಿದ್ದು. ತನ್ನ ಮಗನಿಗೆ ಚಿತ್ರದುರ್ಗದ ಟಿಕೆಟ್ ತಪ್ಪಿದ ಸಿಟ್ಟಿಗೆ ಬಿದ್ದ ಪಾವಗಡದ ವೆಂಕಟರಮಣಪ್ಪನೂ ಗೂಳಿಹಟ್ಟಿ ಶೇಖರ್ ಬೆನ್ನಿಗೆ ನಿಂತ. ಇವರೊಂದಿಗೆ ಮತ್ತೊಬ್ಬ ಪಕ್ಷೇತರ ಸುಧಾಕರ್ ಕೂಡ ಕೈಜೋಡಿಸಿದ್ದು, ಜೆಡಿಎಸ್ ಅಭ್ಯರ್ಥಿ ಇಕ್ಬಾಲ್ ಅನ್ಸಾರಿಗೆ ಮಗದೊಬ್ಬ ಪಕ್ಷೇತರ ಮಂತ್ರಿ ತಂಗಡಗಿ ಒಳಗೊಳಗೇ ಬೆಂಬಲ ಕೊಟ್ಟಿದ್ದು, ಇತ್ತ ಮಂಡ್ಯದಲ್ಲಿ ನರೇಂದ್ರ ಸ್ವಾಮಿ ಕಾಂಗ್ರೆಸ್ಸಿನ ಅಂಬಿಯ ಬೆನ್ನಿಗೆ ನಿಂತಿದ್ದು ಯಡ್ಡಿಯ ಅನುಮಾನವನ್ನು ಇನ್ನಷ್ಟು ಉಲ್ಬಣಿಸಿದೆ.

ಮತ್ತೊಂದೆಡೆ ವರ್ತೂರು ಪ್ರಕಾಶ್ ಕೋಲಾರದಲ್ಲಿ ಬಹಿರಂಗವಾಗೇ ಕಾಂಗ್ರೆಸ್ಸಿನ ಮುನಿಯಪ್ಪನವರ ಬೆಂಬಲಕ್ಕೆ ನಿಂತಿದ್ದಾನೆ. ಅತ್ತ ಬೆಳಗಾವಿಯಲ್ಲೂ ಬಿಜೆಪಿಯ ಪಾಲಿಗೆ ಇದೇ ಗತಿಯಾಗಿತ್ತು. ಬಸವರಾಜ ಬೊಮ್ಮಾಯಿಗೂ ಬಿಜೆಪಿ ಅಭ್ಯರ್ಥಿ ಸುರೇಶ್ ಅಂಗಡಿಗೂ ಜಗಳವಾಗಿ ಬೆಳಗಾವಿಯ ಉಸ್ತುವಾರಿಯಾಗಿದ್ದ ಬೊಮ್ಮಾಯಿ ಚುನಾವಣಾ ಪ್ರಚಾರಕ್ಕೇ ಬರಲಿಲ್ಲ. ಇದೇ ಹೊತ್ತಿಗೆ ಬೆಂಗಳೂರು ಉತ್ತರದ ಅಭ್ಯರ್ಥಿ ಚಂದ್ರೇಗೌಡ ಸುರೇಶ್‌ಕುಮಾರ್ ವಿರುದ್ಧ ಕ್ಯಾತೆ ತೆಗೆದರು. ಅದು ಕಪೋಲಕಲ್ಪಿತ ಆರೋಪವಾಗಿತ್ತು. ತನ್ನ ಪರ ಸುರೇಶ್‌ಕುಮಾರ್ ಪ್ರಚಾರಕ್ಕೇ ಬರುತ್ತಿಲ್ಲ, ಒಳಗೊಳಗೇ ತನ್ನನ್ನು ಸೋಲಿಸಲು ಸುರೇಶ್‌ಕುಮಾರ್ ಕತ್ತಿ ಮಸೆಯುತ್ತಿದ್ದಾರೆ ಎಂದು ಚಂದ್ರೇಗೌಡ ರೊಳ್ಳೆ ತೆಗೆದದ್ದು ಯಡ್ಡಿಯ ಪಾಲಿಗೆ ಬುಡವೇ ಕುಸಿದಂತಾಗಿದೆ. ಇನ್ನೇನು ಚುನಾವಣೆಗಿನ್ನೂ ವಾರವಿದೆ ಎನ್ನುವಾಗಲೇ ಇಂಟಲಿಜೆನ್ಸ್ ಮುಖ್ಯಸ್ಥ ಮಿರ್ಜಿಗೆ ಒಂದು ಡಜನ್ ಮಂತ್ರಿಗಳ ಪಟ್ಟಿಕೊಟ್ಟು ಅವರ ಮೊಬೈಲ್, ಮನೆ ಫೋನು, ಆಪ್ತ ಸಹಾಯಕರ ಫೋನುಗಳೆಲ್ಲವನ್ನೂ ಟ್ಯಾಪ್ ಮಾಡುವಂತೆ ಆದೇಶಿಸಿದ್ದಾರೆ.





ಈಶ್ವರಪ್ಪ


ಸಮಸ್ಯೆಯೆಂದರೆ ಮಂತ್ರಿಗಳ ಖಾಸಗಿ ಮೊಬೈಲ್‌ಗಳನ್ನು ಅದರಲ್ಲೂ ಏರ್‌ಟೆಲ್, ರಿಲಯನ್ಸ್‌ಗಳಾದರೆ ಟ್ಯಾಪ್ ಮಾಡಬಹುದೇ ಹೊರತು ಬಿಎಸ್‌ಎನ್‌ಎಲ್ ನಂಬರುಗಳನ್ನಲ್ಲ. ಏಕೆಂದರೆ ಕೇಂದ್ರದಲ್ಲಿರುವುದು ಕಾಂಗ್ರೆಸ್ ಸರ್ಕಾರ. ಯಾವುದೇ ಬಿಎಸ್‌ಎನ್‌ಎಲ್ ನಂಬರನ್ನು ಕದ್ದಾಲಿಸಬೇಕೆಂದರೆ, ಆ ರಾಜ್ಯದ ಮುಖ್ಯ ಕಾರ್ಯದರ್ಶಿ ಲಿಖಿತವಾಗಿ, ನಿಖರವಾಗಿ ಕಾರಣ ಕೊಟ್ಟು ಅನುಮತಿ ಕೇಳಬೇಕು. ಇನ್ನೆಲ್ಲಿ ತಾಪತ್ರಯ ಶುರುವಾಗುತ್ತೋ ಎಂದು ಬೆದರಿದ ಮಿರ್ಜಿ ಕೃಷ್ಣಯ್ಯ ಶೆಟ್ಟಿ ಹೋದಲ್ಲಿ ಬಂದಲ್ಲೆಲ್ಲ ಕಣ್ಣಿಡುವಂತೆ ಇಂಟಲಿಜೆನ್ಸ್ ಪೊಲೀಸರನ್ನು ಛೂ ಬಿಟ್ಟಿದ್ದಾರೆ. ಮಾಲೂರಿನ ಎರಡು ಕಡೆ ಮತ್ತು ಕೋಲಾರದ ಒಂದೆಡೆ ಕೃಷ್ಣಯ್ಯ ಶೆಟ್ಟಿಯ ಚಲನವಲನಗಳನ್ನು ವೀಡಿಯೋ ಮಾಡುತ್ತಿದ್ದವರು ಪರಾರಿಯಾಗಿದ್ದಾರೆ.

ಬೆನ್ನಲ್ಲೇ ಅರ್ಧ ಡಜನ್ ಮಂತ್ರಿಗಳಿಗೆ ತಮ್ಮ ಫೋನ್ ಕದ್ದಾಲಿಸುತ್ತಿರುವುದು ಗಮನಕ್ಕೆ ಬಂದಿದೆ. ಸುರೇಶ್‌ಕುಮಾರ್, ಶಂಕರಮೂರ್ತಿ, ಬಚ್ಚೇಗೌಡ ಆದಿಯಾಗಿ ಫೋನ್ ಕದ್ದಾಲಿಕೆ ವಿರುದ್ಧ ಕಿಡಿಕಾರಿದ್ದಾರೆ. ಸ್ವತಃ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಪತ್ರಿಕಾಗೋಷ್ಠಿ ಕರೆದು ಫೋನ್ ಕದ್ದಾಲಿಕೆಯ ವಿರುದ್ಧ ತನಿಖೆಗೆ ಒತ್ತಾಯಿಸಿದ್ದಾರೆ. ತನ್ನದೇ ಮಂತ್ರಿಗಳ ಮೇಲೆ ಮುಖ್ಯಮಂತ್ರಿಗೆ ನಂಬಿಕೆಯಿಲ್ಲ, ಮುಖ್ಯಮಂತ್ರಿಯ ಬಗ್ಗೆ ಆತನ ಸಂಪುಟದ ಸಹೋದ್ಯೋಗಿಗಳಿಗೇ ಗೌರವವಿಲ್ಲ, ಪಕ್ಷದ ಅಭ್ಯರ್ಥಿಯ ವಿರುದ್ಧವೇ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸುವ ಮಂತ್ರಿ, ತನ್ನ ತಮ್ಮನಿಗೋ ಮಗನಿಗೋ ಟಿಕೆಟ್ ಸಿಗಲಿಲ್ಲವೆಂದು ಅಧಿಕೃತ ಅಭ್ಯರ್ಥಿಗೆ ಬೆನ್ನಗಿರಿಯುವ ಮಂತ್ರಿಗಳು ಮತ್ತು ವಿಡಿಯೋ ಹಿಡಿಯಲು ಯತ್ನಿಸಿ ಪರಾರಿಯಾಗುವ ಪೊಲೀಸರು!

ಸರ್ಕಾರವೊಂದರ ಪೊಳ್ಳುತನಕ್ಕೆ ಅಧಿಕಾರಸ್ಥ ಪಕ್ಷವೊಂದರ ಅಂತಃಕಲಹಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

■ ದಾ. ಸೋಮನಾಥ್

ಶೆಟ್ಟರ್ ಬುಟ್ಟಿಯಲ್ಲಿ ಇಪ್ಪತ್ತು ಶಾಸಕರು



ಆಟ, ಮೈಮಾಟ, ಮಾರಾಟ




ಅಂತೂ ಇಂತೂ ಐಪಿಎಲ್ ಎಂಬ ಜಾತ್ರೆ ಮುಗಿದಿದೆ. ಕಳೆದ ವರ್ಷ ಕೊನೇ ಸ್ಥಾನದಲ್ಲಿದ್ದ ಬೆಂಗಳೂರು ಮತ್ತು ಹೈದರಾಬಾದ್ 'ತಂಡ'ಗಳು ಫೈನಲ್‌ನಲ್ಲಿ ಸೆಣಸಾಡಿ ಯುದ್ಧ ಮುಗಿಸಿವೆ. ಆದರೆ ಇದರಲ್ಲಿ ಫಿಕ್ಸಿಂಗ್ ವಾಸನೆ ಗಾಢವಾಗಿ ಎಲ್ಲರ ಮೂಗಿಗೆ ತಾಕುತ್ತಿದೆಯಲ್ಲವೇ?

ಐಪಿಎಲ್‌ನಲ್ಲಿ ಮೊದಲ ಬಾರಿಗೆ ಮ್ಯಾಚ್ ಫಿಕ್ಸಿಂಗ್ ವಾಸನೆ ಹೊರಬಂದಿದ್ದು ಸರಣಿ ಸೋಲುಗಳಿಂದ ಹೈರಾಣಾಗಿದ್ದ ಕೊಲ್ಕತ್ತಾ ನೈಟ್ ರೈಡರ್ಸ್ ಮತ್ತು ಸೆಮಿಫೈನಲ್ ತಲುಪಲೂ ತಿಣುಕಾಡುತ್ತಿದ್ದ ಬೆಂಗಳೂರು ರಾಯಲ್ ಚಾಲೆಂಜರ್ಸ್ ನಡುವಿನ ಪಂದ್ಯದಲ್ಲಿ, ಒಳ್ಳೆ ಫಾರ್ಮ್‌ನಲ್ಲಿದ್ದ ಬ್ರಾಡ್ ಹಾಡ್ಜ್‌ರನ್ನು ಕೊಲ್ಕತ್ತಾ ತಂಡದಿಂದ ಹೊರಗೆ ಕೂಡಿಸಿದ್ದೇ ವಿವಾದದ ಮೂಲವಾಗಿದ್ದು, ಹಾಡ್ಜ್ ಅನುಮತಿ ಇಲ್ಲದೇ ವಿಐಪಿ ಲಾಂಜ್‌ನಲ್ಲಿ ಕುಳಿತಿದ್ದು ಸಂಶಯದ ಹೊಗೆ ಏಳಲು ಕಾರಣವಾಗಿತ್ತು. ಹಾಳಾಗಿ ಹೋಗಲಿ, ಆದರೆ ಈ ರೊಕ್ಕದ ಗಲಾಟೆಯಲ್ಲಿ ಆಟವೇ ಹಳ್ಳ ಹಿಡಿಯಿತಲ್ಲ?

ಹೇಳಿಕೇಳಿ ಐಪಿಎಲ್ ಅಂದರೇನೆ ಪಕ್ಕಾ ವ್ಯಾಪಾರ. ಅಲ್ಲಿ ಎಸೆಯಲ್ಪಡುವ ಪ್ರತಿ ಬಾಲಿನ ಹಿಂದೆಯೂ ಕೋಟಿಗಳ ನೆರಳು ಕಾಣಿಸುತ್ತದೆ. ಒಟ್ಟಿನಲ್ಲಿ ಜನ ಮರುಳೋ, ಜಾತ್ರೆ ಮರುಳೋ... ಕ್ರಿಕೆಟಿಗೆ ಮಾತ್ರ ಉರುಳೋ ಉರುಳು! ಲಲಿತ್ ಮೋದಿಯೆಂಬ ಅಪ್ಪಟ ವ್ಯಾಪಾರಿ ಕೈಗೆ ಆಟ ಕೊಟ್ಟರೆ ಏನಾಗಬೇಕೋ ಅದು ಆಗುತ್ತಿದೆ. ಕೇವಲ ಎರಡನೇ ಆವೃತ್ತಿಗೆ ಸ್ಟೇಡಿಯಂಗಳು ಖಾಲಿ ಹೊಡೆಯತೊಡಗಿವೆ. ಆದರೆ ಟಿವಿ, ಜಾಹಿರಾತುಗಳ ಮಾರ್ಗ ಕಂಡುಕೊಂಡಿರುವ ತಂಡಗಳ ಒಡೆಯರಿಗೆ, ಐಪಿಎಲ್ ಕಮಿಟಿಗೆ, ಬಿಸಿಸಿಐಗೆ ಹಣದ ಹೊಳೆಯೇ ಹರಿಯುತ್ತಿದೆ. ಹರಾಜಿನಲ್ಲಿ ಮಾರಾಟದ ಉತ್ಪನ್ನಗಳಾಗಿ ಹೋಗಿರುವ ಆಟಗಾರರ ಜೇಬುಗಳೂ ಭರ್ತಿಯಾಗತೊಡಗಿ ಆಟ ಅರ್ಥ ಕಳೆದುಕೊಳ್ಳತೊಡಗಿದೆ. ಪಂದ್ಯದ ಹಿಂದಿನ ದಿನ ತಮ್ಮೊಡೆಯ ವಿಜಯ್ ಮಲ್ಯನ ರೆಸಾರ್ಟಿನಲ್ಲಿ ಮಜಾ ಮಾಡುವ ಈ ಆಟಗಾರರು ಮರುದಿನ ಕ್ರೀಡಾ ಕಳಪೆ ಆಟ ಆಡದೇ ಇರುತ್ತಾರಾ? ರಾತ್ರಿಯ ಹ್ಯಾಂಗೋವರ್, ದುಡ್ಡಿನ ಟರ್ನ್‌ಓವರ್, ಆಡಬೇಕಿರುವುದು ಕೇವಲ ಇಪ್ಪತ್ತೇ ಓವರ್! ಜೊತೆಗೆ ಜಾಹಿರಾತುಗಳ ಬಂಪರ್!!

ಇದೆಂತಹ ಬೃಹತ್ ಪ್ರಮಾಣದ ದಂಧೆಯಾಗಿದೆ ಎಂದರೆ, ಚುನಾವಣೆಗಳ ಕಾರಣದಿಂದ ಭದ್ರತೆ ಒದಗಿಸುವುದು ಸಾಧ್ಯ ಇಲ್ಲ ಎಂದಾಗ ರಾತ್ರೋರಾತ್ರಿ ದಕ್ಷಿಣ ಆಫ್ರಿಕಾಕ್ಕೆ ಟೂರ್ನಮೆಂಟನ್ನು ಶಿಫ್ಟ್ ಮಾಡಿಬಿಟ್ಟರು! ಕ್ರಿಕೆಟನ್ನು ಸಂಪೂರ್ಣ ವಾಣಿಜ್ಯೀಕರಣಗೊಳಿಸಿದ ಲಲಿತ್ ಮೋದಿ ಬಾಯಿ ತೆಗೆದರೆ ಅಲ್ಲಿ ಆಟದ ಗುಣಮಟ್ಟಕ್ಕೆ ಸಂಬಂಧಿಸಿದ ಮಾತೇ ಇರುವುದಿಲ್ಲ; ಬರೀ ಲೆಕ್ಕ ನಂಬರುಗಳು! "22000 ಹೊಟೇಲ್ ರೂಮು, 10,000 ಸ್ಥಳೀಯ ಫ್ಲೈಟ್ ಬುಕ್ಕಿಂಗ್... ಈ ಟೂರ್ನಿ ದ.ಆಫ್ರಿಕಾದ ಆರ್ಥಿಕತೆ ಮೇಲೆತ್ತಲಿದೆ..." ಹೀಗೆ ಸಾಗುತ್ತದೆ ಆತನ ಬ್ಯುಸಿನೆಸ್ ಆಟದ ಲಹರಿ.



ಆಟವೊಂದು ಬಾಲಿವುಡ್ ರಂಜನೆಯಾಗತೊಡಗಿದಾಗ, ಕೌಶಲ್ಯಕ್ಕಿಂತ ಗ್ಲಾಮರ್ರೇ ಮಿಂಚತೊಡಗಿದಾಗ, ಹಣ, ಅಬ್ಬರಗಳೇ ಮುನ್ನೆಲೆಗೆ ನಿಂತಾಗ ಆಟದ ಸೊಬಗು ಬರುಬರುತ್ತ ಕಳೆದುಹೋಗುತ್ತದೆ.



ಶಾರುಖ್ ಖಾನ್‌ರ 75 ಮಿಲಿಯನ್ ಡಾಲರ್ 'ಕಿಮ್ಮತ್ತಿನ' ಕೊಲ್ಕತ್ತಾ ತಂಡಕ್ಕೆ ಟೂರ್ನಿಗೂ ಮೊದಲು ಅತಿ ಹೆಚ್ಚಿನ 'ಬ್ರ್ಯಾಂಡ್ ವ್ಯಾಲ್ಯು' (42.1 ಮಿಲಿಯನ್ ಡಾಲರ್) ಕಟ್ಟಲಾಗಿತ್ತು- ಥೇಟು ಜೂಜಾಟದಂತೆಯೆ! ಈಗ ನೋಡಿದರೆ ಎರಡೋ ಮೂರೋ ಪಂದ್ಯ ಗೆದ್ದು ಪಾಯಿಂಟ್ ಪಟ್ಟಿಯಲ್ಲಿ ಪಾತಾಳ ತಲುಪಿ ಟೂರ್ನಮೆಂಟನಿಂದ ಹೊರಬಿದ್ದಿದೆ ಆತನ ತಂಡ. ಕಿಂಗ್‌ಖಾನ್ ಮುಖ ಸಪ್ಪೆಯಾಗಿದೆ. ಅಂದರೆ ಇಲ್ಲಿ ನಡೆಯುವ 'ವ್ಯಾಲ್ಯುವೇಷನ್'ಗಳು ನಿಖರತೆ[...] ಸಮೀಪವೂ ಇರುವುದಿಲ್ಲ.


ಮಾರುಕಟ್ಟೆಗಳ ನಿಯಂತ್ರಣದಲ್ಲಿ ಆಟ ಸಿಲುಕಿ[...] ಅದು ಟಿವಿ ಪ್ರಸಾರದಿಂದ ಹಿಡಿದು ಕಾಮೆಂಟರಿವ[...] ದುಷ್ಪರಿಣಾಮ ಬೀರತೊಡಗುತ್ತದೆ. 'ಒಂದು ದೇಶ ಒ[...] ಭಾವೋದ್ರೇಕ' (One country, One passi[...] ಎಂಬ ಥೀಮ್‌ನೊಂದಿಗೆ ಶುರುವಾದ ಐಪಿಎಲ್ ಎರ[...] ಆವೃತ್ತಿಯ ಅಂತಿಮ ಹಂತ ತಲುಪುವ ವೇಳೆಗೆ passi[...] ಎಂಬುದು ಕೇವಲ ಆದಾ[...] ಮತ್ತು ಗ್ಲ್ಯಾಮರ್‌ಗಳಿಗೆ ಸೀ[...] ಗೊಂಡಿತ್ತು. ಇಲ್ಲಿ ಕ್ರಿಕೆಟ್ ಎಂಬು[...] ನೆಪಮಾತ್ರ!

ಕಾಮೆಂಟೇಟರ್‌ಗಳು ಬಹಿರ[...] ವಾಗಿಯೇ ತಮ್ಮದು ಸೇಲ್ಸ್‌ಮ[...] ಗಳ ಕೆಲಸ ಎಂದು ಸಾಬೀ[...] ಮಾಡುತ್ತಿದ್ದಾರೆ.ಯಶಸ್ಸು ಎಂಬು[...] ಈಗ 'ಬ್ರ್ಯಾಂಡೆಡ್'. ಒಬ್ಬ ಆಟಗ[...] ಒಂದು ವಿಶೇಷ ಸಾಧನೆ ಮಾಡಿ[...] ಥ್ರಿಲ್ ಆಗುವ ಕಾಮೆಂಟೇಟ[...] ರೂಪದಲ್ಲಿರುವ ಸೇಲ್ಸ್‌ಮನ್‌ಗ[...] ಅದನ್ನು 'Citi moment [...] success' ಎಂದು ಬಣ್ಣಿಸುತ್ತಾ[...] ಪ್ರತಿ ಸಾರಿ ಚೆಂಡು ಬೌಂಡರಿ ತಲುಪಿದಾಗ ಅದನ[...] 'DLF maximum' ಎಂದು ಕರೆಯುತ್ತಾರ[...] ಯಾವುದೇ ವಿಶೇಷ ಸಾಧನೆ ಬರದೇ ಇದ್ದಾಗಲ[...] ಸುಮ್ಮನೇ ಕೂಡುವುದಿಲ್ಲ [...] ಮಹಾಶಯರುಗಳು; '[...] ಇನ್ನೊಂದು ಕ್ಯಾಚ್ ತೆಗೆದುಕೊಂಡ[...] Citi moment of succes[...] ಸಂಭವಿಸಲಿದೆ' ಎಂದು ಜಾಹಿರಾತ[...] ಪ್ರಾಯೋಜಕ 'Citi' ಕಂಪನಿ[...] ತಮ್ಮ ನಿಷ್ಠೆ ಪ್ರದರ್ಶಿಸುತ್ತಾರೆ! ಆದ[...] ಬೌಂಡರಿಗಳನ್ನು ತೋರಿಸುವಾ[...] ಅವರು ನಿಷ್ಠೆ ಬದಲಾಗುತ್ತದ[...] ಏಕೆಂದರೆ ಈ ಬೌಂಡರಿ ಪ್ಯಾಕೇಜ್[...] ಪ್ರಾಯೋಜಕ 'Hundai' ಕಂಪನಿ[...] ಎಲ್.ಶಿವರಾಮಕೃಷ್ಣನ್ ಹೀರೋ[...] ಹೋಂಡಾ (ಪಂದ್ಯ ಶ್ರೇಷ್ಠನಿ[...] ಕೊಡುವ ಬಹುಮಾನ) ಮೇ[...] ಕುಳಿತು ಕಾಮೆಂಟರಿ ಮಾಡುತ್ತಾನ[...] ಮಾಜಿ ಕ್ರಿಕೆಟರ್ ಆಕಾಶ್ ಚೋಪ್ರಾ[...] ಕಾಮೆಂಟರಿ ಥೇಟು ಆತನ ಬ್ಯಾಟಿಂಗ್‌ನಂತೇ ಇರುತ್ತದ[...] ಅಂದು ರನ್ ಗಳಿಸಲು ಪರದಾಡುತ್ತಿದ್ದ ಈತ ಇಂದ[...]

▶▶▶

"ಮನುಷ್ಯಕುಲಂ ತಾನೊಂದೇ ವಲಂ"

ಒಂದು ಅಪೂರ್ವ ವಿನೂತನ ಪ್ರಯೋಗ



"ಜಾತಿ ಅನ್ನೋದು ಹತ್ತು ಬಾಗಿಲಿರೋ ಮನೆ. ಒಂದು ಬಾಗಿಲು ತೆರೆದರೆ ಒಂಬತ್ತು ಮುಚ್ಚಿಕೊಂಡಿರುತ್ವೆ. ಬಂದುಹೋದ ಒಬ್ಬೊಬ್ಬ ಮಹಾತ್ಮನೂ ಒಂದೊಂದು ಬಾಗಿಲು ತೆರೆಯುವ ಕೆಲಸ ಮಾಡ್ತಾನೇ ಇದ್ದಾರೆ" ಎನ್ನುತ್ತಾ ಜಾತಿಯ ಬಾಗಿಲು ತೆಗೆದು, ಮನುಷ್ಯರೆಲ್ಲರದೂ ಒಂದೇ ಜಾತಿ ಎನ್ನುವ ಸಂದೇಶ ಹೊತ್ತು ಹೀಗೊಂದು ಸಾಂಸ್ಕೃತಿಕ ಜಾಥಾ ನಾಡಿನ ಉದ್ದಗಲದಲ್ಲಿ ಸಂಚರಿಸುತ್ತಿದೆ. "ಮನುಷ್ಯ ಜಾತಿ ತಾನೊಂದೇ ವಲಂ" ಧ್ವನಿ ಬೆಳಕು; ದೃಶ್ಯ ವೈಭವಗಳ ಈ ರೂಪಕದಲ್ಲಿ ಸುಮಾರು 145 ಕಲಾವಿದರ ಎರಡು ತಂಡಗಳು ನಾಡಿನ ಜನತೆಗೆ ಅಭೂತಪೂರ್ವ ಅನುಭವವನ್ನೇ ನೀಡುತ್ತಿವೆ. ರಾಜ್ಯ ಸರ್ಕಾರದ ವಾರ್ತಾ ಇಲಾಖೆಯ ಮುಂದೊಡಗಿನಿಂದಾಗಿ ಇಂತಹ ಪ್ರಯತ್ನವೊಂದು ಸಾಧ್ಯವಾಗಿದೆ.



ಸುಮಾರು ಎರಡುಗಂಟೆ ಹತ್ತು ನಿಮಿಷಗಳ ಕಾಲ ಪ್ರೇಕ್ಷಕರು ಅತ್ತಿತ್ತ ನೋಡದೇ ಎದುರಿನ ಮೂರು ವೇದಿಕೆಗಳ ಮೇಲಿನ ದೃಶ್ಯಾವಳಿಗಳನ್ನೇ ಎವೆಯಿಕ್ಕದೆ ಮಂತ್ರಮುಗ್ಧರಾಗಿ ದಿಟ್ಟಿಸುವಂತೆ ಮಾಡುವ ಈ ಗೀತ-ನೃತ್ಯ ರೂಪಕವು ಕನ್ನಡ ನಾಡಿನ ಸಾಂಸ್ಕೃತಿಕ ಲೋಕದ ಒಂದು ಅಪೂರ್ವ ಪ್ರಯೋಗವೇ ಆಗಿದೆ. ಇದುವರೆಗೂ ಜಾನಪದ ಜಾತ್ರೆಗಳು, ಹಲವು ಬಗೆಯ ರಂಗ ರೂಪಗಳು ನಡೆದಿವೆಯಾದರೂ, ಒಂದು ನಿರ್ದಿಷ್ಟ ಸಂದೇಶದ ಸುತ್ತ ಎಲ್ಲಾ ಲಭ್ಯ ಸಾಂಸ್ಕೃತಿಕ ಪರಿಕರಗಳನ್ನು, ಹಲವು ಕಲಾ ರೂಪಗಳನ್ನು ಸಂಯೋಜಿಸಿಕೊಂಡು ಸೃಷ್ಟಿಸಿ, ಅಷ್ಟೇ ಅಚ್ಚುಕಟ್ಟಾಗಿ ನಿರ್ದೇಶಿಸಿರುವ ಖ್ಯಾತ ರಂಗ ನಿರ್ದೇಶಕ ಜ. ಬಸವಲಿಂಗಯ್ಯನವರ ಪ್ರಯತ್ನ ಅಭಿನಂದನೀಯ.

ನಮ್ಮ ಬ್ರಹ್ಮಾಂಡವು ಹೇಗೆ ಸೃಷ್ಟಿಯಾಯಿತೆಂಬ ಸಂದೇಶದೊಡನೆ ಈ ಧ್ವನಿ-ಬೆಳಕು ದೃಶ್ಯ ರೂಪಕವು ಆರಂಭಗೊಳ್ಳುತ್ತದೆ. ಜೀವ ಪ್ರಪಂಚದ ಉಗಮ, ಮಾನವನ ವಿಕಾಸ, ಆದಿ ಮಾನವನ ಬೇಟೆಯ ಬದುಕುಗಳನ್ನು ಪ್ರೇಕ್ಷಕರ ಕಣ್ಣಮುಂದೆ ವರ್ಣರಂಜಿತವಾಗಿ ಅನಾವರಣಗೊಳಿಸುತ್ತದೆ. ಮಹಿಳೆಯಿಂದಾಗುವ ಕೃಷಿಯ ಆವಿಷ್ಕಾರ, ನಂತರ 'ಖಾಸಗಿ ಆಸ್ತಿಯ' ಉದ್ಭವವು ಮೇಲು-ಕೀಳು, ಆಳುವವ-ಆಳಿಸಿಕೊಳ್ಳುವವರ, ತಾರತಮ್ಯದ ಬದುಕಿಗೆ ಮುನ್ನುಡಿ ಬರೆಯುವ; ಕೃಷಿ ನಿರತ ನಾಗರಿಕತೆಯ ಮೇಲೆ ಅಲೆಮಾರಿ ಬುಡಕಟ್ಟುಗಳು ನಡೆಸುವ ದುರಾಕ್ರಮಣ;. ಇದನ್ನನು ಸರಿಸಿಯೇ ಪುರೋಹಿತಶಾಹಿಯ ಉಗಮ..... ಹೀಗೆ ಸಾಗುತ್ತದೆ ಚರಿತ್ರೆಯ ದೃಶ್ಯಾವಳಿಗಳು. ನಂತರದಲ್ಲಿ ಕಥೆ ಹೇಳಿ ಕತೆಯಾದವರ ಕಥೆಗಳನ್ನೂ, ಹಾಡು ಹೇಳಿ ಹಾಡಾದವರ ಹಾಡುಗಳನ್ನೂ ರೂಪಕ ಹೇಳುತ್ತದೆ.

ಮೊದಲಿಗೆ ಪ್ರಾಚೀನ ಕಥೆಗಾರ ಗುಣಾಢ್ಯನ ಕಥೆ. ಆತ ಉತ್ತಮ ಕಥೆ ಕವಿತೆ ರಚನಕಾರನಾಗಿದ್ದ. ಆದರೆ ಹೊಲೆಯನಾಗಿ ಅವನು ಕಥೆ ರಚಿಸಿದ್ದೇ ಅಪರಾಧವಾಗಿ ಕೈಕಟ್ಟಿ ಗಡೀಪಾರು ಮಾಡಲ್ಪಟ್ಟ. ಗುಣಾಢ್ಯನ ನಂತರದಲ್ಲಿ ಪಂಪ ಭಾರತದಲ್ಲಿ ಚಿತ್ರಿತವಾದ ಸೂತಪುತ್ರ ಕರ್ಣನ ಮೇಲಣ ದ್ರೋಣರ ಈರ್ಷ್ಯೆ; ಕುವೆಂಪು ವಿರಚಿತ ರಾಮಾಯಣದ ಶಂಭೂಕವಧೆಯ ಚಿತ್ರಣ; ಬ್ರಾಹ್ಮಣ ಕನ್ಯೆಯನ್ನು ವರಿಸುವ ಶೂದ್ರ ಮಾತಂಗ; ದ್ರೋಣಾರ್ಜುನರ ದುರಹಂಕಾರಗಳಿಗೆ ಬಲಿಯಾಗುವ ಆದಿವಾಸಿ ಯುವಕ ಏಕಲವ್ಯ; ವನವಾಸಿ ವರುಣೆಯರ ಗಾನನೃತ್ಯವನ್ನೆಲ್ಲಾ ಅನುಭವಿಸಿ, ಅವರ ಕುಲ ತಿಳಿದೊಡನೆ ಕೀಳೆಂದು ಬಗೆದು ಕೊಟ್ಟ ಮಾತಿಗೆ ತಪ್ಪಿ ನಡೆವ ರಾಜಾ ಹರಿಶ್ಚಂದ್ರನ ದಾಷ್ಟ್ಯ; ದೇವನೂರ ಮಹಾದೇವರ ಕುಸುಮಬಾಲೆಯ ಚೆನ್ನ ಹಾಗೂ ಕುಸುಮರ ಬಂಡಾಯಗಳೆಲ್ಲಾ ಮನೋಜ್ಞವಾಗಿ ಅನಾವರಣಗೊಳ್ಳುತ್ತವೆ. ಬಳಿಕದಲ್ಲಿ ಬಸವಣ್ಣ, ಸರ್ವಜ್ಞ, ಮಂಟೇಸ್ವಾಮಿ, ಕನಕದಾಸ, ಪುರಂದರದಾಸ, ಕೈವಾರ ತಾತಯ್ಯ, ಶಿಶುನಾಳ ಷರೀಫ್ ಸಾಹೇಬ, ಮಹಾತ್ಮಗಾಂಧಿ, ಡಾ|| ಬಾಬಾ ಸಾಹೇಬ್ ಅಂಬೇಡ್ಕರರ ವ್ಯಕ್ತಿ ಚಿತ್ರಣಗಳು ಒಂದೊಂದಾಗಿ ನೋಡುಗರ ಮನತಟ್ಟುವಂತೆ ವೇದಿಕೆಗಳ ಮೇಲೆ ಸೊಗಸಾಗಿ ಮೂಡುವ ಪರಿಯಂತೂ ಅನನ್ಯವಾಗಿದೆ. ಈ ಎಲ್ಲಾ ಮಹಾತ್ಮರ ಏಕಮಾತ್ರ ಸಮಾನ ಕಾಳಜಿ-ಜಾತಿ ತಾರತಮ್ಯ ನಾಶವಾಗಬೇಕೆನ್ನುವ ಕಳಕಳಿ ಪ್ರೇಕ್ಷಕರನ್ನು ತಟ್ಟುತ್ತದೆ. ಆದರಲ್ಲೂ ಅಂತರ್ಜಾತೀಯ ವಿವಾಹ ನಡೆಸಲು ಮುಂದಾದ ಬಸವಣ್ಣನ ವಿರುದ್ಧ ನಡೆಯುವ ಚಳವಳಿ, ಕ್ರಮೇಣವಾಗಿ ಬಸವಣ್ಣನ ಜಂಗಮ ತತ್ವಗಳು ಸ್ಥಾವರರೂ[...] ಪಡೆಯುವುದನ್ನು ಪ್ರಶ್ನಿಸುವ ಮಂಟೇಸ್ವಾಮಿಯ[...] ದೃಶ್ಯಾವಳಿಗಳು ಅಚ್ಚಳಿಯದೆ ನಿಂತು ಬಿಡುತ್ತವೆ. ರೂಪಕ[...] ಬಾಬಾಸಾಹೇಬರ ಚೌಡಾರ್‌ಕೆರೆಯ ಆಂದೋಲನವನ್ನೂ[...] ನಂತರ ಹೋಮ ನಡೆಸಿ ಜಲಶುದ್ಧಿ ನಡೆಸುವವರ ಮನಸ್ಸ[...] ಶುದ್ಧವಾಗಿಲ್ಲದಿದ್ದುದನ್ನೂ, ಸಂವಿಧಾನದ ಮೀಸಲಾತಿಯ[...] ಅಗತ್ಯತೆಯನ್ನೂ ತಿಳಿಸಿಕೊಡುತ್ತದೆ.

ಇಡೀ ರೂಪಕವು ಅದ್ಭುತ ಸಂಗೀತ ಸಂಯೋಜ[...] ಬೆಳಕಿನ ಸಂಯೋಜನೆಗಳಲ್ಲಿ ಮೂಡಿಬಂದು ತಾಂತ್ರಿ[...] ಶ್ರೀಮಂತಿಕೆಯನ್ನೂ ಹೊಂದಿದೆ. ನಗಾರಿ, ತಮಟೆ, ಕಂಸಾ[...] ಡೊಳ್ಳುಗಳಂತಹ ಜಾನಪದ ವಾದ್ಯ ನೃತ್ಯ ಪ್ರಕಾರಗ[...] ಸಾಹಸ ಕಲೆಗಳ ಹಾಗೂ ಹಂಸಲೇಖರ ಸಂಗೀತವಿರು[...] ಧ್ವನಿಮುದ್ರಣಗಳ ಸಂಯೋಜನೆಯಲ್ಲಿ ಶ್ರೀಮಂತಗೊಂಡಿ[...] ವಸ್ತ್ರಾಲಂಕಾರ, ಪ್ರಸಾಧನ, ರಂಗಪರಿಗಳೂ ಪ್ರೇಕ್ಷಕರನ[...] ಹಿಡಿದಿಡುತ್ತವೆ. ಈ ದೃಶ್ಯವೈಭವ ರೂಪಕದ ಗೀತರಚ[...] ಹಾಗೂ ಸಾಹಿತ್ಯ ರಚನೆ ಮಾಡಿರುವ ಕೋಟಿಗಾನಹ[...]

▶▶▶

ಗೆಗಾಗಿ ತಡಕಾಡುವುದು ಬೋಜು ನೀಡಬಲ್ಲದು ...ಶ್ರೀ. ಸಭಾ ಕರೀಮ್ ಒಂದಿಷ್ಟು ಪದಗಳನ್ನು ಸ್ಟಾಕ್ ...ಇಟ್ಟುಕೊಂಡಿರುವಂತೆ ಕಾಣುತ್ತದೆ; ಅವವೇ ಪದಗಳನ್ನು ...ಟ್ ಮಾಡಿ ಮಾಡಿ ಬೋರ್ ಹೊಡೆಸುತ್ತಾನೆ. ...ನ್ನ ಹಿಂದಿ-ಇಂಗ್ಲಿಷ್ ಮಿಶ್ರಿತ ವಾಕ್ಯಗಳ ಹಾವಳಿ ...ದೆ. 'baris has come yet again' ಎಂದು ...ರ್ಗಳ್ಳ ಮೇಲೆ ಮಳೆ ಸುರಿಸುತ್ತಲೇ ಇರುತ್ತಾರೆ.

ಇನ್ನು ಚಿಯರ್‌ಗರ್ಲ್ಸ್‌ಗಳ ಅವತಾರ, ಭಂಗಿಗಳಂತೂ ...ಟಲ್‌ಮನ್ಸ್ ಗೇಮ್‌ಗೆ ಅದ್ಯಾವ ಶೋಭೆ ತರು...ಯೋ? 35 ಕ್ಯಾಮೆರಾಗಳಲ್ಲಿ ಒಂದನ್ನು ಲಲಿತ್ ...ದಿಗೇ ರಿಸರ್ವ್ ಮಾಡಿರುವಂತಿದೆ! ಈ ಮಧ್ಯೆ ... ಒಂದಿಷ್ಟು ಕುತೂಹಲ ಕೆರಳಿಸಿರುವಾಗಲೇ ಕ್ಯಾಮೆರಾ ...ದಿನದ ಮಿಸ್ ಬಾಲಿವುಡ್‌ನತ್ತ ತಿರುಗುತ್ತದೆ. ಇನ್ನು ...ಸೆಟ್ ಮ್ಯಾಕ್ಸ್‌ನ ಪ್ಯಾನೆಲಿಸ್ಟ್‌ಗಳು, VJಗಳ ಕಾಟ ...ಸುವುದೂ ಅಸಾಧ್ಯವೇ. ಅಲ್ಲಿ ಟಾಸ್ ಮುಗಿದರೂ ... ಇವರ ಪುರಾಣ ಕುಟ್ಟುವುದು ಅವ್ಯಾಹತವಾಗಿ ...ಗೇ ಇರುತ್ತದೆ.

ಇದೆಲ್ಲದರ ಜೊತೆಗೆ ಮಂದಿರಾ ಬೇಡಿ ಎಂಬ ...ಗಿಯ ಅನಗತ್ಯ ಕಿರಿಕಿರಿಗಳು ಬೇರೆ. ಆಟ ಜೋರಾಗಿ ...ರುವಾಗಲೇ ಈಯಮ್ಮ ಶಾರುಖ್ ಸಂದರ್ಶನ ...ಡುತ್ತಾಳೆ. "ಪ್ರೀತಿ ಜಿಂಟಾ, ಶಿಲ್ಪಾ ಶೆಟ್ಟಿಗಳ ವಿರುದ್ಧದ ... ಹೇಗೆನಿಸುತ್ತೆ" ಎಂದು ಪೆದ್ದು ಪೆದ್ದಾಗಿ ಕೇಳುತ್ತಾಳೆ. ...ದಲು ಟಿವಿ ಸ್ಟುಡಿಯೋಗಳಿಂದ ಮಾತಾಡುತ್ತಿದ್ದ ...ಯೀಗ ಸೆಕ್ಸಿ ಡ್ರೆಸ್‌ನಲ್ಲಿ ಮೈದಾನಕ್ಕೇ ಲಗ್ಗೆ ಇಟ್ಟಿದ್ದಾಳೆ. ...ಕೆ ಲಾಂಗ್‌ಲೆಗ್, ಮಿಡ್‌ವಿಕೆಟ್ ಎಂಬಿತ್ಯಾದಿ ಪದ...ನ್ನು ಹೇಳುತ್ತಿದ್ದರೆ ಅದು ವಿಚಿತ್ರ ಅರ್ಥ ಹೊಮ್ಮಿಸ...ದೆ? ಟಿವಿ ವೀಕ್ಷಕರು ಈಕೆಯನ್ನೂ ಚಿಯರ್‌ಗರ್ಲ್ಸ್...ಗೆ ಸೇರಿಸಿರುವಂತಿದೆ.

ಹಿಂದೆ ಶಾರುಖ್ ನಿರ್ಮಿಸಿ-ನಟಿಸಿದ್ದ ಸಿನಿಮಾ 'ಫಿರ್ ...ದಿಲ್ ಹೈ ಹಿಂದುಸ್ತಾನಿ'ಯಲ್ಲಿ ಕ್ರಿಕೆಟರುಗಳು ಹೇಗೆ ...ಕಂಪನಿಗಳ ಕೂಸುಗಳಾಗುತ್ತಿದ್ದಾರೆ ಎಂಬುದನ್ನು ಲೇವಡಿ ...ಡಲಾಗಿತ್ತು. ಅದೀಗ ನಿಜವಾಗಿದೆ. ಅದಕ್ಕೆ ಅಲ್ಲವೇ ...ಟ್ ಮೇಲೆ ಎರಡೆರಡು ಜಾಹಿರಾತು, ಆಟಗಾರರ ... ಮೇಲೆರಡು, ತೋಳುಗಳ ಮೇಲೆರಡೆರಡು, ಅಂಪೈರ್ ...ಲೆರಡು... ಮ್ಯಾಚ್‌ಗೆ ಮುನ್ನ ಮತ್ತು ನಂತರ ಹತ್ತತ್ತು ...ಷ ಜಾಹಿರಾತುಗಳ ಸುರಿಮಳೆ, ಪ್ರತಿ ಓವರ್ ನಂತರ ...ದೆರಡು... ಜೊತೆಗೆ ಟಿವಿ ಸ್ಕ್ರೀನ್ ಮೇಲೆ ಸದಾ ...ದಾಡುವ ಪಾಪ್-ಅಪ್ ಜಾಹಿರಾತುಗಳು, ಮೈದಾನದ ... ಇಂಚಿಂಚು ಬಿಡದ ಹಾಗೆ ಸಾವಿರಾರು ಕಂಪನಿಗಳ ...ಕಗಳು! ಹೀಗೆ ಜಾಹಿರಾತು ಗಿಟ್ಟಿಸಲು 32 ...ರ್ಗಗಳನ್ನು ಕಂಡುಕೊಂಡಿದೆ ಐಪಿಎಲ್!

ಹಣದಿಂದ ಎಲ್ಲವನ್ನೂ ಕೊಳ್ಳಲಾಗುವುದಿಲ್ಲ. ಆದರೆ ...ದಿಂದ ಜೆಂಟ್ಲಮನ್ ಗೇಮ್ ಕ್ರಿಕೆಟನ್ನು ಕೊಲ್ಲಲಾಗು...!!

● ಪಿ.ಕೆ.ಮಲ್ಲನಗೌಡರ್, ಗದಗ

...ಮಯ್ಯ, ಲಕ್ಷ್ಮೀಪತಿ ಕೋಲಾರ ಹಾಗೂ ಡಾ|| ...ನ್ಯ ನಾರಾಯಣಸ್ವಾಮಿ ತಮ್ಮ ಪ್ರಯತ್ನದಲ್ಲಿ ಕನ್ನಡಿಗರ ...ದಯ ತಟ್ಟಿದ್ದಾರೆ. ರೂಪಕದುದ್ದಕ್ಕೂ ಹಿನ್ನಲೆಯಲ್ಲಿ ...ಪಾಗಿ ಕೇಳಿಬರುವ "ಮನುಷ್ಯ ಜಾತಿ ತಾನೊಂದೇ ...ಲಂ" ಸಾಲು ಬಹುಸಮಯದವರೆಗೂ ಪ್ರೇಕ್ಷಕರ ...ದೆಯಲ್ಲಿ ಅನುರಣಿಸುತ್ತಲೇ ಇರುತ್ತದೆ.


ಇಂತಹ ಒಂದು ಅತ್ಯುತ್ತಮವೆನ್ನಬಹುದಾದ ...ಸ್ಕೃತಿಕ ಪ್ರಯೋಗದ ಪರಿಕಲ್ಪನೆ ವಾರ್ತಾ ಇಲಾಖೆಯ ...ರ್ದೇಶಕರಾದ ಎನ್.ಆರ್.ವಿಶುಕುಮಾರ್ ಅವರದ್ದು. ...ಗೆಯೇ ಬಸವಲಿಂಗಯ್ಯರೊಂದಿಗೆ ಸಹಾಯಕ ...ರ್ದೇಶಕರಾಗಿ ನಿರ್ವಹಿಸಿರುವ ಸುನಿಲ್ ಹುಡುಗಿ, ...ಂಡ್ಯ ರಾಜು, ಅಪ್ಪಣ್ಣ ಹಾಗೂ ಕೆ.ಶಿವರುದ್ರಯ್ಯ ...ನ್ನರೂ ಅಭಿನಂದನಾರ್ಹರಾಗಿದ್ದಾರೆ. ರೂಪಕದಲ್ಲಿ ...ಸುವ ಕಲಾವಿದರಲ್ಲಿ ಬಹುತೇಕರು ಸಮಾಜದ ...ಸ್ತರಗಳಿಂದ ಬಂದವರೇ ಆಗಿರುವುದು ವಿಶೇಷ. ...ದೆ ಕಲೆಗಾಗಿ ಅಲ್ಲ, ಕಲೆ ಜನರಿಗಾಗಿ" ಎಂಬ ...ವಳಿಕೆಯೊಂದಿಗೆ ರೂಪುಗೊಂಡಿರುವ ಈ ...ಪಕವನ್ನು ಕೇವಲ ಜಿಲ್ಲಾ ಕೇಂದ್ರಗಳಲ್ಲದೇ ಕನ್ನಡ ...ಹಿತ್ಯ ಸಮ್ಮೇಳನ, ಮತ್ತಿತರ ಕಡೆಗಳಲ್ಲಿಯೂ ...ಯೋಜಿಸುವ ಮೂಲಕ ಗರಿಷ್ಠ ಮಟ್ಟದಲ್ಲಿ ಜನ...ಮಾನ್ಯರ ಬಳಿಗೆ ವಾರ್ತಾ ಇಲಾಖೆ ಕೊಂಡೊಯ್ಯರೆ ...

ಹಾಗೆ ನೋಡಬೇಕೆಂದರೆ ಜಾತಿ ಧರ್ಮ ದ್ವೇಷ ...ದ ಬತ್ತಿ ಹೋಗುತ್ತಿರುವ ಕನ್ನಡಿಗರ ಎದೆಗಳಲ್ಲಿ ...ನುಷ್ಯಕುಲಂ ತಾನೊಂದೇ ವಲಂ' ಎಂಬ ಸೋನೆಯ ...ಕದೊಂದಿಗೆ ಮನುಷ್ಯ ಪ್ರೇಮದ ಚಿಗುರನ್ನು ಚಿಗುರಿಸ...ರುತ್ತಿರುವ ವಾರ್ತಾ ಇಲಾಖೆಯ ಹಾಗೂ ಎಲ್ಲಾ ...ಶಕ, ಕಲಾವಿದರ, ತಂತ್ರಜ್ಞರ ಈ ಪ್ರಯತ್ನ ನಿಜಕ್ಕೂ ...ನಂದನಾರ್ಹವಾದುದು.

● ಹರ್ಷಕುಮಾರ್ ಕುಗ್ವೆ

ಹುಬ್ಬಳ್ಳಿ: ಸರ್ವೋದಯ ಟ್ರಸ್ಟ್ ನುಂಗೋದಕ್ಕೆ ಹೊರಟ್ಟಿ ಸ್ಕೆಚ್!


ಸೇಫಾಗಿ ಸರ್ಕಾರಿ ಸಂಪತ್ತನ್ನು ಲೂಟಿ ಹೊಡೆದದ್ದು ಹೊರಟ್ಟಿಗೆ ಹೊಟ್ಟೆಯನ್ನು ತುಂಬಿಸಿಲ್ಲ ಅಂತ ಕಾಣುತ್ತೆ. ಅದಕ್ಕೇ ಈಗ ಅರ್ಧ ಶತಮಾನದಷ್ಟು ಸುದೀರ್ಘ ಕಾಲ ಬಡ ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹ ಮಾಡಿಕೊಂಡು ಬಂದಿರುವ ಸರ್ವೋದಯ ಟ್ರಸ್ಟ್ ಅನ್ನು ಅದರ ಸಮಸ್ತ ಆಸ್ತಿಪಾಸ್ತಿಗಳ ಸಮೇತವಾಗಿ ಗುಳುಂ ಮಾಡುವುದಕ್ಕೆ ಸ್ಕೆಚ್ ರೆಡಿ ಮಾಡಿದ್ದಾರೆ. ಆದರೆ, ದುರಂತ ನೋಡಿ. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ನರಸಿಂಹ ದಾಬಡೆಯವರು ಬಡಬಗ್ಗರಿಗೆ, ದಲಿತರಿಗೆ, ಸಮಾಜದ ಕೆಳಸ್ತರದ ಜನರಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಈ ಟ್ರಸ್ಟ್ ಸ್ಥಾಪನೆ ಮಾಡಿದ್ದರು. ಅವರಿನ್ನೂ ಬದುಕಿದ್ದಾರೆ. ತಾವು ಯಾವ ಉದ್ದೇಶಕ್ಕಾಗಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ್ದರೋ ಅದನ್ನೆಲ್ಲಾ ಕಣ್ಣೆದುರೇ ಮಣ್ಣುಪಾಲಾಗುತ್ತಿರುವುದನ್ನು, ಇಡೀ ಸಂಸ್ಥೆಯೇ ಲೂಟಿಕೋರರ ಪಾಲಾಗುತ್ತಿರುವುದನ್ನು ನೋಡಬೇಕಾಗಿ ಬಂದಿದೆ. ಮೊದಲೇ ಅನಾರೋಗ್ಯದಿಂದ ಬಳಲುತ್ತಿರುವ ಆ ಮುದಿ ಜೀವಕ್ಕೆ ಇದು ಇನ್ನೊಂದು ಆಘಾತ.



ಅದು ಬಡವರಿಗಾಗಿ ಕಟ್ಟಿದ ಸಂಸ್ಥೆ!

ಸರ್ವೋದಯ ಶಿಕ್ಷಣ ಸಂಸ್ಥೆ ಪ್ರಾರಂಭವಾಗಿದ್ದು 1956ರಲ್ಲಿ. ಸಮಾಜದ ಅತ್ಯಂತ ಕೆಳವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಿಸುವ ಮೂಲಕ ಅವರನ್ನು ಮೇಲೆತ್ತಬೇಕೆಂಬ ಮಹದಾಸೆಯಿಂದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ನರಸಿಂಹ ದಾಬಡೆಯವರು ಅದನ್ನು ಸ್ಥಾಪಿಸಿದ್ದರು. 1980ರ ದಶಕದ ಹೊತ್ತಿಗೆ ತಾವೇ ಕಟ್ಟಿದ ಈ ಸಂಸ್ಥೆಯೊಳಗೆ ಹಲವಾರು ಪಟ್ಟಭದ್ರ ಹಿತಾಸಕ್ತಿಗಳು ಸೇರಿಕೊಂಡು ಶಿಕ್ಷಣವನ್ನೊಂದು ವ್ಯಾಪಾರವನ್ನಾಗಿ ಮಾಡಿಕೊಳ್ಳಲಾರಂಭಿಸಿಬಿಟ್ಟರು. ಇದರಿಂದ ಬೇಸತ್ತ ದಾಬಡೆಯವರು 1985ರಲ್ಲಿ ಟ್ರಸ್ಟ್‌ನ ಮುಖ್ಯ ಧರ್ಮದರ್ಶಿ (Sole Trustee) ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಆ ನಂತರ ಅವರ ಸ್ಥಾನಕ್ಕೆ ನಾಯಕ ಸಮಾಜದ ವಕೀಲರಾದ ಆರ್.ಎಸ್.ಪೂಜಾರ್ ಎಂಬುವವರು ಬಂದರು. ಆಗಲೂ ಈ ಶಿಕ್ಷಣ ಸಂಸ್ಥೆ ತನ್ನ ಮೂಲ ಆಶಯಗಳನ್ನು ಸಂಪೂರ್ಣವಾಗಿ ಮರೆತಿರಲಿಲ್ಲ. ಅದರ ಕಾರ್ಯವೈಖರಿಯನ್ನು ಮೆಚ್ಚಿಕೊಂಡ ಹಲವಾರು ಜನ ದಾನಧರ್ಮ ಮಾಡಿದರು. ಉದಾಹರಣೆಗೆ ಹೇಳಬೇಕೆಂದರೆ, ಮುಗುದ ಗ್ರಾಮದ ಹನುಮಂತಪ್ಪ ಮೌಳೇರ್ ಎಂಬುವವರು ಸಂಸ್ಥೆಗಾಗಿ 40 ಎಕರೆ ಜಮೀನು ದಾನ ಮಾಡಿದರು. ನಾರಾಯಣಪುರ ಗ್ರಾಮದ ಎ.ಆರ್.ರಾಯಚೂರ್ ಎಂಬುವವರು ಶಾಲೆ ಕಟ್ಟುವುದಕ್ಕಾಗಿ ಒಂದೂವರೆ ಎಕರೆ ಜಮೀನು ಕೊಟ್ಟರು.


ಈ ದಾನಧರ್ಮಗಳ ಪರಿಣಾಮವಾಗಿ ಇಂದು ಈ ಸರ್ವೋದಯ ಟ್ರಸ್ಟ್ ಎಸ್.ಎಸ್. ಸಂಸ್ಕೃತ ಶಾಲೆ, ಹನುಮಂತಪ್ಪ ಮೊಹರೆ ಪ್ರೌಢಶಾಲೆ, ಎಸ್‌ಎಸ್‌ಟಿ ಬಾಲಿಕಾ ಪ್ರೌಢಶಾಲೆ, ರಾಘವೇಂದ್ರ ಸಂಸ್ಕೃತ ಪಾಠಶಾಲೆ, ಆಲೂರು ವೆಂಕಟರಾವ್ ಸ್ಮಾರಕ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯಗಳನ್ನೂ ಒಳಗೊಂಡಂತೆ ಒಟ್ಟು ಎಂಟು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಕೋಟ್ಯಾಂತರ ರೂಪಾಯಿಗಳ ಮೌಲ್ಯದ ಆಸ್ತಿಪಾಸ್ತಿಗಳನ್ನು ಹೊಂದಿದೆ. ಈಗ ಅದನ್ನು ನುಂಗುವುದಕ್ಕೆ ಮಾಜಿ ಮಂತ್ರಿ ಬಸವರಾಜ್ ಹೊರಟ್ಟಿ ಸಕಲ ಸಿದ್ಧತೆ ಮಾಡಿಕೊಂಡಿದ್ದಾನೆ.




ಆಸ್ತಿಗಾಗಿ ಕಿತ್ತಾಟ

1985ರಲ್ಲಿ ದಾಬಡೆಯವರ ನಿರ್ಗಮನದ ನಂತರ ಟ್ರಸ್ಟಿನ ಉಸ್ತುವಾರಿಯನ್ನು ಆರ್.ಎಸ್.ಪೂಜಾರ್ ವಕೀಲರು ವಹಿಸಿಕೊಂಡು ಬಂದಿದ್ದರು. ಐದು ವರ್ಷ ತುಂಬುವುದರೊಳಗಾಗಿ, ಅಂದರೆ 1990ರಲ್ಲಿ ಒಮ್ಮಿಂದೊಮ್ಮೆಲೇ ಅದ್ಯಾವ ಮಾಯದಿಂದ ಬಂದನೋ ಗೊತ್ತಿಲ್ಲ ಮಾಜಿ ಮಂತ್ರಿ, ಸಂಸದ ದಿವಂಗತ ಡಿ.ಕೆ.ನಾಯ್ಕರ್ ಸರ್ವೋದಯ ಟ್ರಸ್ಟ್‌ಗೆ ಮುಖ್ಯ ಧರ್ಮದರ್ಶಿಯಾಗಿಬಿಟ್ಟ. ಪೂಜಾರ್ ಅವರು ಅದ್ಹೇಗೋ ಗುದ್ದಾಡಿ ಮತ್ತೆ ಮುಖ್ಯಧರ್ಮದರ್ಶಿಯಾದರು.


1999ರ ಏಪ್ರಿಲ್ 30ರಂದು ಡಿ.ಕೆ.ನಾಯ್ಕರ್ ನಿಧನರಾದರು. ಆಗ ಬಿ.ಸಿ.ಜಂಬಗಿ ಎಂಬ ಹುಬ್ಬಳ್ಳಿಯ ಮಹಾಚತುರ ಲಾಯರ್ ಡಿ.ಕೆ.ನಾಯ್ಕರ್ ತನ್ನನ್ನು ಮುಖ್ಯಧರ್ಮದರ್ಶಿಯಾಗಿ ನೇಮಕ ಮಾಡಿದ್ದಾರೆಂಬಂತೆ ಒಂದು ಸುಳ್ಳು ಪತ್ರವನ್ನು ಸೃಷ್ಟಿಸಿಕೊಂಡು ತಗಾದೆ ಶುರುಮಾಡಿದ. ದುರಂತ ನೋಡಿ, ಇದೇ ಖೊಟ್ಟಿ ದಾಖಲೆಯನ್ನಿಟ್ಟುಕೊಂಡೇ ಜಂಬಗಿ ಅಧಿಕೃತ ಚೀಫ್ ಟ್ರಸ್ಟಿಯಾಗಿದ್ದ ಪೂಜಾರ್ ಅವರನ್ನು ಅಧಿಕಾರದಿಂದ



ಸತೀಶ್ ಜಾರಕಿಹೊಳಿ




ಪೂಜಾರ್



ಕೋನರೆಡ್ಡಿ

ಕೆಳಗಿಳಿಸಿಬಿಟ್ಟರು. ಯಾವುದೇ ಅರ್ಹತೆಯಿಲ್ಲದ ಎಸ್.ಎಮ್.ಹಿರೇಮಠ್ ಎಂಬುವವರನ್ನು ಪ್ರಿನ್ಸಿಪಾಲ್‌ನನ್ನಾಗಿ ಮಾಡಿದರು.

ಈ ಫೋರ್ಜರಿ ಪತ್ರವನ್ನು ಬೆಳಗಾಂನ ಅಸಿಸ್ಟೆಂಟ್ ಕಮೀಷನರ್‌ಗೆ ಸಲ್ಲಿಸಿದಾಗ ಅವರು ಸಹಿಯ ಅಧಿಕೃತತೆಯನ್ನು ದೃಢಪಡಿಸಿಕೊಳ್ಳುವುದಕ್ಕಾಗಿ ಧಾರವಾಡ ವಿಶ್ವವಿದ್ಯಾಲಯದ ಕ್ರಿಮಿನಾಲಜಿ ಡಿಪಾರ್ಟ್‌ಮೆಂಟ್‌ಗೆ ಪರಿಶೀಲನೆಗಾಗಿ ಕಳುಹಿಸಿದರು. ಪರೀಕ್ಷೆಯ ನಂತರ ಅದು ಡಿ.ಕೆ.ನಾಯ್ಕರ್ ಅವರ ನೈಜ ಸಹಿಯಲ್ಲ, ಅದೊಂದು ನಕಲಿ ಸಹಿ ಎಂದು ದೃಢಪಟ್ಟಿತು. ಅದಕ್ಕಾಗಿ ಈಗಿನ ಸ್ವಯಂಘೋಷಿತ ಟ್ರಸ್ಟಿ ಉಳ್ಳಾಗಡ್ಡಿ ಹಾಗೂ ಜಂಬಗಿಗೆ 1999ರ ಅಕ್ಟೋಬರ್ 30ರಂದು ಅಸಿಸ್ಟೆಂಟ್ ಕಮೀಷನರ್ ಒಂದು ಸಾವಿರ ರೂಪಾಯಿ ದಂಡ ವಿಧಿಸಿದರು. ಆವಾಗಲಾದರೂ ಜಂಬಗಿಗೆ ಬುದ್ಧಿ ಬರಬೇಕಿತ್ತು. ಆದರೆ, ಆತ ಸಂಸ್ಥೆಯನ್ನು ಗುಳುಂ ಮಾಡುವುದಕ್ಕೆ ಮೂರು ಬಿಟ್ಟು ನಿಂತಿದ್ದ. ಅಸಿಸ್ಟೆಂಟ್ ಕಮೀಷನರ್ ನಿರ್ಧಾರವನ್ನು ಪ್ರಶ್ನಿಸಿ ಚಾರಿಟಿ ಕಮೀಷನರ್‌ಗೆ ಮೇಲ್ಮನವಿ ಸಲ್ಲಿಸಿದ. ಚಾರಿಟಿ ಕಮೀಷನರ್ ಕೂಡ ಅವನಿಗೆ 250 ರೂಪಾಯಿ ದಂಡ ವಿಧಿಸಿ ಕಳಿಸಿದ್ದರು.



ನೋಂದಣಿ ಪ್ರಮಾಣ ಪತ್ರ

ಆವಾಗಲಾದರೂ ಜಂಬಗಿ ಮತ್ತು ಉಳ್ಳಾಗಡ್ಡಿ ಎಚ್ಚೆತ್ತುಕೊಳ್ಳಬೇಕಿತ್ತು. ತಾನೇ ಚೀಫ್ ಟ್ರಸ್ಟಿ ಎಂದು ಇಬ್ಬರೂ ಕಿತ್ತಾಡಿಕೊಳ್ಳುತ್ತಲೇ ಇದ್ದರು. ಕೊನೆಗೆ ಪೂಜಾರ್ ಅವರು ಅನಿವಾರ್ಯವಾಗಿ ಹೈಕೋರ್ಟ್ ಮೆಟ್ಟಿಲೇರಿದರು. ಪ್ರಕರಣವನ್ನು ವಿಚಾರಣೆ ನಡೆಸಿದ ನ್ಯಾಯಾಲಯ 2001ರ ಮೇ 21ರಂದು ತೀರ್ಪಿತ್ತು ಜಂಬಗಿ ಮತ್ತು ಉಳ್ಳಾಗಡ್ಡಿ ಇಬ್ಬರೂ ಚೀಫ್ ಟ್ರಸ್ಟಿಗಳಲ್ಲ ಎಂದು ಹೇಳಿತು.

ಹೊರಟ್ಟಿ ಎಂಟ್ರಿ

ನ್ಯಾಯಾಲಯದ ಆದೇಶ ಹೊರಬಿದ್ದ ಮೇಲೆ ಪೂಜಾರರು ಅಷ್ಟಕ್ಕೇ ಸುಮ್ಮನಾಗಲಿಲ್ಲ, ನ್ಯಾಯಸಮ್ಮತವಾಗಿ ತಾವೇ ಅದರ ಚೀಫ್ ಟ್ರಸ್ಟಿಯಾಗಬೇಕೆಂದು ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಿದರು. ಯಾಕೆಂದರೆ, ಅಷ್ಟು ಹೊತ್ತಿಗಾಗಲೇ ಸುಳ್ಳು ದಾಖಲೆ ಹಿಡಿದುಕೊಂಡು ಟ್ರಸ್ಟ್‌ನೊಳಗೆ ನುಸುಳಿದ್ದ ಉಳ್ಳಾಗಡ್ಡಿ ಎಲ್ಲಾ ಅಧಿಕಾರವನ್ನು ಚಲಾಯಿಸಲಾರಂಭಿಸಿಬಿಟ್ಟಿದ್ದ. ಒಬ್ಬೊಬ್ಬ ಅಭ್ಯರ್ಥಿಯಿಂದ ಐವತ್ತು ಸಾವಿರದಿಂದ ಒಂದು ಲಕ್ಷದ ತನಕ ದುಡ್ಡು ತಿಂದು ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಿದ್ದ 30 ಹುದ್ದೆಗಳನ್ನು ತುಂಬಿಕೊಂಡಿದ್ದ. ಧಾರವಾಡದಲ್ಲಿ ವಸ್ತ್ರದ್ ಎಂಬುವವನು ಡಿಡಿಪಿಐ ಆಗಿದ್ದಾಗ ಉಳ್ಳಾಗಡ್ಡಿ ಮತ್ತು ಹೊರಟ್ಟಿ ಸೇರಿಕೊಂಡು ಡಿಡಿಪಿಐ ಮೂಲಕ ಈ ಎಲ್ಲಾ ನೇಮಕಾತಿಗಳನ್ನು ಕಾಯಂ ಮಾಡುವುದಕ್ಕೆ ಬಹಳಷ್ಟು ಪ್ರಯತ್ನ ಮಾಡಿದರು. ಇನ್ನೂ ಚೀಫ್ ಟ್ರಸ್ಟಿಯೇ ಯಾರೆಂದು ನಿರ್ಧಾರವಾಗದೆ ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಹಾಗೆ ಮಾಡಲು ಬರುವುದಿಲ್ಲ ಎಂದು ಪೂಜಾರ್ ಸರ್ಕಾರದ ಗಮನಕ್ಕೆ ತಂದು ಹೊರಟ್ಟಿ-ವಸ್ತ್ರದ್-ಉಳ್ಳಾಗಡ್ಡಿ ಎಂಬ ತ್ರಿಮೂರ್ತಿಗಳಿಗೆ ಮಂಗಳಾರತಿ ಮಾಡಿಸಿದರು.

2006ರ ತನಕ ಕಾನೂನುಬಾಹಿರವಾಗಿ ಸರ್ವೋದಯ ಟ್ರಸ್ಟ್ ಎಂಬ ಹುಲ್ಲುಗಾವಲನ್ನು ಮೇಯುತ್ತಿದ್ದ ಉಳ್ಳಾಗಡ್ಡಿಯನ್ನು ನಿಯಂತ್ರಿಸಲು ಕೊನೆಗೆ ಹೊರಟ್ಟಿಯೇ ಮುಂದಾದ. ತನಗಿದ್ದ ಅಧಿಕಾರ ಬಳಸಿಕೊಂಡು ಡಿಡಿಪಿಐ ಮೂಲಕ ಉಳ್ಳಾಗಡ್ಡಿಯ ಮಾನ್ಯತೆಯನ್ನೇ ರದ್ದುಗೊಳಿಸಿದ್ದಲ್ಲದೇ ಆತನಿಂದ ಪತ್ರ ಬರೆಸಿಕೊಂಡು ತಾನೇ ಅದರ ಚೇರ್‌ಮನ್ ಆಗಿ ಕುಳಿತುಕೊಂಡುಬಿಟ್ಟ. ಅದೂಅಲ್ಲದೇ ಈ ಹಿಂದೆ ಅಣ್ಣಿಗೇರಿ ಶಾಲೆಯಲ್ಲಿ ದೈಹಿಕ ಶಿಕ್ಷಕನಾಗಿದ್ದ ರಾವ್‌ಸಾಹೇಬ್ ಅಪ್ಪಾ ಸಾಹೇಬ್ ದೇಸಾಯಿಯನ್ನು ಕಾರ್ಯದರ್ಶಿ ಸ್ಥಾನಕ್ಕೂ, ತನ್ನ ಇನ್ನೊಬ್ಬ ಬಲಗೈ ಬಂಟ ನಿಂಗರೆಡ್ಡಿ ಕೋನರೆಡ್ಡಿಯನ್ನು ಉಪಾಧ್ಯಕ್ಷನ ಸ್ಥಾನಕ್ಕೂ ಕೂರಿಸಿ ಇಡೀ ಸರ್ವೋದಯ ಸಂಸ್ಥೆಯನ್ನು ಹೊರಟ್ಟಿ ತನ್ನ ವಶಕ್ಕೆ ತೆಗೆದುಕೊಂಡುಬಿಟ್ಟ. ಮೂರು ವರ್ಷಗಳ ಕಾಲ ಇಡೀ ಸರ್ವೋದಯ ಟ್ರಸ್ಟನ್ನು ಗುಡಿಸಿ ಗುಂಡಾಂತರ ಮಾಡಿದ್ದೂ ಅಲ್ಲದೇ ಈಗ ಇಡೀ ಟ್ರಸ್ಟ್‌ನ ಆಸ್ತಿಯನ್ನು ತನ್ನ ಸ್ವಂತ ಹೆಸರಿಗೆ ವರ್ಗಾಯಿಸಿಕೊಳ್ಳಲು ಹೊರಟಿದ್ದಾರೆ ಹೊರಟ್ಟಿ ಸಾಹೇಬರು. ಇದಕ್ಕಾಗಿ ಜನವರಿ 28, 2009ರಂದು ಧಾರವಾಡ ತಹಶೀಲ್ದಾರರಿಗೆ ಅರ್ಜಿಯನ್ನೂ ಸಲ್ಲಿಸಿದ್ದಾರೆ.

ಈಗ ಹೊರಟ್ಟಿಯ ಈ ಗುಳುಂ ದಂಧೆಗೆ ಅಡ್ಡಗಾಲು ಹಾಕುವುದಕ್ಕೆ ಮತ್ತೊಬ್ಬ ಮಾಜಿ ಸಚಿವ ಸತೀಶ್ ಜಾರಕಿಹೊಳಿ, ಪೂಜಾರ ಮತ್ತಿನ್ನಿತರರು ರೆಡಿಯಾಗಿದ್ದಾರೆ. ಮಹರ್ಷಿ ವಾಲ್ಮೀಕಿ ಗುರುಪೀಠ ಟ್ರಸ್ಟ್ ನೇತೃತ್ವದಲ್ಲಿ ಇಡೀ ನಾಯಕ ಜನಾಂಗ ಹೊರಟ್ಟಿಯನ್ನು ಮುಗಿಸುವುದಕ್ಕೆ ರಣರಂಗಕ್ಕಿಳಿದಿದೆ. ಪರಿಸ್ಥಿತಿ ಗಂಭೀರವಾಗುತ್ತಿರುವುದನ್ನು ಕಂಡು ವಿಧಾನಪರಿಷತ್ ಸದಸ್ಯ ಮೋಹನ್ ಲಿಂಬಿಕಾಯಿ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಗೆ ಪತ್ರ ಬರೆದಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಿದ ಕಾಗೇರಿ ಟ್ರಸ್ಟಿಗೆ ಹೊಸ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಧಾರವಾಡ ತಹಶೀಲ್ದಾರರಿಗೆ ಸೂಚನೆ ನೀಡಿದ್ದಾರೆ.

ಸಾರಾಂಶೀಕರಿಸಿ ಹೇಳುವುದಾದರೆ, ಪುಷ್ಕಳವಾಗಿ ಮೇಯುವುದಕ್ಕೆ ಹುಲ್ಲುಗಾವಲಿನಂತಿರುವ ಸರ್ವೋದಯ ಟ್ರಸ್ಟ್ ನುಂಗಿ ನೀರು ಕುಡಿಯುವುದಕ್ಕೆ ಹೊರಟ್ಟಿ ನಡೆಸಿದ ಪ್ರಯತ್ನ ತಾತ್ಕಾಲಿಕವಾಗಿ ನಿಂತಿದೆ. ಆದರೆ, ಮೇಯಬೇಕೆಂಬ ಆಸೆ ನಿಂತಿಲ್ಲ. ಏನಾದರೂ ತಂತ್ರ, ಕುತಂತ್ರ ಬಳಸಿ ನುಂಗಲೇಬೇಕೆಂಬ ಹಠಕ್ಕೆ ಬಿದ್ದಿರುವ ಹೊರಟ್ಟಿ ಘೂಡಚಾರದ ಪ್ರಯತ್ನ ಮಾಡುತ್ತಿದ್ದಾರೆ. ಬಡಬಗ್ಗರಿಗೆ ಶಿಕ್ಷಣ ನೀಡುವುದಕ್ಕಾಗಿ ಸ್ಥಾಪನೆಗೊಂಡ ಸಂಸ್ಥೆ ಇಂದು ಹೆಗ್ಗಣಗಳ ಪಾಲಾಗುತ್ತಿರುವುದು ನಮ್ಮ ದುರಂತ.

● ಹುಬ್ಬಳ್ಳಿಯಾಂವ

ಕೊಳ್ಳೇಗಾಲ: ಅರಣ್ಯ ಇಲಾಖೆಯಲ್ಲೊಬ್ಬ ಲಫಂಗ



ಕೊಳ್ಳೇಗಾಲ ಅರಣ್ಯ ಉಪಸಂರಕ್ಷಣಾಧಿಕಾರಿಗಳ ಕಛೇರಿಯ ಹೊರನೋಟ

ಈತನಿಗೆ ಇದಕ್ಕಿಂತ ಒಳ್ಳೆ ಬಿರುದು ಕೊಡುವುದು ಕಷ್ಟ.

ಈತನ ಹೆಸರು ಗುರುಸಿದ್ಧಯ್ಯ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಹನೂರು ವಲಯದ ಅರಣ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾನೆ. ಆದರೆ ಇವನೊಬ್ಬ ಅಧಿಕಾರಿಯೆಂದು ಆತನ ಕೈಕೆಳಗೆ ಕೆಲಸ ಮಾಡುವ ನೌಕರರಾಗಲಿ, ಸಾಮಾನ್ಯ ಜನರಾಗಲಿ ಒಪ್ಪಿಕೊಳ್ಳುವುದಿಲ್ಲ. ಯಾಕೆಂದರೆ ಹೆಸರಿಗೆ ಅರಣ್ಯಾಧಿಕಾರಿಯಾದರೂ ಮಾಡುತ್ತಿರುವುದು ಮಾತ್ರ ಲಫಂಗ ಕೆಲಸಗಳನ್ನೆ.

ಮಾರುದ್ದ ಮೀಸೆ ಬಿಟ್ಟುಕೊಂಡಿರುವ ಗುರುಸಿದ್ಧಯ್ಯ ನೋಡೋದಕ್ಕೆ ಥೇಟ್ ಕಾಡುಗಳ್ಳ ವೀರಪ್ಪನ್ ಥರಾನೇ ಇದ್ದಾನೆ. ವೀರಪ್ಪನ್ ಆದರೋ ಅವನ ಪಾಡಿಗೆ ಕಾಡನ್ನು ದರೋಡೆ ಮಾಡಿಕೊಂಡಿದ್ದ. ಆದರೆ ಗುರುಸಿದ್ಧಯ್ಯ ಕಾಡನ್ನೂ ದೋಚುತ್ತಿದ್ದಾನೆ, ನಾಡನ್ನೂ ದೋಚುತ್ತಿದ್ದಾನೆ, ತನ್ನ ಕೈಕೆಳಗಿರುವ ನೌಕರರನ್ನೂ ಗೋಳು ಹೊಯ್ದುಕೊಳ್ಳುತ್ತಿದ್ದಾನೆ.



ಶಿವರಾಜು



ನರೇಂದ್ರ



ಧ್ರುವನಾರಾಯಣ



ಮಹೇಶ್

ಈಗ್ಗೆ 25 ವರ್ಷಗಳ ಹಿಂದೆ ಅರಣ್ಯ ಇಲಾಖೆಗೆ ಫಾರೆಸ್ಟ್ ಗಾರ್ಡ್ ಆಗಿ ಕೆಲಸಕ್ಕೆ ಸೇರಿದ ಗುರುಸಿದ್ಧಯ್ಯ ಯಾರ್ಯಾರ ಕೈಕಾಲು ಹಿಡಿದು ಲಾಬಿ ಮಾಡಿದನೋ ಗೊತ್ತಿಲ್ಲ ಅಂತೂ ಈಗ ಹನೂರು ವಲಯದ ಆರ್‌ಎಫ್‌ಓ ಆಗಿ ಪ್ರಮೋಷನ್ ಪಡೆದುಕೊಂಡಿದ್ದಾನೆ. ಈತ ಅದೆಷ್ಟು ದಕ್ಷ ಅಧಿಕಾರಿಯೆಂದರೆ, ತನ್ನ ವ್ಯಾಪ್ತಿಗೆ ಒಳಪಡುವ ಸುಮಾರು 893 ಎಕರೆ ಸಮೃದ್ಧ ಅರಣ್ಯ ಪ್ರದೇಶವನ್ನು ಕಾಡುಗಳ್ಳರು ಹಾಡುಹಗಲೇ ಲೂಟಿ ಹೊಡೆಯುತ್ತಿದ್ದರೂ ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಈ ಅರಣ್ಯ ರಕ್ಷಕ ಇನ್ನೊಂದಿಷ್ಟು ದಿನ ಇಲ್ಲೇ ಇದ್ದರೆ ಉಳಿದುಳಿದಿರುವ ಅರಣ್ಯವೂ ಮರುಭೂಮಿಯಂತಾಗುವುದರಲ್ಲಿ ಯಾವ ಅನುಮಾನವೂ ಇಲ್ಲ.


ಮಾತೆತ್ತಿದ್ದರೆ "ನನಗೆ ಧ್ರುವನಾರಾಯಣ್ ಅವರ ಬೆಂಬಲವಿದೆ" ಎನ್ನುತ್ತಾ ತನ್ನ ಕೆಳಗಿನ ನೌಕರರನ್ನು ಮಾತ್ರವಲ್ಲ, ತನ್ನ ಮೇಲಧಿಕಾರಿಗಳನ್ನೂ ಬೆದರಿಸಿಟ್ಟುಕೊಂಡಿರುವ ಭೂಪನೀತ.

ಗುರುಸಿದ್ಧಯ್ಯ ಅಲ್ಲ, ಗುರುನುಂಗಯ್ಯ!

ಗುರುಸಿದ್ಧಯ್ಯನೆಂಬ ಈ ಗುಳುಂ ವೀರ ದುಡ್ಡು ನುಂಗೋದಕ್ಕೆ ಎಂತೆಂಥಾ ದಾರಿಗಳನ್ನು ಕಂಡುಕೊಂಡಿದ್ದಾನೆಂಬುದಕ್ಕೆ ಇಲ್ಲೊಂದು ಉದಾಹರಣೆಯಿದೆ. ಬೇಸಿಗೆಯಲ್ಲಿ ಅರಣ್ಯ ಮತ್ತು ನೆಡುತೋಪುಗಳು ಆಗಾಗ ಬೆಂಕಿಗಾಹುತಿಯಾಗುತ್ತವೆ. ಈ ಬೆಂಕಿಯಿಂದ ಅರಣ್ಯ ಸಂಪತ್ತು ನಾಶವಾಗದಂತೆ ತಡೆಯುವುದಕ್ಕೆ, ಕಾಡ್ಗಿಚ್ಚಿನ ಮೇಲೆ ನಿಗಾಯಿಡುವುದಕ್ಕೆ ವಾಚರ್‌ಗಳನ್ನು ನೇಮಿಸುತ್ತದೆ. ಇಂತಹ ವಾಚರ್‌ಗಳನ್ನು ನೇಮಿಸಲೆಂದು ಸರ್ಕಾರ 2008-09ನೇ ಸಾಲಿನಲ್ಲಿ ಲಕ್ಷಾಂತರ ರೂಪಾಯಿಗಳನ್ನು ಬಿಡುಗಡೆ ಮಾಡಿತ್ತು. ಹೇಳಿ ಕೇಳಿ ಗುರುಸಿದ್ಧಯ್ಯನಂಥ ಘಟಿಂಗರ ಕೈಗೆ ಆ ದುಡ್ಡು ಸಿಕ್ಕರೆ ಏನಾಗುತ್ತದೋ, ಅದೇ ಆಗಿದೆ.

ಇವನ ವ್ಯಾಪ್ತಿಗೆ ಬರುವ ವಿಸ್ತಾರವಾದ ಅರಣ್ಯ ಪ್ರದೇಶದಲ್ಲಿ ಒಬ್ಬನೇ ಒಬ್ಬ ವಾಚರ್ ಅನ್ನೂ ನೇಮಿಸಿಕೊಂಡಿರದಿದ್ದರೂ ಕೇವಲ ಕಾಗದದ ಮೇಲೆ ನೇಮಿಸಿಕೊಂಡಿರುವುದಾಗಿ ತೋರಿಸಿ ಅಷ್ಟೂ ದುಡ್ಡನ್ನು ಒಂದೇ ಬಾರಿಗೆ ಈತ ಗುಳುಂ ಮಾಡಿದ್ದಾನೆ!

ವಾಸ್ತವದಲ್ಲಿ ಗುರುಸಿದ್ಧಯ್ಯನಂಥ ಖದೀಮರು ಇಂಥ ಕೆಲಸ ಮಾಡುತ್ತಾರೆಂದೇ ಎ.ಸಿ.ಎಫ್ ಆಗಿರುವ ಎಸ್.ಜಿ. ಚಂದ್ರಶೇಖರ್ ಅವರು ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ ಪ್ರಕಾರ ಮೊದಲು ತಮ್ಮ ಗಮನಕ್ಕೆ ತಂದು ನಂತರ ಹಣ ಬಿಡುಗಡೆ ಮಾಡಿಕೊಳ್ಳಬೇಕೆಂದು ತಾಕೀತು ಮಾಡಿದ್ದರು. ಆದರೆ ಅದನ್ನೆಲ್ಲಾ ಗಾಳಿಗೆ ತೂರಿದ ಗುರುಸಿದ್ಧಯ್ಯ ಯಾರ ಗಮನಕ್ಕೂ ತಾರದೇ ಅಷ್ಟೂ ಹಣವನ್ನು ನುಂಗಿ ನೀರು ಕುಡಿದ. ತಮ್ಮ ಮಾತಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡದ ಗುರುಸಿದ್ಧಯ್ಯನ ವಿರುದ್ಧ ಚಂದ್ರಶೇಖರ್ ಪಿತ್ತ ನೆತ್ತಿಗೇರಿ ಆತನ ವಿರುದ್ಧ ಕಲಂ 420, 468 ಅಡಿಯಲ್ಲಿ ಪ್ರಕರಣ ದಾಖಲಿಸಿ, ಮೇಲಧಿಕಾರಿಗಳ ಗಮನಕ್ಕೂ ತಂದು ತನಿಖೆ ನಡೆಸುತ್ತಿದ್ದಾರೆ.



ಗುರುಸಿದ್ಧಯ್ಯ
ಆರ್.ಎಫ್.ಓ ಹನೂರು

ಗುರುಸಿದ್ಧಯ್ಯ ಹೀಗೆ ಸರ್ಕಾರಿ ಹಣವನ್ನು ಗುಳುಂ ಮಾಡಿರುವುದಕ್ಕೆ ಐದು ಮಂದಿ ವನಪಾಲಕರ ವರದಿಯನ್ನೂ ಒಳಗೊಂಡಂತೆ ಒಟ್ಟು ಹನ್ನೊಂದು ಬಲವಾದ ಸಾಕ್ಷ್ಯಾಧಾರಗಳಿದ್ದರೂ ಆತನ ಮೇಲೆ ಇಲ್ಲಿಯತನಕ ಯಾವ ಕ್ರಮವನ್ನೂ ಕೈಗೊಂಡಿಲ್ಲ ಎಂದರೆ ಆತನ ಬಗ್ಗೆ ಮೇಲಧಿಕಾರಿಗಳೂ ಎಷ್ಟರಮಟ್ಟಿಗೆ ಬೆದರಿರಬಹುದು?

ಜಿಂಕೆ ಮಾಂಸವನ್ನೂ ಬಿಡಲಿಲ್ಲ!

ಗುರುಸಿದ್ಧಯ್ಯ ಎಂಥ ಕೀಳು ದಂಧೆಗೆ ಇಳಿದಿದ್ದಾನೆನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲವೇನೋ? ಅರಣ್ಯದಲ್ಲಿರುವ ಯಾವುದೇ ಪ್ರಾಣಿ ರೋಗದಿಂದಲೋ, ಪ್ರವಾಹದಿಂದಲೋ ಸತ್ತರೆ ಆರ್‌ಎಫ್‌ಓ ಅವರು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು, ಅಧಿಕೃತ ಪಶುವೈದ್ಯಾಧಿಕಾರಿಗಳಿಂದ ಮರಣೋತ್ತರ ಪರೀಕ್ಷೆ ನಡೆಸಿ ಪ್ರಾಣಿಯ ಶವವನ್ನು ಹೂತು ಹಾಕಬೇಕು. ಇದು ಅರಣ್ಯ ಇಲಾಖೆಯ ನಿಯಮ. ಗುರುಸಿದ್ಧಯ್ಯನಿಗೆ ಈ ನಿಯಮಗಳೆಲ್ಲ ಯಾವ ಲೆಕ್ಕ? ಮೊನ್ನೆ ನಡೆದ ಒಂದು ಘಟನೆ ನೋಡಿ. ಹನೂರು ಅರಣ್ಯ ವ್ಯಾಪ್ತಿಯಲ್ಲಿ ನಾಯಿಗಳು ಜಿಂಕೆಯೊಂದರ ಮೇಲೆ ದಾಳಿ ಮಾಡಿ ಕೊಂದುಬಿಟ್ಟವು. ಗುರುಸಿದ್ಧಯ್ಯನೆಂಬ ಈ ಖದೀಮ ನೀತಿ-ನಿಯಮಗಳೆಲ್ಲವನ್ನೂ ಗಾಳಿಗೆ ತೂರಿ ಕಾಂಚನಹಳ್ಳಿಯ ಮಾದೇಗೌಡನೆಂಬ ವ್ಯಕ್ತಿಗೆ ಸತ್ತ ಜಿಂಕೆಯನ್ನು ಮಾರಾಟ ಮಾಡಿದ್ದಾನೆ.

ಈ ಸಂಬಂಧ ಹನೂರು ಪೊಲೀಸರಿಗೆ ದೂರು ನೀಡಿರುವ ಎಸಿಎಫ್ ಚಂದ್ರಶೇಖರ್ ಕಾಂಚನಹಳ್ಳಿಯ ಮಾದೇಗೌಡ ಹಾಗೂ ಆರ್‌ಎಫ್‌ಓ ಗುರುಸಿದ್ಧಯ್ಯನ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಕಲಂ 39 ಹಾಗೂ 48ಎ 57 ಅನ್ವಯ ಪ್ರಕರಣ ದಾಖಲಿಸುವಂತೆ ಆದೇಶಿಸಿದ್ದಾರೆ. ಆದರೆ ಇಲ್ಲಿಯ ತನಕ ಅಂಥಯಾವುದೇ ಕೇಸು ದಾಖಲಾಗಿಲ್ಲ.

ನೌಕರರ ಪೀಡಕ


ಈತ ಬೆಳ್ಳಂಬೆಳಗ್ಗೆ ಆಫೀಸಿಗೆ ಬರುವಾಗಲೇ ಕಂಠಪೂರ್ತಿ ಕುಡಿದುಕೊಂಡು ಬಂದಿರುತ್ತಾನೆ. ಆಮೇಲೆ ತನ್ನ ಕೈಕೆಳಗಿರುವ ನೌಕರರನ್ನು ಸೊಂಟದ ಕೆಳಗಿನ ಬೈಗುಳಗಳಿಂದ ಗೋಳು ಹೊಯ್ದುಕೊಳ್ಳುತ್ತಾನೆ. ಈತನಿಂದ ನೌಕರರು ಅದೆಷ್ಟು ರೋಸಿಹೋಗಿದ್ದಾರೆಂದರೆ ಇದೇ ಮೇ 14ರಂದು ಅವರೆಲ್ಲಾ ಸೇರಿ ಎಸಿಎಫ್ ಚಂದ್ರಶೇಖರ್ ಕಚೇರಿಯೆದುರು ಧರಣಿ ಮಾಡಿ ಗುರುಸಿದ್ಧಯ್ಯನ ಕಾಟದಿಂದ ತಮ್ಮನ್ನು ಪಾರು ಮಾಡಬೇಕೆಂದು ಆಗ್ರಹಿಸಿದ್ದಾರೆ.

ಎಸಿಎಫ್ ಚಂದ್ರಶೇಖರ್‌ಗೆ ಗುರುಸಿದ್ಧಯ್ಯನ ಪೀಡಕ ಪುರಾಣ ಗೊತ್ತಿತ್ತಾದರೂ ಜನ ತಮ್ಮ ಕಚೇರಿಗೆ ಮುತ್ತಿಗೆ ಹಾಕುವಷ್ಟು ಜೀವ ಹಿಂಡಿದ್ದಾನೆಂಬುದು ಗೊತ್ತಿರಲಿಲ್ಲ. ನೌಕರರು ಧರಣಿ ನಡೆಸುತ್ತಿರುವಾಗಲೇ ಗುರುಸಿದ್ಧಯ್ಯನನ್ನು ತಮ್ಮ ಕಚೇರಿಗೆ ಕರೆಸಿಕೊಂಡ ಅವರು ನೌಕರರೆದುರೇ ಆತನಿಗೆ ಉಗಿದಿದ್ದಾರೆ. ಇದರಿಂದ ಮತ್ತಷ್ಟು ಕ್ರೋಧಗೊಂಡ ಗುರುಸಿದ್ಧಯ್ಯ ಪ್ರತಿಭಟನಾ ನಿರತ ನೌಕರರನ್ನು ಎಸಿಎಫ್ ಚಂದ್ರಶೇಖರ್ ಎದುರೇ ಬೂಟುಗಾಲಿನಿಂದ ಒದ್ದು ತನ್ನ ಜೀಪನ್ನೇರಿ ಹೋಗಿದ್ದಾನೆ. ಇದರ ವಿರುದ್ಧವೂ ಚಂದ್ರಶೇಖರ್ ಅವರು ಹಲ್ಲೆಗೊಳಗಾದ ಗುಮಾಸ್ತ ಶಿವರಾಜ್ ಕೈಯಿಂದ ಕೊಳ್ಳೇಗಾಲ ಟೌನ್ ಪೊಲೀಸ್ ಠಾಣೆಗೆ ದೂರು ಕೊಡಿಸಿದ್ದಾರೆ. ಆದರೆ, ಗುರುಸಿದ್ಧಯ್ಯ ಕುಡಿದು ಗಲಾಟೆ ಮಾಡಿರುವುದು ದೃಢಪಟ್ಟಿದ್ದರೂ ಆತನನ್ನು ಬಂಧಿಸುವುದಕ್ಕೆ ಎಸ್ಸೈ ಬಿ.ಮಹೇಶ್ ಮನಸ್ಸು ಮಾಡಿಲ್ಲ.

ಇಂಥ ಲಫಂಗ ಅಧಿಕಾರಿಯೊಬ್ಬನನ್ನು ಅಲ್ಲಿನ ನೌಕರರು ಮತ್ತು ಸಾಮಾನ್ಯ ಜನರು ಇಲ್ಲಿಯತನಕ ಸಹಿಸಿಕೊಂಡಿದ್ದಾರಲ್ಲ, ಅದೇ ದೊಡ್ಡ ಮಾತು. ಗುರುಸಿದ್ಧಯ್ಯ ಇನ್ನೇನು ನಿವೃತ್ತಿಯ ಅಂಚಿಗೆ ಬಂದಿದ್ದಾನೆ. ಆತ ಸಹಜವಾಗಿ ನಿವೃತ್ತನಾಗುತ್ತಾನೋ ಅಥವಾ ಒದ್ದೋಡಿಸಲ್ಪಡುತ್ತಾನೋ ನೋಡಬೇಕಿದೆ.

● ಕೊಳ್ಳೇಗಾಲ ಚಿಕ್ಕಮಾಳಿಗೆ

ಕೊಪ್ಪಳ ಜಿ.ಪಂ: ಅಧ್ಯಕ್ಷೆ ಸುಜಾತಾಳ ಗಂಡ ಹನುಮೇಶ ಹರಾಕಿರಿ!



ಹನುಮೇಶ

ಪರ್ಮನೆಂಟಾಗಿ ಜೈಲಿನ ಅತಿಥಿಯಾಗಬೇಕಾದವರನ್ನು ಊರಲ್ಲಿ ಬಿಟ್ಟರೆ ಊರಿನ ಗತಿ ಏನಾಗಬಹುದು ಎಂದು ಲೈವ್ ಆಗಿ ನೋಡಬೇಕೆಂದ್ರೆ ಒಮ್ಮೆ ಕೊಪ್ಪಳಕ್ಕೆ ಹೋಗಿ ಬರಬೇಕು. ರಾಜಕೀಯ ಹೆಗ್ಗಣಗಳ ಗೋದಾಮು ಎಂದೇ ಕರೆಸಿಕೊಳ್ಳುವ ಜಿಲ್ಲಾ ಪಂಚಾಯತಿಯಲ್ಲಿ ಯಾವ ಭಯ, ಆತಂಕವಿಲ್ಲದೆ ಮೊಗದಸ್ತಾಗಿ ಮೇಯುತ್ತಿರುವವರನ್ನು ಇಲ್ಲಿ ಕಣ್ಣಾರೆ ನೋಡಬಹುದು. ಇಂಥ ಹೆಗ್ಗಣಗಳ ಪೈಕಿ ಒಬ್ಬ ಮೇಯುವುದರಲ್ಲೇ ಗಿನ್ನಿಸ್ ದಾಖಲೆ ನಿರ್ಮಿಸಲು ಹೊರಟಿದ್ದಾನೆ. ಆತ ಬೇರಾರೂ ಅಲ್ಲ, ಕೊಪ್ಪಳ ಜಿಲ್ಲಾ ಪಂಚಾಯತ್‌ನ ಹಾಲಿ ಅಧ್ಯಕ್ಷೆ ಸುಜಾತ ನಾಯಕಳ ಪತಿದೇವನಾಗಿರುವ ಗಂಗಾವತಿ ತಾಲೂಕಿನ ಹುಲಿ ಹೈದರನ ಹನುಮೇಶ!



ಸುಜಾತ

ಹಿಂದೊಮ್ಮೆ ಇದೇ ಹನುಮೇಶ ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದಾಗ ಗಂಗಾವತಿಯಲ್ಲಿ ಟ್ರಾಫಿಕ್ ಪೇದೆಯೊಬ್ಬ ತನ್ನ ಡಿ.ಎಲ್. ಕೇಳಿದನೆಂದು ಆತನಿಗೆ ಬಡಿದು ಗಂಗಾವತಿ ಜೈಲಿನಲ್ಲಿ ನಾಲ್ಕು ದಿನ ಇದ್ದು ಬಂದಿದ್ದ. ಒಂದು ಅವಧಿ ಅಧಿಕಾರದಲ್ಲಿದ್ದು ಮೇಯುವುದರಲ್ಲಿ ಅನುಭವ ಹೊಂದಿರುವ ಈ ಹನುಮೇಶ ಈಗ ಥೇಟ್ ಮಂಗ್ಯಾನಂತೆ ಕಚೇರಿ ಕಚೇರಿ ಹಾರಿ ರೋಲ್‌ಕಾಲ್ ಹೀಕುವ ದಂಧೆಗಿಳಿದಿದ್ದಾನೆ. ಸೂರ್ಯ ಹುಟ್ಟುವುದೇ ತಡಗೋಸ್ಕರ ಎಂಬಂತೆ ಮುಂಜಾನೆಯಿಂದ ಸಾಯಂಕಾಲದವರೆಗೂ ಸಿಕ್ಕಸಿಕ್ಕ ಅಧಿಕಾರಿಗಳನ್ನು ತನ್ನ ಹೆಂಡತಿಯ ಚೇಂಬರಿಗೆ ಕರೆಸಿ ಕ್ಲಾಸ್ ತೆಗೆದು ಹಣ ಸುಲಿಗೆಗೆ ನಿಂತಿದ್ದಾನೆ. ರೋಲ್‌ಕಾಲ್ ಕೊಟ್ರೆ ಸೇಫ್ ಆಗಿರ್ತೀರಾ ಇಲ್ಲಾಂದ್ರೆ, ನೀರು ನೆರಳು ಇಲ್ಲದ ಜಾಗಕ್ಕೆ ಟ್ರಾನ್ಸ್‌ಫರ್ ಆಗಿ ಹೋಗುತ್ತೀರಾ ಎಂದು ಹನುಮಂತ ಧಮಕಿ ಹಾಕುತ್ತಿದ್ದಾನೆ. ಅಧಿಕಾರಿಗಳು ಮಾತ್ರ ಅದ್ಯಾವ ಜನುಮದ ಕರ್ಮದ ಫಲವೋ ಎಂದು ತಲೆ ಚಚ್ಚಿಕೊಳ್ಳುತ್ತಿದ್ದಾರೆ.

ಈ ಹಿಂದೆ ಜಿಪಂ ಸದಸ್ಯನಾಗಿದ್ದ ರೋಲ್‌ಕಾಲ್ ದೊರೆ ಮುಕುಂದರಾವನೇ ಈಗ ಹನುಮೇಶನ ಗಾಡ್‌ಫಾದರ್ ಆಗಿದ್ದಾನೆ. ಆದ್ದರಿಂದ ಸುಜಾತ ಮತ್ತು ಹನುಮೇಶ ಜೋಡಿಗೆ ಸರಕಾರದ ಯಾವ ಯೋಜನೆಗಳೂ ಲೆಕ್ಕಕ್ಕಿಲ್ಲ. ಎಲ್ಲಾ ಪಕ್ಕಕ್ಕೆ ಎಂಬಂತಾಗಿದೆ.

ಮೂರು ತಿಂಗಳ ಹಿಂದೆ ಬಹದ್ದೂರು ಬಂಡಿಯಲ್ಲಿ ಬೋರ್‌ವೆಲ್ ಕೊರೆದಿದ್ದನ್ನು ನೆಪ ಮಾಡಿಕೊಂಡು "ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಬರೋಬ್ಬರಿ 2 ಕೋಟಿ ಅವ್ಯವಹಾರವಾಗಿದೆ" ಎಂದು ಹನುಮೇಶ ಮತ್ತು ಮುಕುಂದ ಬಹದ್ದೂರ ಬಂಡಿಯ ಕೋಟೆಗಳೆರಡು ಅದರುವಂತೆ ಬಾಯಿಬಡಕೊಂಡಿದ್ದರು. ಅಷ್ಟೆಲ್ಲಾ ಚೀರಾಡಿದ್ದ ಈ ಜೋಡಿ ಆನಂತರ ಡೀಲ್ ಕುದುರಿಸಿಕೊಂಡು ಬಾಲ ಮುದುರಿಕೊಂಡು ತೆಪ್ಪಗಾಗಿದ್ದರು.

ಮೊನ್ನೆ ಮೊನ್ನೆ ಹೊಸ ಸ್ಟೋರಿಯೊಂದನ್ನು ತನ್ನ ಹೆಂಡತಿ ಸುಜಾತಾಳ ಮೂಲಕ ಹನುಮೇಶ ಶುರುಹಚ್ಚಿಕೊಂಡಿದ್ದಾನೆ. ಇದರಲ್ಲಿ ಮುಕುಂದನಿಗೆ ಯಾವ ಪಾತ್ರವೂ ಸಿಕ್ಕಿಲ್ಲ. ಗಂಡ-ಹೆಂಡತಿ ಇಬ್ಬರೂ ಮತ್ತೊಮ್ಮೆ ಇಂಜಿನಿಯರಿಂಗ್ ಇಲಾಖೆಯ ಮೇಲೆ ಮುಗಿಬಿದ್ದಿದ್ದಾರೆ. ಪಂಚಾಯತ್ ರಾಜ್ ಇಲಾಖೆಯಲ್ಲಿ 11 ಕೋಟಿ ಅವ್ಯವಹಾರವಾಗಿದೆ ಎಂದೂ, ಇದರಲ್ಲಿ ಬಹುಪಾಲನ್ನು ನುಂಗಿ ನೀರು ಕುಡಿದವನು ಇಂಜಿನಿಯರ್ ಲಷ್ಕರಿ ನಾಯಕ ಎಂದೂ, ಈ ಬಗ್ಗೆ ತನಿಖೆಯಾಗಬೇಕೆಂದೂ, ಇಲ್ಲವಾದಲ್ಲಿ ಲೋಕಾಯುಕ್ತಕ್ಕೆ ದೂರು ಕೊಡುತ್ತೇವೆಂದೂ ಇವರಿಬ್ಬರೂ ಪ್ಲಾಸ್ಟಿಕ್ ಹಾವು ಬಿಟ್ಟರು. ಈ ಆರೋಪದ ಹಿಂದೆ ಹನುಮೇಶ ಇದ್ದಾನೆ ಎಂದು ಗೊತ್ತಾಗಿ ಯಾರೊಬ್ಬ ಅಧಿಕಾರಿಯೂ ತಲೆ ಕೆಡಿಸಿಕೊಳ್ಳಲಿಲ್ಲ. ಇದನ್ನು ಕಂಡು ಮೈ ಪರಚಿಕೊಂಡ ಗಂಡ-ಹೆಂಡತಿ ಸ್ಥಳೀಯ ಪತ್ರಿಕೆಯಲ್ಲಿ ನಾಲ್ಕು ಕಾಲಂ ಸುದ್ದಿ ಬರೆಸಿ ಬೆದರಿಸುವ ತಂತ್ರವನ್ನು ಮಾಡಿದರು. ಆವಾಗಲೂ ಯಾರೂ ಕ್ಯಾರೇ ಅನ್ನಲಿಲ್ಲ. ಕೊನೆಗೆ ತಮ್ಮ ಮಾನ ಹೋಗುತ್ತೆ ಎಂದು ಹೆದರಿ ಬಿಳಿ ಹಾಳೆ ಮೇಲೆ ನಾಲ್ಕು ಲೈನು ಬರೆದುಕೊಂಡು ಲೋಕಾಯುಕ್ತರಿಗೆ ದೂರು ಕೊಡಲು ಮುಂದಾದರು. ಆದರೆ 11 ಕೋಟಿ ಅವ್ಯವಹಾರ ಯಾವ ಯೋಜನೆಯಲ್ಲಿ ನಡೆದಿದೆ, ಎಲ್ಲಿ ನಡೆದಿದೆ ಅಂತ ಕನಿಷ್ಠ ಎವಿಡೆನ್ಸ್ ಕೂಡ ಕೊಡದೆ ಕಂಪ್ಲೇಂಟ್ ಬರೆದಿದ್ದ ಈ ಮಹಾನುಭಾವರನ್ನು ಲೋಕಾಯುಕ್ತ ಎಸ್.ಪಿ. ಬರಿಗೈಲಿ ವಾಪಸ್ಸು ಕಳುಹಿಸಿದ್ದಾರೆ.



ಗೋವಿಂದ ಕಾರಜೋಳ



ಬಸವರಾಜಪ್ಪ

ಅತ್ತ ರೋಲ್‌ಕಾಲ್ ಹಣವೂ ಇಲ್ಲ, ಇತ್ತ ಮರ್ಯಾದೆನೂ ಸಿಗಲಿಲ್ಲ ಎಂದು ಹೇಪ್ಲಾಗಳಾದ ಸುಜಾತ ಮತ್ತವಳ ಗಂಡ ಹನುಮೇಶ ಅಸಲಿಗೆ 11 ಕೋಟಿ ಸ್ಟೋರಿ ಹೊರಬಿಟ್ಟದ್ದಕ್ಕೆ ಇನ್ನೊಂದು ಕಾರಣಾನು ಇದೆ. ಹನುಮೇಶನೇ ಹೇಳುವ ಹಾಗೆ ತಾನು ಬೇನಾಮಿ ಹೆಸರಿಗೆ 5 ಬೋರ್ ಕೊರೆದು 10 ಬೋರ್‌ನ ಬಿಲ್ಲು ಮಾಡ್ರಿ ಅಂದ್ರೆ ಅಧಿಕಾರಿಗಳು ಆಗಲ್ಲಾ ಅಂತಾರಂತೆ. ಅಧ್ಯಕ್ಷಳ ಗಂಡ ಅನ್ನೋದಕ್ಕಾದ್ರೂ ಕನಿಷ್ಠ ಮರ್ಯಾದೇನೂ ಕೊಡಲ್ಲಂತೆ. ಆ ಕಾರಣಕ್ಕೇನೆ ಆತ ಅಧಿಕಾರಿಗಳ ವಿರುದ್ಧ ಸೇಡು ತೀರಿಸಿಕೊಳ್ಳುವುದಕ್ಕಾಗಿ 11 ಕೋಟಿ ಅವ್ಯವಹಾರ ನಡೆದಿದೆ ಅಂತ ಹೆಂಡತಿ ಬಾಯಿಂದ ಬೊಗಳಿಸಿಬಿಟ್ಟ. ಅಸಲೀಯುತ್ತೇನೆಂದರೆ, ಎಲ್ಲೆಲ್ಲಿ, ಯಾವ ಯಾವ ಯೋಜನೆಯಲ್ಲಿ ಎಷ್ಟೆಷ್ಟು ಅವ್ಯವಹಾರ ನಡೆದಿದೆ ಎಂದು ಕೇಳಿದರೆ ಗಂಡ-ಹೆಂಡತಿಯರಿಬ್ಬರ ಬಾಯಿಂದ ಉತ್ತರವೇ ಹೊರಡುವುದಿಲ್ಲ.

ಸುಜಾತಾ ಸುಳ್ಳು ಕಂಪ್ಲೇಂಟ್ ನೀಡಿದ್ದಕ್ಕೆ ಜಿ.ಪಂ. ಸದಸ್ಯರಾದ ಕಾಂಗ್ರೆಸ್‌ನ ರಾಘವೇಂದ್ರ ಹಿಟ್ನಾಳ, ಬಿ. ಬಸವರಾಜಪ್ಪ ಜೆಡಿಎಸ್‌ನ ದೊಡ್ಡಯ್ಯ ಮಾಲತಿ ನಾಯಕ, ಬಿಜೆಪಿಯ ಬಾಲಪ್ಪ ಕತ್ತಿ ಸೇರಿದಂತೆ 27 ಸದಸ್ಯರಲ್ಲಿ 22 ಮಂದಿ ಈಗ ಆಕೆಯ ವಿರುದ್ಧ ತಿರುಗಿಬಿದ್ದಿದ್ದಾರೆ. ಆಕೆ ಜಿಪಂನ ಮರ್ಯಾದೆಗೆ ಮಸಿ ಬಳಿಯುತ್ತಿದ್ದಾರೆ ಅಂತ ಹೇಳಿಕೆ ನೀಡಿ ಬಹಿರಂಗ ಸಮರ ಸಾರಿದ್ದಾರೆ.

ವಾಸ್ತವದಲ್ಲಿ ಇದರಿಂದಾಗಿ ತನ್ನ ಸಂಬಂಧಿಗಳ ಹೆಸರಲ್ಲಿ ಗುಪ್ತವಾಗಿ ಬೋರವೆಲ್ ಕೊರೆಸಿ ದುಡ್ಡು ನುಂಗುವ ತಯಾರಿಯಲ್ಲಿದ್ದ ಹನುಮೇಶನಿಗೆ ಕುಂಡಿಯ ಮೇಲೆ ಒದ್ದಂತಾಗಿದೆ. ಅದೂಅಲ್ಲದೇ ಸುಜಾತಾ ಅಧ್ಯಕ್ಷಳಾಗುವ ತಿಂಗಳ ಮುಂಚೆ ಸ್ವಂತ ಕ್ಷೇತ್ರದಲ್ಲಿ 60 ಲಕ್ಷ ರೂ. ಬೋಗಸ್ ಬಿಲ್ ಎತ್ತಿರುವುದನ್ನೂ ಅವರೆಲ್ಲ ಬಯಲುಗೊಳಿಸಿದ್ದಾರೆ.


ಆಡಳಿತದ ಗಂಧ ಗಾಳಿ ಗೊತ್ತಿರದ ಸುಜಾತಾ ಅಧ್ಯಕ್ಷಳಾಗಿ ಕಳೆದ ಆರು ತಿಂಗಳಿಂದ ಕಡೆದು ಗುಡ್ಡೆ ಹಾಕಿದ್ದು ಅಷ್ಟೇ ಇದೆ. ಮಳೆಯಿಲ್ಲದೆ ಬರದ ಬೇಗೆಗೆ ಸಿಲುಕಿ ಸರಕಾರದ ಅನುದಾನ ತಾರತಮ್ಯತೆಗೂ ತುತ್ತಾಗಿ ಅಭಿವೃದ್ಧಿ ಕಾಣದೆ ಬಂಜರು ಪ್ರದೇಶವೆಂಬಂತಾಗಿರುವ ಕೊಪ್ಪಳ ಜಿಲ್ಲೆ ಈ ಗಂಡ - ಹೆಂಡಿರ ಕಾಟಕ್ಕೆ ಸಿಕ್ಕು ಇನ್ನಷ್ಟು ಸಣಕಲಾಗಿ ಹೋಗುತ್ತಿದೆ. ಜನರಂತೂ ಈ ನಾಚಿಕೆಗೇಡಿ ಜೋಡಿ ಕಂಡು ಬೇಸರಗೊಂಡಿದ್ದಾರೆ. ಜಿಲ್ಲಾ ಮಂತ್ರಿ ಗೋವಿಂದ ಕಾರಜೋಳ ಮಾತ್ರ ಮೆಕ್ಕೆಜೋಳದ ತರಹ ಗೋದಾಮು ಸೇರಿದ್ದಾನೆ.

ಮಾಜಿ ಸದಸ್ಯರಾದ ಮುಕುಂದರಾವ, ಹನುಮೇಶ ಮತ್ತು ಹಾಲಿ ಅಧ್ಯಕ್ಷೆ ಸುಜಾತಾಳ ರಣ ಹಸಿವಿನಿಂದಾಗಿ ಜಿಲ್ಲೆಗೆ ಬಂದ ಅನುದಾನವೆಲ್ಲ ಪರ್ಸೆಂಟೇಜ್ ಲೆಕ್ಕದಲ್ಲಿ ಖಾಲಿಯಾಗುತ್ತಿದೆ. ಅಧಿಕಾರಿಗಳು ಈ ಪೀಡೆಗಳು ಎಂದು ತೊಲಗ್ಯಾವು ಎಂದು ಕಂಡಕಂಡ ದೇವರಿಗೆ ಹರಕೆ ಹೊರುತ್ತಿದ್ದಾರೆ. ಇನ್ನಾದರೂ ಕಾರಜೋಳ ಗೋದಾಮಿನಿಂದ ಹೊರಬಂದು ಇಂತಹ ಹೆಗ್ಗಣಗಳಿಗೆ ಪಾಷಾಣ ಇಡಲಿ.

● ವಿನಯ ಹುರಳಿಕುಪ್ಪಿ

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 23



ಅಕ್ಷರ ರೂಪ: **ಅಕ್ಷತಾ ಕೆ.**

ವಿಧಾನಸೌಧದಲ್ಲಿ ಇರಬೇಕಾದವರು...

ಸುಂದರೇಶರ ಶ್ರದ್ಧಾಂಜಲಿ ಸಭೆಗೆ ಅಶೋಕ ...ರಕ್ಕೆ ಬಂದಿದ್ದ ನಂಜುಂಡಸ್ವಾಮಿ ಮತ್ತಿತರರು ...ತಿರುಗುವ ದಾರಿಯಲ್ಲಿ ನಮ್ಮ ಮನೆಗೆ ಬಂದರು. ...ವಿಧಾನಸಭೆ ಚುನಾವಣೆ ಘೋಷಣೆಯಾಗಿತ್ತು. ...ವ್ವೊತ್ತಿಗಾಗಲೇ ನಂಜುಂಡಸ್ವಾಮಿ ಮತ್ತಿತರ ...ವರು ರೈತ ಸಂಘದಿಂದ ಇದರ ಹಿಂದಿನ ...ನಾವಣೆಯಲ್ಲಿ ನಿಂತು ಗೆದ್ದು ಶಾಸಕರಾಗಿದ್ದರು. ...ಬಾರಿ ರೈತ ಸಂಘವನ್ನು ಇಡೀ ಕರ್ನಾಟಕದಲ್ಲಿ ...ಸಿ ಆಡಳಿತ ನಡೆಸುವ ಕನಸು ಕಾಣುತ್ತಿದ್ದರು. ...ಮ್ಮ ಮನೆಗೆ ಬಂದಿದ್ದ ಉದ್ದೇಶವೂ ಅದೇ ಆಗಿತ್ತು. ...ನ್ನನ್ನು ತೀರ್ಥಹಳ್ಳಿಯಿಂದ ಚುನಾವಣೆಗೆ ...ಸುವುದಕ್ಕೆ ಒಪ್ಪಿಸಲು ಬಂದಿದ್ದರು. ಆದರೆ ನಾನು ...ಪ್ಪಲಿಲ್ಲ. ಚುನಾವಣೆಗೆ ನಿಲ್ಲದಿರಲು ನನಗೆ ನನ್ನದೇ ...ರಣಗಳಿದ್ದವು.

ಮೊದಲನೆಯದಾಗಿ ತೀರ್ಥಹಳ್ಳಿಯಲ್ಲಿ ಇರು...ದು ವರ್ಗಸಮರ. ನಾನು ಎಷ್ಟೇ ಬಡವರ ...ವಾಗಿರುವ ಸಮಾಜವಾದಿಯಾದರೂ ನನ್ನನ್ನು ...ದಾಳು ಮನೆತನದವನು, ಶ್ರೀಮಂತ ಹಿನ್ನೆಲೆ...ಯಿಂದ ಬಂದವನು ಎಂದೇ ಜನ ಗುರುತಿಸುತ್ತಾರೆ. ...ರು ಎಷ್ಟೇ ನನ್ನ ಚಿಂತನೆಯ ಜೊತೆಗಿದ್ದರೂ ...ಪರ ಬೆಂಬಲ ವೋಟ್ ಆಗಿ ಪರಿವರ್ತನೆ ...ಗುವುದಿಲ್ಲ. ಕಡಿದಾಳು ಮಂಜಪ್ಪನೋರು, ...ಗೋಪಾಲಗೌಡ್ರು, ಕೋಣಂದೂರು ಲಿಂಗಪ್ಪ ಎಲ್ಲರ ...ಲುವಿನಲ್ಲೂ ಅವರ ಬಡತನದ ಹಿನ್ನೆಲೆ ಪ್ರಮುಖ ...ಪಾತ್ರ ವಹಿಸಿದೆ. ಕಡಿದಾಳರ ಎದುರು ಕಾಸರವಳ್ಳಿ ...ಹುಕಾರರು ನಿಂತು ಸೋತರು. ನಾವು ಬಡತನದ ...ಲೆಯಿಂದ ಬಂದು ಬಡವರ ಪರವಾಗಿ ನಿಂತರೆ ...ರಿಗೆ ಅದು ಸಹಜವಾಗಿ ಕಾಣುತ್ತದೆ. ಅದೇ ...ಮಂತ ಹಿನ್ನೆಲೆಯಿಂದ ಬಂದು ಬಡವರ ಪರವಾಗಿ ...ತಾಡಿದರೆ ಜನ ಅದನ್ನು ಮೆಚ್ಚುಗೆಯಿಂದ ...ಡ್ತಾರೆ, ಬೆಂಬಲ ಕೊಡ್ತಾರೆ ಆದರೆ ಅದನ್ನೇ ...ಸಿಕೊಂಡು ಅಧಿಕಾರ ಹಿಡಿಯೋಕೆ ಹೊರಟರೆ ...ರ್ವವಾಗಿ ಕಾಣುತ್ತೆ. ಆದ್ದರಿಂದ ಅವರು ನಮಗೆ ...ಟ್ ಹಾಕಲ್ಲ, ಶ್ರೀಮಂತರಂತೂ ಅವರ ವಿರುದ್ಧ ...ರುವುದರಿಂದ ಅವರೂ ನಮ್ಮ ವಿರುದ್ಧವಾಗಿ ... ಆದ್ದರಿಂದ ಚುನಾವಣೆಗೆ ನಿಂತರೆ ಯಾರ ...ಟು ಸಿಗಲ್ಲ.

...ನಾನು ನಂಜುಂಡಸ್ವಾಮಿಯವರಿಗೆ ಇದನ್ನೆಲ್ಲ ... "ನೋಡಿ, ಹಾರೋಗೊಳಿಗೆಯ ಮತದಾರರ ಪಟ್ಟಿ ನನ್ನ ಹತ್ತಿರ ಇದೆ. ಅದು ನಮ್ಮೂರು. ಆದರೆ ಅದರಲ್ಲೆ ನನಗೆ ಹತ್ತೇ ಹತ್ತು ಪರ್ಸೆಂಟ್ ವೋಟ್ ಬರಲ್ಲ ಅನ್ನೋದನ್ನು ಖಚಿತವಾಗಿ ಹೇಳ್ತೀನಿ. ಈ ಚುನಾವಣೆಗೆ ನಿಲ್ಲೋದೆಲ್ಲ ನಂಗೆ ಹೇಳಲೇಬೇಡಿ. ಸಾಧ್ಯವೇ ಇಲ್ಲ'' ಎಂದು ಖಚಿತ ಪಡಿಸಿದ ಮೇಲೆ ಅಲ್ಲಿಗೂ ಸುಮ್ಮನಾಗದ ಅವರು ನನ್ನನ್ನು ಕೈಬಿಟ್ಟು ಶ್ರೀದೇವಿಗೆ "ನೀವು ಹೂಂ ಅನ್ನಿ, ಶಾಮಣ್ಣನ್ನ ಎಲೆಕ್ಷನ್‌ಗೆ ನಿಲ್ಸಿ ಗೆಲ್ಲಿಸಿಯೇ ಸಿದ್ಧ. ಅವರೇನು ಮಾಡೋದೆ ಬೇಡ, ಒಪ್ಪಿಗೆ ಕೊಡ್ಲಿ ಸಾಕು. ಉಳಿದದ್ದನ್ನೆಲ್ಲ ನಾವು ನೋಡ್ಕೋತೀವಿ'' ಎಂದು ದುಂಬಾಲು ಬಿದ್ದರು. ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲೂ ರೈತ ಸಂಘದಿಂದ ಶಿವಮೊಗ್ಗ ಕ್ಷೇತ್ರದಿಂದ ನನ್ನನ್ನು ನಿಲ್ಲುವಂತೆ ಒಪ್ಪಿಸಲು ಡಾ. ಚಿಕ್ಕಸ್ವಾಮಿ ಮತ್ತಿತರರು ಇದೇ ರೀತಿ ಮನೆಗೆ ಬಂದು ಶ್ರೀದೇವಿಯ ಮೇಲೆ ಒತ್ತಡ ತಂದರು. ಆದರೆ ಚುನಾವಣೆ ವಿಷಯದಲ್ಲಿ ನನ್ನ ನಿಖರವಾದ ನಿಲುವು ಏನೆಂದರೆ ಮೇಲೆ ಹೇಳಿದ ಕಾರಣದಿಂದ ನಾನು ಚುನಾವಣೆಗೆ ನಿಂತರೆ ಗೆಲ್ಲುವುದು ಅಸಂಭವ; ಅದಕ್ಕಿಂತ ಮುಖ್ಯವಾಗಿ ನನಗೆ ಚುನಾವಣಾ ರಾಜಕೀಯದ ಬಗ್ಗೆ ಆಗಲೀ ಅಥವಾ ಅಧಿಕಾರ ನಡೆಸುವ ಬಗ್ಗೆ ಆಗಲಿ ಯಾವುದೇ ಆಸಕ್ತಿ ಇಲ್ಲದಿರುವುದರಿಂದ ಅದು ನನ್ನಂತವರಿಗಲ್ಲ ಎಂದೇ ನಾನು ಭಾವಿಸಿದ್ದೇನೆ.


ಚುನಾವಣೆ ಎಂದ ಕೂಡಲೇ ಪೈಲ್ವಾನ್ ಮಲ್ಲಣ್ಣನ ನೆನಪಾಗುತ್ತದೆ. ಹೊಳೆಹೊನ್ನೂರು ಮೂಲತಃ ಪೈಲ್ವಾನ್‌ಗಳಿಗೆ, ಕುಸ್ತಿಗೆ ಪ್ರಸಿದ್ಧವಾದ ಊರು. ಇವತ್ತಿಗೂ ಇಲ್ಲಿ ಬಹಳಷ್ಟು ಗರಡಿ ಮನೆಗಳಿವೆ. ಪೈಲ್ವಾನ್ ಮಲ್ಲಣ್ಣನ ಪರಿಚಯವಾಗಿದ್ದು ನನಗೆ ಹೊಳೆಹೊನ್ನೂರಿನ ಸಾಬರ ಅಂಗಡಿಯಲ್ಲಿ. ಅವರಾಗಲೇ ಪೈಲ್ವಾನ್‌ಗಿರಿಯಿಂದ ರಿಟೈರ್ ಆಗಿದ್ದರು. ನಮ್ಮ ರೈತ ಸಂಘದ ಹೋರಾಟದಲ್ಲಿ ಆಗಾಗ ಕಾಣಿಸಿಕೊಳ್ಳುತಿದ್ದರು. ಹೀಗೆ ಪರಿಚಯ ಬೆಳೆಯಿತು. ನಮ್ಮನೆಗೆ ಯಾವಾಗಲೂ ಬರಲು ಶುರು ಮಾಡಿದರು. ಬರೋದೆ ಅಂದ್ರೆ ಹೇಗೆ? ಬೆಳಗ್ಗೆ 9 ಗಂಟೆಗೆ ಶಿವಮೊಗ್ಗದಿಂದ ನಮ್ಮೂರಿಗೆ ಮಲ್ಲಿಕಣ್ಣನ ವೀರಭದ್ರಸ್ವಾಮಿ ಬಸ್ ಬರತ್ತೆ. ಅದೊಂದೆ ಬಸ್ ನಮ್ಮೂರಿಗೆ ಇರೋದು. ಇಡೀ ದಿನದಲ್ಲಿ ಎರಡು ಸರ್ತಿ ಬಂದು ಹೋಗಿ ಮಾಡತ್ತೆ. ಆ ಬಸ್ನಲ್ಲಿ ಮಲ್ಲಣ್ಣನಿಗೆ ಉಚಿತ ಪ್ರಯಾಣ. ಆ ಬಸ್‌ನಲ್ಲಿ ಬಂದು ಒಂದು ಗಂಟೆ ನಮ್ಮನೇಲಿ ಇದ್ದು ಅದೇ ಬಸ್‌ಗೆ ಮತ್ತೆ ವಾಪಸ್ ಹೋಗೋರು.

ಹೋಗುವಾಗ ಎರಡು ತೆಂಗಿನಕಾಯಿ ಇಸ್ಕೊಂಡು ಹೋಗೋರು. ಪ್ರತಿ ಸರ್ತಿ ತೆಂಗಿನಕಾಯಿ ಇಸ್ಕಂಡಾಗಲೂ ಅದನ್ನು ಕಿವಿಗೆ ಆನಿಸಿ ಹಿಡಿದು "ಈ ಕಾಯಿ ಏನೋ ಹೇಳ್ತಾ ಇದಾವೆ, ಅದನ್ನು ಆಲಿಸಿ ಅರ್ಥ ಮಾಡಿಕೊಳ್ತಾ ಇದೀನಿ" ಎಂದು ನನ್ನ ಕಡೆ ಕೈ ತೋರಿಸಿ "ವಿಧಾನಸೌಧದಲ್ಲಿರಬೇಕಾದವರು ಇವರು, ಆದರೆ ಇಲ್ಲಿದಾರೆ' ಅಂತ ಈ ಕಾಯಿಗಳು ಹೇಳ್ತಾ ಇದಾವೆ" ಎನ್ನುತ್ತಿದ್ದರು. ಪ್ರತಿ ಸರ್ತಿ ಬಂದಾಗಲೂ ಎರಡು ತೆಂಗಿನಕಾಯಿ ಬಿಟ್ಟರೆ ಬೇರೆ ಏನೂ ಕೇಳ್ತಾ ಇರಲಿಲ್ಲ. ಮತ್ತೆ ಪ್ರತಿ ಸರ್ತಿ ಕಾಯಿ ಇಸಿದುಕೊಂಡಾಗಲೂ ಕಿವಿಗೆ ಆನಿಸಿ ಹಿಡಿದು ನನ್ನನ್ನು ವಿಧಾನಸೌಧಕ್ಕೆ ಕಳಿಸುವ. ಅವರ ಆಶೆಯನ್ನು ಆ ತೆಂಗಿನಕಾಯಿಯ ಹೆಳೆಯಲ್ಲಿ ಪ್ರಕಟಿಸುವ ಅವರ ಈ ಡೈಲಾಗ್ ಸಹ ರಿಪೀಟ್ ಆಗುತ್ತಿತ್ತು. ನಮ್ಮನೆಯಿಂದ ತೆಂಗಿನಕಾಯಿ ಒಯ್ದು ಸಾರಾಯಿ ಅಂಗಡಿಗೆ ಮಾರಿಕೊಂಡು ಮಲ್ಲಣ್ಣ ಸಾರಾಯಿ ಕುಡಿತಾರೆ ಅಂತ ಹೊಳೆಹೊನ್ನೂರಿನ ಹಲವಾರು ಮಂದಿ ಹೇಳಿದರೂ ಎರಡೇ ಎರಡು ತೆಂಗಿನಕಾಯಿಗಿಂತ ಹೆಚ್ಚನದನ್ನು ಮಲ್ಲಣ್ಣ ನಮ್ಮಿಂದ ಅಪೇಕ್ಷಿಸುತ್ತಿರಲಿಲ್ಲವಾದ್ದರಿಂದ ನಾವು ಕಾಯಿ ಕೊಡುವುದನ್ನು ನಿಲ್ಲಿಸಲಿಲ್ಲ. ನಮಗೆ ಅದೆಷ್ಟು ಅಭ್ಯಾಸವಾಗಿ ಹೋಗಿತ್ತು ಎಂದರೆ ಮಲ್ಲಣ್ಣ ನಮ್ಮನೆ ಮುಂದೆ ಬಸ್ ಇಳಿದದ್ದನ್ನು ನೋಡುತ್ತಿದ್ದಂತೆ ನಾನು ಅಥವಾ ಶ್ರೀ ಎರಡು ತೆಂಗಿನಕಾಯಿ ಎತ್ತಿ ಎದುರಿಗಿಡುತ್ತಿದ್ದೆವು. ಅವರು ಕೇಳುವ ಪ್ರಸಂಗವೇ ಬರುತ್ತಿರಲಿಲ್ಲ.


ಒಂದು ದಿನ ಶಿವಮೊಗ್ಗದಲ್ಲಿ ಅಡಿಕೆ ಮಂಡಿಗೆ ಹೋಗ್ತಾ ಇದ್ದಾಗ ಮಲ್ಲಣ್ಣ ಸಿಕ್ಕಿದರು. "ನಿಮ್ಮನ್ನೆ ಹುಡುಕಿಕೊಂಡು ಬಂದೆ, ಒಂಚೂರು ಟಿಬಿಗೆ ಹೋಗಿ ಬರೋಣ ಬನ್ನಿ" ಅಂದ್ರು. "ಏನು ವಿಷಯ?" ಎಂದಾಗ "ಜೆ.ಹೆಚ್.ಪಟೇಲ್ರು, ಎಂ.ಪಿ.ಪ್ರಕಾಶ್ ಎಲ್ಲ ಬಂದಿದಾರೆ, ಅವರ ಜೊತೆ ಅರ್ಜೆಂಟಾಗಿ ಏನೋ ಮಾತಾಡೋದಿದೆ. ನೀವು ಬರಲೇಬೇಕು" ಎಂದರು. "ಅಲ್ರಿ ಚುನಾವಣೆ ಸಮಯ, ಅವರಿಗೆಲ್ಲಿ ಪುರುಸೊತ್ತು ಇರುತ್ತೆ" ಅಂತ ಹೇಳಿದ್ರೂ ಕೇಳದೆ ಕರೆದೊಯ್ದರು. ಜೆ.ಹೆಚ್. ಪಟೇಲ್ರಿಗೂ ಮಲ್ಲಣ್ಣನಿಗೂ ಬಹಳ ಸ್ನೇಹ ಇತ್ತು. ಮಲ್ಲಣ್ಣನಂತಹ ಹಲವಾರು ಜನರ ಜೊತೆ ಪಟೇಲರು ಸಲಿಗೆಯ ಸ್ನೇಹ ಇಟ್ಕೊಂಡಿದ್ದನ್ನು ನಾನು ನೋಡಿದ್ದೀನಿ. ಬೇರೆ ರಾಜಕಾರಣಿಗಳಲ್ಲಿ ಕಾಣದ ಗುಣ ಅದು ಪಟೇಲರಲ್ಲಿ ಮಾತ್ರ ನೋಡಿರೋವಂತದ್ದು. ಅದತ್ತು ಟಿಬಿಗೆ ಹೋದ್ವಿ. ಜನತಾ ದಳದಿಂದ ಚುನಾವಣೆಗೆ ಟಿಕೆಟ್ ಹಂಚಿಕೆ ಸಭೆ ಅದು. ಹೊಳೆಹೊನ್ನೂರಿನ ಶಾಸಕರಾದ ಬಸವಣ್ಯಪ್ಪ ಮತ್ತಿತರರು ಇದ್ದರು. ಮಲ್ಲಣ್ಣ ಹೋದವರೆ ನನ್ನನ್ನು ಎದುರಿಗೆ ನಿಲ್ಲಿಸಿಕೊಂಡು "ಪಟೇಲ್ರೆ, ನಿಮ್ಮ ಪಕ್ಷದಿಂದ ಶಾಮಣ್ಣೋರಿಗೆ ಹೊಳೆಹೊನ್ನೂರಿಂದ ಟಿಕೆಟ್ ಕೊಟ್ಟು ವಿಧಾನಸೌಧಕ್ಕೆ ಕರೆಸ್ಕೋಬೇಕಲ್ಲ?" ಎಂದೆ ಬಿಟ್ಟರು. ನನಗಂತೂ ಮರ್ಯಾದಿ ಹರಾಜಾದ ಹಾಗಾಯ್ತು, ಯಾವ ಮುನ್ಸೂಚನೆ ಕೊಡದೇ ಮಲ್ಲಣ್ಣ ಈ ಮಾತು ಹೇಳಿದ್ದರು. ಅಲ್ಲದೆ, ಅವರ ಜೊತೆಗೆ ನಾನು ಇರೋದರಿಂದ ನಾನೇ ಮಲ್ಲಣ್ಣನ ಕಡೆಯಿಂದ ಈ ಮಾತು ಹೇಳಿಸ್ತಿದೀನಿ ಅನ್ನೋ ಅರ್ಥ ಬರತ್ತೆ. ಬಸವಣ್ಯಪ್ಪ ಬೇರೆ ಮುಖ ಮುಖ ನೋಡ್ತಿದಾರೆ. ಅವರಿಗೆ ತಮಗೆ ಸುಲಭವಾಗಿ ಟಿಕೆಟ್ ಸಿಗತ್ತೆ ಅನ್ಕಂಡು ಬಂದ್ರೆ ಇಲ್ಲೊಬ್ಬ ಪ್ರತಿಸ್ಪರ್ಧಿ ಹುಟ್ಟಿಕೊಂಡನಲ್ಲ ಅಂತ ಅನಿಸಿರಬೇಕು. ಆದರೆ ಪಟೇಲ್ರು ನನ್ನನ್ನು ನೋಡಿದಾರೆ, ಮಲ್ಲಣ್ಣನ್ನು ನೋಡಿದಾರೆ ಜೊತೆಗೆ ಚೆನ್ನಾಗಿ ಅರ್ಥ ಮಾಡಿಕೊಂಡಿದಾರೆ. ಅವರಿದ್ದೋರು "ಮಲ್ಲಣ್ಣ ಮೊದಲು ಶಾಮಣ್ಣನ ಹತ್ತಿರ ಎಲೆಕ್ಷನ್‌ಗೆ ನಿಲ್ತಾನೇನು ಕೇಳು. ಅವನು ಹೂಂ ಅಂದ್ರೆ ನಾನು ಅವನನ್ನ ವಿಧಾನಸೌಧಕ್ಕೆ ಕರೆಸಿಕೊಂಡೆ ಕರೆಸಿಕೊಳ್ತೀನಿ. ನೀನೇನು ಯೋಚನೆ ಮಾಡಬೇಡ" ಅಂಥ ಹೇಳಿ ಕಳಿಸಿದರು.

ಮಲ್ಲಣ್ಣ ನಾನು ನೋಡುವ ಹೊತ್ತಿಗಾಗಲೇ ಪೈಲ್ವಾನ್‌ಗಿರಿಯ ಬಹಳಷ್ಟು ಲಕ್ಷಣಗಳನ್ನು ಕಳೆದುಕೊಂಡಿದ್ದರು. ವಯಸ್ಸು ದೇಹದ ಮೇಲೆ ದಾಳಿ ಮಾಡಿತ್ತು. ಜೊತೆಗೆ ಕುಡಿತ ಬೇರೆ ಅಂಟಿತ್ತಲ್ಲ. ಆದರೆ ಒಂದು ದಿನ ಹೊಳೆಹೊನ್ನೂರಿನಲ್ಲೆ ಇದ್ದ ಹನುಮಂತಣ್ಣ ಅನ್ನೋ ಹಳೆ ಪೈಲ್ವಾನ್ ಒಬ್ಬರ ಅಂಗಡಿಯಲ್ಲಿ ತೂಗು ಹಾಕಿದ್ದ ಫೋಟೊದಲ್ಲಿ ಗದೆ ಹಿಡಿದು ನಿಂತ ಮಲ್ಲಣ್ಣನನ್ನು ನೋಡಿ ಆಶ್ಚರ್ಯವಾಗಿತ್ತು. "ಪೈಲ್ವಾನ್ ಆಗಿರೋತನಕ ಜನರೇ ತಂದು ಕೊಡಗಟ್ಟಲೆ ಬಾದಾಮಿ ಹಾಲು ಕುಡಿಯೋಕೆ ಕೊಡ್ತಿದ್ದರು. ಕರೆದು ತಿಂಡಿ ಊಟ ಹಾಕ್ತಿದ್ದರು. ಕುಸ್ತಿ ಮಾಡೋದು ಬಿಟ್ಟ ಮೇಲೆ ಯಾರು ಕೇಳತಾರೆ. ಕೊಡೋರು ಕೇಳೋರು ಇಲ್ಲದೆ ಲಾಚಾರ್ ಆಗಿರೋ ಪೈಲ್ವಾನ್‌ರು ತುಂಬಾ ಜನ. ಅವರಲ್ಲಿ ಮಲ್ಲಣ್ಣನು ಒಬ್ಬ'' ಎಂದಿದ್ದರು ಹನುಮಂತಣ್ಣ. ಈ ಮಲ್ಲಣ್ಣ ಸತ್ತು ಒಂದು ವಾರದ ನಂತರ ನನಗೆ ಗೊತ್ತಾಯ್ತು. ಅವರ ಮನೆ ಹುಡುಕಿಕೊಂಡು ಹೋದೆ. ಮಲ್ಲಣ್ಣ ನಮ್ಮನೆಗೆ ಬರ್ತಿದ್ದ ಸಂದರ್ಭದಲ್ಲಿ ಅವ್ರದ್ದು ಒಂದು ಫೋಟೊ ತೆಗೆದಿದ್ದೆ. ಮಲ್ಲಣ್ಣ ಅದನ್ನು ಕಟ್ಟು ಹಾಕಿಸ್ಕೊಂಡು ಇಟ್ಟುಕೊಳ್ಳುವುದಾಗಿ ತೆಗೆದುಕೊಂಡು ಹೋಗಿದ್ದರು. ಅವರ ಮನೆ ಗೋಡೆ ಮೇಲೆ ಆ ದಿನ ಆ ಫೋಟೊ ಇತ್ತು.

ಹೊಳೆಹೊನ್ನೂರಿನ ಗರಡಿ ಮನೆಯೊಂದಕ್ಕೆ ಮಲ್ಲಣ್ಣನ ಹೆಸರಿಡಬೇಕು ಎಂದು ನನ್ನ ಮನಸಿನಲ್ಲಿತ್ತು. ಅದನ್ನು ಪಟೇಲ್ರ ಹತ್ತಿರವೂ ಹೇಳಿದ್ದೆ. ನೋಡೋಣ ಮಾಡೋಣ ಎನ್ನುವಷ್ಟರಲ್ಲಿ ದಿನಗಳು ಕಳೆದೇ ಹೋದವು. ಆ ಕೆಲಸ ಆಗಲೇ ಇಲ್ಲ. ಆದರೆ ಹೊಳೆಹೊನ್ನೂರಿನ ಸರ್ಕಲ್‌ನಲ್ಲಿ ಪ್ರತಿಷ್ಠಾಪಿತವಾಗಿರುವ ಗಾಂಧಿ ಪ್ರತಿಮೆಯನ್ನು ಕಂಡಾಗೆಲ್ಲ ನನಗೆ ಪೈಲ್ವಾನ್ ಮಲ್ಲಣ್ಣನ ನೆನಪಾಗತ್ತೆ. ಏಕೆಂದರೆ ಈ ಗಾಂಧಿಯ ಕೈ ಕಾಲು ಮತ್ತು ನಿಂತಿರುವ ಭಂಗಿ ಎಲ್ಲ ಯಾವ ಪೈಲ್ವಾನರಿಗೂ ಕಡಿಮೆ ಇಲ್ಲದಂತೆ ಕೆತ್ತಲಾಗಿದೆ. ಪೈಲ್ವಾನರ ಗರಡಿಮನೆಯ ಊರಿನಲ್ಲಿ ಗಾಂಧಿಯನ್ನು ಪೈಲ್ವಾನರನ್ನಾಗಿಸಿದ್ದಾರೆ. ಈ ಪ್ರತಿಮೆಯನ್ನು ನೋಡಿದ ಯಾರಿಗೆ ಆಗಲಿ ಗಾಂಧಿಯಲ್ಲಿ ಒಬ್ಬ ಕುಸ್ತಿಪಟು ಕಾಣಿಸುತ್ತಾರೆ. ನನಗೆ ಪೈಲ್ವಾನ್ ಮಲ್ಲಣ್ಣ... ■



ಮಿಥಿಲೆಯ ಸೀತೆಯರು



...ಗಬೇಕೆಂದರೆ ಹಾಳಾದ್ದು
...ಸಿಯೇ ಹೊರಡುತ್ತಿಲ್ಲ
...ಸಿ ಹೆಟ್ಟಿಗೆ ಸ್ಟ್ರಕ್ ಆಯಿತೇ?
...ದಲಾಳದಲಿ ಹುಗಿದಿಟ್ಟ
...ದೆಷ್ಟೋ ಇತಿಹಾಸದ ಪುಟಗಳು
...ಟ್ಟ ದಾಗೀನ ಆಭರಣ ಸಹಿತ
...ಸ್ಮೃತಿಯ ಗೋರಿಯೊಳಕ್ಕೆ
..., ಹಾಗೇ ಹುಗಿದುಕೊಂಡು
...ವಿಸ್ಮೃತಿಯ ಬಗಿದುಕೊಂಡು
...ಕ್ಕಿಂದು ಬೀಡುಬಿಟ್ಟ ಅಲ
...ಡುಬೂಹುದೆ ಒಂದೊಂದೇ ಬಳಲುಗಳ?
...ಥಿಲೆಯ ಸೀತೆಯರಿಗೆ

ಹಸಿರು ಹಂದರದ ಬಳಲು
ನೇಣಿಗೇರಲು ಕುಣಿಕೆಯಾದೀತೇ?
ನೂರು ಕನಸಿನ ಕೌದಿ ಹೊದ್ದು
ಒಳಗೆ ಮಿಡುಕಿದ ಸಂಕಟ,
ಚೀತ್ಕಾರಗಳಿಗೆ ಧ್ವನಿಯಾದೀತೇ?
ಬೊಡ್ಡೆ ಗಂಟು ಚಿಗುರೊಡೆದು
ಹೊಸಕಿದ ಕನಸಿನ ಹಂದರದಲ್ಲಿ
ವಸಂತ ಮರುಕಳಿಸೀತೇ?
ಕೊರಳಿಗೆ ಉರುಳಾದ ಬಳಲುಗಳ
ಒಂದೊಂದೇ ಸಿಕ್ಕು ಬಿಡಿಸಿ
ದುಃಶಾಸನರ ಕೈಗೆ ಸಿಕ್ಕರೂ
ಬೆತ್ತಲಾಗದ ದ್ರೌಪದಿಯರು
ಹೆಬ್ಬೆರಳಿನಿಂದ ನಡುನೆತ್ತಿಯವರೆಗೆ
ಶಕ್ತಿ ಕ್ರೋಢೀಕರಿಸಿ, ಮುಷ್ಟಿಬಿಗಿಮಾಡಿ
ಅಡ್ಡಲಾದ ಗೋಡೆಗಳ ಪುಡಿಮಾಡಿ
ಸಮುದ್ರದಲ್ಲಿ ಮುಳುಗಿ
ಆತ್ಮಹತ್ಯೆಗೆ ಯತ್ನಿಸಿದ ಸೂರ್ಯನ
ಮತ್ತೆ ಮತ್ತೆ ಹುಟ್ಟಿ ಬರುವಂತೆ ಮಾಡಿದ
ಮಿಥಿಲೆಯ ಸೀತೆಯರ ದಂಡು
ಬಳಲುಗಳ ಜೋಕಾಲಿ ಹೊಸೆದು
ಆ ದಿಗಂತದಿಂದ ಈ ದಿಗಂತದವರೆಗೆ
ಆಕಾಶ ಭೂಮಿ ಒಂದಾಗುವಂತೆ
ಜೀಕುತ್ತಿದ್ದಾರೆ ಜೋಕಾಲಿ.

● ಕೆ. ಷರೀಫಾ



‘ಅಕ್ಷರ ದಾಸೋಹ’- ಬಿಸಿಯೂಟ ಯೋಜನೆಯು ಶಾಲಾ ಮಕ್ಕಳ ಹಾಜರಾತಿ ವೃದ್ಧಿ ಮತ್ತು ಶಾಲಾ ಸೇರ್ಪಡೆಗಳ ಒತ್ತಾಸೆಯಲ್ಲಿ ಹುಟ್ಟಿದ್ದರೂ ಈ ಯೋಜನೆ ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಹಾಗೂ ಎಲ್ಲ ಜಾತಿ-ವರ್ಗಗಳನ್ನು ಅಡುಗೆ ಕಾರ್ಯಕ್ಕೆ ತೊಡಗಿಸಿಕೊಳ್ಳುವ ಮೂಲಕ ಸಾಮಾಜಿಕ ಸಮಾನತೆ ಮತ್ತು ಸಾಮರಸ್ಯದ ಅಂತಃಸತ್ವವನ್ನು ಒಳಗೊಂಡಿದೆ. ಜಾತಿ-ವರ್ಗಭೇದ ವಿಲ್ಲದೆ ಎಲ್ಲ ಮಕ್ಕಳೂ ಸಹಪಂಕ್ತಿ ಭೋಜನ ಮಾಡುವ ಸದವಕಾಶವನ್ನು ಕಲ್ಪಿಸಿದೆ. ಖಾಸಗೀಕರಣದಿಂದ ಸಾಮಾಜಿಕ ಸಾಮರಸ್ಯದ ಆಶಯಕ್ಕೆ ಕೊಡಲಿಪೆಟ್ಟು ಬೀಳುತ್ತದೆ. ಜಾತಿ ಮತ್ತು ವರ್ಗಗಳನ್ನು ಮೀರಿದ ಮನೋಧರ್ಮವನ್ನು ಬೆಳೆಸುವ ಒಂದು ಸಾಧನವಾಗಿಯೂ ಮುಖ್ಯವಾಗಿದ್ದ ‘ಅಕ್ಷರ ದಾಸೋಹ’ವು ಖಾಸಗಿಯವರ ಸಾಧನವಾದರೆ ಆಯಾ ಖಾಸಗಿ ಸಂಸ್ಥೆ ಮತ್ತು ಮಠಮಾನ್ಯಗಳ ಮನೋಧರ್ಮಕ್ಕೆ ಪೂರಕವಾಗಿಬಿಡುತ್ತದೆ.

ಬಿಸಿಯೂಟ ತಾಯ್ತನ ಕಿತ್ತುಕೊಳ್ಳುವ ಖಾಸಗೀಕರಣ

ವಿಶೇಷ ಲೇಖನ

● ಪ್ರೊ.ಬರಗೂರು ರಾಮಚಂದ್ರಪ್ಪ


ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ‘ಬಿಸಿಯೂಟ’ ಕಾರ್ಯಕ್ರಮವನ್ನು ಆರಂಭಿಸಿದ್ದು ಕೆಲವು ನಿರ್ದಿಷ್ಟ ಉದ್ದೇಶಗಳ ಬದ್ಧತೆಯಲ್ಲಿ, ಪ್ರಾಥಮಿಕ ಶಾಲೆಗೆ ಮಕ್ಕಳು ಸೇರುವಂತೆ ಮಾಡುವುದು ಮತ್ತು ಶಾಲೆ ಸೇರಿದ ಮಕ್ಕಳು ಬಿಡದಂತೆ ನೋಡಿಕೊಳ್ಳುವುದು ಮೂಲ ಉದ್ದೇಶವಾದರೂ ಒಟ್ಟು ಯೋಜನೆಯ ಅಂತರಂಗದಲ್ಲಿ ಮುಖ್ಯ ಸಾಮಾಜಿಕ ಸಂಗತಿಗಳು ಸೇರಿಕೊಂಡಿದ್ದವು.

ಶಾಲೆ ಬಿಡುವವರ ಸಂಖ್ಯೆ ಅತಿಯಾಗಿರುವುದು ಮತ್ತು ಕಲಿಕೆಯ ಏಕಾಗ್ರತೆಗೆ ಭಂಗವುಂಟಾಗುತ್ತಿರುವುದು ಹಸಿವಿನಿಂದ ಮತ್ತು ಅಪೌಷ್ಟಿಕ ಆಹಾರದಿಂದ ಎಂಬುದಾಗಿ ಕೆಲವು ಶೈಕ್ಷಣಿಕ ಆಯೋಗಗಳು ಅಭಿಪ್ರಾಯಪಟ್ಟಿದ್ದನ್ನು ಆಧರಿಸಿ ಮಕ್ಕಳಿಗೆ ಕಡೇಪಕ್ಷ 300 ಕ್ಯಾಲೋರಿಗಳ ಆಹಾರ ಕೊಡಬೇಕೆಂದು ನಿರ್ಧರಿಸಲಾಯಿತು. ಈ ಆಹಾರವು ಬೇಯಿಸಿದ ರೂಪದಲ್ಲಿರಬೇಕೆಂದು 2001 ರಲ್ಲಿ ಸುಪ್ರೀಂ ಕೋರ್ಟು ನಿರ್ದೇಶನ ನೀಡಿತು. ಈ ಹಿನ್ನೆಲೆಯಲ್ಲಿ ಎಸ್.ಎಂ. ಕೃಷ್ಣ ನೇತೃತ್ವದ ಕರ್ನಾಟಕ ಸರ್ಕಾರವು ‘ಅಕ್ಷರ ದಾಸೋಹ’ ಎಂಬ ಹೆಸರಿನಲ್ಲಿ ಶಾಲಾ ಮಕ್ಕಳಿಗೆ ಬಿಸಿಯೂಟ ಕೊಡುವ ಕಾರ್ಯಕ್ರಮವನ್ನು 2001 ರಲ್ಲಿ ದೇವದುರ್ಗ ತಾಲ್ಲೂಕಿನ ಅರಕೇರಾ ಗ್ರಾಮದಲ್ಲಿ ವಿದ್ಯುಕ್ತವಾಗಿ ಆರಂಭಿಸಿತು. ಆಗ ಎಚ್. ವಿಶ್ವನಾಥ್ ಶಿಕ್ಷಣ ಸಚಿವರಾಗಿದ್ದರು. 2002 ರವರೆಗೆ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಿಗೆ ಸೀಮಿತವಾಗಿದ್ದ ‘ಅಕ್ಷರ ದಾಸೋಹ’ ಕಾರ್ಯಕ್ರಮವು 2003 ರಲ್ಲಿ ಇಡೀ ರಾಜ್ಯಕ್ಕೆ ವಿಸ್ತರಿಸಲ್ಪಟ್ಟಿತು. ಮೊದಲು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಮಾತ್ರ ಲಭ್ಯವಾಗುತ್ತಿದ್ದ ಈ ಸೌಲಭ್ಯವನ್ನು ಇತ್ತೀಚೆಗೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ. ಈಗ ಒಟ್ಟು ಸುಮಾರು 73 ಲಕ್ಷ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

‘ಅಕ್ಷರ ದಾಸೋಹ’ ಯೋಜನೆಯನ್ನು ಅನುಷ್ಠಾನಕ್ಕೆ ತರುವಾಗ ಅಡುಗೆ ಮಾಡಲು ಹಿಂದುಳಿದ, ದಲಿತ ಹಾಗೂ ಅಲ್ಪಸಂಖ್ಯಾತ ಮಹಿಳೆಯರನ್ನು ತೊಡಗಿಸಬೇಕೆಂಬ ಮಾರ್ಗಸೂಚಿಗನುಗುಣವಾಗಿ ಈಗ ಈ ವರ್ಗಗಳ ಶೇ. 65 ರಿಂದ 70 ರಷ್ಟು ಹೆಣ್ಣುಮಕ್ಕಳು ಅಡುಗೆ ಕೆಲಸದಲ್ಲಿ ತೊಡಗಿದ್ದಾರೆ. ಇವರಿಗೆ ಕನಿಷ್ಠ ವೇತನ ತಿಂಗಳಿಗೆ 400 ರಿಂದ 850 ರವರೆಗೆ ಇದೆ. ಅಡುಗೆಯವರು, ಅಡುಗೆ ಮುಖ್ಯಸ್ಥರು, ಸಹಾಯಕರು-ಹೀಗೆ ಶ್ರೇಣಿಗನುಗುಣವಾಗಿ ವೇತನ. ಶಾಲಾ ಮುಖ್ಯೋಪಾಧ್ಯಾಯರಿಂದ ಹಾಜರಾತಿಯ ಉಸ್ತುವಾರಿ.

ದಲಿತ ಹಾಗೂ ಕೆಲವು ‘ಕೆಳಜಾತಿ’ಗಳವರು ಮಾಡಿದ ಅಡುಗೆಯನ್ನು ಊಟ ಮಾಡಲು ನಿರಾಕರಿಸಿದ ಘಟನೆಗಳು ಆರಂಭದಲ್ಲಿ ನಡೆದರೂ ಆನಂತರ ಒಂದು ಒಪ್ಪಿತ ವಾತಾವರಣ ಮೂಡಿತು. ಸ್ವಲ್ಪದಿನಗಳ ನಂತರ ಮೊಟ್ಟೆ ಕೊಡಬೇಕೆ ಬೇಡವೆ ಎಂಬ ಪ್ರಶ್ನೆಯನ್ನು ರಾಷ್ಟ್ರೀಯ ಸಮಸ್ಯೆಯೆಂಬಂತೆ ಚರ್ಚಿಸಲಾಯಿತು. ಮೊಟ್ಟೆ ಬೇಡ ಎಂದು ಹೇಳಿದವರಲ್ಲಿ ಅನೇಕರು ಪ್ರತಿಷ್ಠಿತ ಮಠಾಧೀಶರು. ಸರ್ಕಾರಗಳು ಪ್ರತಿಷ್ಠಿತ ಮಠಾಧೀಶರ ಮಾತು ಮೀರುವುದುಂಟೆ? ಮೊಟ್ಟೆ ಒಡೆದು ಹೋಯಿತು! ಆನಂತರ ‘ಅಕ್ಷರ ದಾಸೋಹ’ದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಸುದ್ದಿಯಾಯಿತು. ಭ್ರಷ್ಟಾಚಾರಿಗಳಿಗೆ ಮಕ್ಕಳಾದರೇನು, ಮಹಿಳೆಯರಾದರೇನು? ಅನ್ನಕ್ಕೆ ಕನ್ನ ಹಾಕಿ ಸುಖಿಸುವ ವಿಕೃತಿಗೆ ಮನುಷ್ಯತ್ವವಾದರೂ ಎಲ್ಲಿರುತ್ತದೆ? ಭ್ರಷ್ಟಾಚಾರದ ಜೊತೆಜೊತೆಗೇ ಅದಕ್ಷ ನಿರ್ವಹಣೆಯ ಅಂಶವೂ ಆದ್ಯತೆ ಪಡೆಯಿತು. ಸರ್ಕಾರದ ಮಾನವೀಯ ಕಾರ್ಯಕ್ರಮವನ್ನು ಖಾಸಗಿಯವರ ಕೈಗೆ ಕೊಟ್ಟು ಕೈ ಮುಗಿಯಲು ಇದಕ್ಕಿಂತ ಕಾರಣಬೇಕೆ? ಜನತೆಯ ಸರ್ಕಾರ ಮಾಡಬೇಕಾದ ಕೆಲಸವೆಂದರೆ ಭ್ರಷ್ಟಾಚಾರಕ್ಕೆ ಬರೆ ಎಳೆಯುವುದು ಮತ್ತು ನೌಕರಶಾಹಿಯ ಅದಕ್ಷತೆಗೆ ಚಾಟಿ ಬೀಸುವುದು. ಇಷ್ಟಕ್ಕೂ ‘ಅಕ್ಷರ ದಾಸೋಹ’ದ ಭ್ರಷ್ಟಾಚಾರ ಮತ್ತು ಅದಕ್ಷತೆಯ ಅಂಶಗಳು ತೀರಾ ದೊಡ್ಡ ಪ್ರಮಾಣದಲ್ಲಿರಲಿಲ್ಲ, ಆದರೆ ನಮ್ಮ ‘ಉನ್ನತ’ ನೌಕರಶಾಹಿಗೆ ಮತ್ತು ಸರ್ಕಾರಕ್ಕೆ (ಯಾವುದೇ ಪಕ್ಷದ್ದಿರಲಿ) ಕೈ ತೊಳೆದುಕೊಳ್ಳಲು ಇಷ್ಟು ಸಾಕಾಯಿತು. ಆರಂಭಕ್ಕೆಂದು-ಹಿಂದಿನ ಸರ್ಕಾರ- ಇಸ್ಕಾನ್ ಮತ್ತು ಅದಮ್ಯ ಚೇತನ ಎಂಬ ಎರಡು ಸಂಸ್ಥೆಗಳಿಗೆ ‘ಅಕ್ಷರ ದಾಸೋಹ’ಕ್ಕಾಗಿ ಕೆಲವು ಶಾಲೆಗಳನ್ನು ವಹಿಸಿಕೊಟ್ಟಿತು. ಈಗಿನ ಸರ್ಕಾರ ತನ್ನ ‘ಅಜೆಂಡಾಕ್ಕನುಗುಣವಾಗಿ’ ಕೆಲವು ಮಠಮಾನ್ಯಗಳಿಗೂ ‘ಅಕ್ಷರ ದಾಸೋಹ’ದ ಹೊಣೆಯನ್ನು ವರ್ಗಾಯಿಸಿತು. ಹಾಗಂತ, ಈ ಯಾವ ಸಂಸ್ಥೆಗಳೂ ಉಚಿತವಾಗಿ ಊಟ ನೀಡುತ್ತಿಲ್ಲ, ಸರ್ಕಾರವೇ ಒಬ್ಬ ವಿದ್ಯಾರ್ಥಿ(ನಿ)ಗೆ ಒಂದು ಊಟಕ್ಕೆ ತಲಾ ಮೂರು ರೂಪಾಯಿ ಇಪ್ಪತ್ತು ಪೈಸೆಯನ್ನು ನೀಡುತ್ತಿದೆ. ಈಗ ವರ್ಷವೊಂದಕ್ಕೆ ಸರ್ಕಾರವು 600 ಕೋಟಿ ರೂಪಾಯಿಗಳನ್ನು ‘ಅಕ್ಷರ ದಾಸೋಹ’ ಯೋಜನೆಗಾಗಿ ಖರ್ಚು ಮಾಡುತ್ತಿದೆ. ಹಾಗಾದರೆ ಈ ‘ಸ್ವಯಂ ಸೇವಾ’ ಸಂಸ್ಥೆಗಳು ಮಾಡುತ್ತಿರುವುದೇನು? ತಾವೇ ಮಕ್ಕಳಿಗೆ ಊಟ ಕೊಡುತ್ತೇವೆಂಬ ಪ್ರಚಾರ ಮತ್ತು ‘ಸ್ವಯಂ’ ಸೇವೆ. ಸರ್ಕಾರದ ಹಣದಲ್ಲಿ ತಮ್ಮ ಸಂಸ್ಥೆಗೆ ಹೆಸರು. ಮಕ್ಕಳ ಹಸಿವು ಇಂಗಿಸಿದ ಕೀರ್ತಿ. ನಿಜ; ಈ ಸಂಸ್ಥೆಗಳೂ ಸ್ವಲ್ಪ ಹಣವನ್ನು ವಿನಿಯೋಗಿಸುತ್ತಿರಬಹುದು. ಆದರೆ ಸರ್ಕಾರವು ತಾನೇ ಸೊಗಸಾಗಿ ನಿರ್ವಹಿಸಬಹುದಾಗಿದ್ದ ಯೋಜನೆಯನ್ನು ಕಂಡವರ ಕೀರ್ತಿಗೆ ಕಪ್ಪ ಕಾಣಿಕೆಯಂತೆ ಒಪ್ಪಿಸುವುದು ಪ್ರಜಾಪ್ರಭುತ್ವದ ಅಂತಃಶಕ್ತಿಗೆ ಮಾಡುವ ಅವಮಾನ.

ಈ ಸಂಸ್ಥೆಗಳಾದರೂ ಹೆಚ್ಚುವರಿಯಾಗಿ ಸ್ವಂತ ಹಣವನ್ನು ವಿನಿಯೋಗಿಸುತ್ತಿವೆಯೆ? ಒಂದು ಮಾಹಿತಿಯಂತೆ ಇಸ್ಕಾನ್ ಸಂಸ್ಥೆಯು ಒಬ್ಬ ವಿದ್ಯಾರ್ಥಿ(ನಿ)ಗೆ ಒಂದು ಊಟಕ್ಕೆ ತಲಾ 6 ರೂಪಾಯಿ ಕೊಡುಗೆಯನ್ನು ದೇಶವಿದೇಶಗಳಿಂದ ಸಂಗ್ರಹಿಸುತ್ತಿದೆ. ಈ ಸಂಸ್ಥೆಯು ಈಗ 5,67,662 ಮಕ್ಕಳಿಗೆ ಬಿಸಿಯೂಟ ನೀಡುವ ಹೊಣೆ ಹೊತ್ತಿದ್ದು ಇದನ್ನೇ ಮುಂದುಮಾಡಿ ಸುಮಾರು 60 ಕೋಟಿ ರೂಪಾಯಿಗಳಷ್ಟು ಹಣ ಸಂಗ್ರಹ ಮಾಡಿ, ಅದನ್ನು ಬೇರೆ ಉದ್ದೇಶಗಳಿಗೆ (ಷೇರು ಮಾರುಕಟ್ಟೆ-ಇತ್ಯಾದಿ) ಬಳಸಿದೆಯೆಂದು ಆರೋಪಿಸಲಾಗುತ್ತಿದೆ. ಈ ಬಗ್ಗೆ ಕಳೆದ ವಿಧಾನಸಭೆಯಲ್ಲಿ ಚರ್ಚೆಯೂ ಆಗಿದೆ. ಹೀಗೆ ಹಸಿವನ್ನು ಬಂಡವಾಳ ಮಾಡಿಕೊಳ್ಳುವ ಪ್ರವೃತ್ತಿ ಒಂದು ಕಡೆಯಾದರೆ, ಆಹಾರ ಪದ್ಧತಿಯನ್ನು ತಮ್ಮ ಸಂಸ್ಥೆ ಹಾಗೂ ಮಠಮಾನ್ಯಗಳ ಪದ್ಧತಿಗೆ ಒಗ್ಗಿಸುತ್ತಿರುವುದು ಇನ್ನೊಂದು ಕಡೆ. ತಾವು ತಿನ್ನುವುದಿಲ್ಲ ಎನ್ನುವ ಕಾರಣಕ್ಕಾಗಿ ಕೆಲವು ಸಂಸ್ಥೆಗಳು ಈರುಳ್ಳಿ, ಬೆಳ್ಳುಳ್ಳಿಯನ್ನು ಅಡುಗೆಗಾಗಿ ಬಳಸುತ್ತಿಲ್ಲ. ಮೊಟ್ಟೆಯಂತೂ ಇಲ್ಲವೆಂದರೆ ಈರುಳ್ಳಿಯೂ ಬೇಡವೆ? ಆಹಾರಪದ್ಧತಿಯ ಮೇಲೆ ಆಕ್ರಮಣವೆ?



ಆಯಾ ಊರುಗಳಲ್ಲಿ ಆಯಾ ಊರಿನ ಹೆಣ್ಣುಮಕ್ಕಳನ್ನೇ ತೊಡಗಿಸಿ ಆಯಾ ಪ್ರದೇಶದ ಆಹಾರ ಪದ್ಧತಿಗನುಗುಣವಾಗಿ ಬಿಸಿಯೂಟ ಕೊಟ್ಟರೆ ಅದು ಸಾಂಸ್ಕೃತಿಕ ಹಾಗೂ ಸಾಮಾಜಿಕ ನ್ಯಾಯವನ್ನೂ, ವೈವಿಧ್ಯತೆಯ ಮೌಲ್ಯವನ್ನೂ ಎತ್ತಿಹಿಡಿದಂತಾಗುತ್ತದೆ. ಆದರೆ ಈಗ ಸುಮಾರು 20 ಸಾವಿರ ಮಹಿಳೆಯರನ್ನು ಕೆಲಸದಿಂದ ಎತ್ತಿಹಾಕಲಾಗಿದೆ. ಇನ್ನೂ ಒಂದು ಲಕ್ಷ ಮಹಿಳೆಯರು ಈ ಕೆಲಸದಲ್ಲಿ ತೊಡಗಿದ್ದು ಖಾಸಗೀಕರಣವನ್ನು ವಿಸ್ತರಿಸಿ ಅವರನ್ನೂ ಎತ್ತಿ ಎಸೆಯಲು ಬಿಜೆಪಿ ಸರ್ಕಾರ ಚಿಂತಿಸುತ್ತಿದೆ. ತಮ್ಮನ್ನು ಭೇಟಿ ಮಾಡಿದ ಬಿಸಿಯೂಟ ಕೆಲಸಗಾರರ ಸಂಘಟನೆಯವರಿಗೆ ಮಾನ್ಯ ಮುಖ್ಯಮಂತ್ರಿಗಳು "ಇಡೀ ರಾಜ್ಯಕ್ಕೆ ಬಿಸಿಯೂಟ ಖಾಸಗೀಕರಣ ಮಾಡುತ್ತೇವೆ" ಎಂದು ಧಮಕಿ ಹಾಕಿ ಕಳಿಸಿದ್ದಾರೆ. ಇದರಿಂದ ಅಲ್ಪಸಂಭಾವನೆಗೆ ಕೆಲಸ ಮಾಡುತ್ತಿದ್ದ ಒಂದು ಲಕ್ಷ ಇಪ್ಪತ್ತು ಸಾವಿರ ಮಹಿಳೆಯರು ಬೀದಿಗೆ ಬಿದ್ದಂತಾಗುತ್ತದೆ. ಒಂದು ಕಡೆ ‘ಗ್ರಾಮೀಣ ಉದ್ಯೋಗ ಖಾತರಿ ಯೋಜನೆ’ಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದು ಇಂತಿಷ್ಟು ದಿನಗಳಾದರೂ ಕಡ್ಡಾಯವಾಗಿ ಕೆಲಸ ಕೊಡಬೇಕು ಇಲ್ಲವೆ ಭತ್ಯೆ ಕೊಡಬೇಕು ಎಂದು ಹೇಳುತ್ತದೆ. ಇನ್ನೊಂದು ಕಡೆ ರಾಜ್ಯ ಸರ್ಕಾರವು ಬಿಸಿಯೂಟ ನೀಡುತ್ತಿದ್ದ ಮಹಿಳೆಯರನ್ನು ಕೆಲಸದಿಂದ ತೆಗೆದು ಬಿಸಿಮುಟ್ಟಿಸಲು ನೋಡುತ್ತಿದೆ. ಎಂಥ ವಿಪರ್ಯಾಸ! (ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೂ ಇಲ್ಲಿ ಸರಿಯಾಗಿ ಜಾರಿಯಾಗಿಲ್ಲವೆಂಬುದು ಬೇರೆ ವಿಷಯ.)

‘ಅಕ್ಷರ ದಾಸೋಹ’- ಬಿಸಿಯೂಟ ಯೋಜನೆಯು ಶಾಲಾ ಮಕ್ಕಳ ಹಾಜರಾತಿ ವೃದ್ಧಿ ಮತ್ತು ಶಾಲಾ ಸೇರ್ಪಡೆಗಳ ಒತ್ತಾಸೆಯಲ್ಲಿ ಹುಟ್ಟಿದ್ದರೂ ಈ ಯೋಜನೆ ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಹಾಗೂ ಎಲ್ಲ ಜಾತಿ-ವರ್ಗಗಳನು
ಅಡುಗೆ ಕಾರ್ಯಕ್ಕೆ ತೊಡಗಿಸಿಕೊಳ್ಳುವ ಮೂಲಕ ಸಾ
ಜಿಕ ಸಮಾನತೆ ಮತ್ತು ಸಾಮರಸ್ಯದ ಅಂತಃಸತ್ವ
ಒಳಗೊಂಡಿದೆ. ಜಾತಿ-ವರ್ಗಭೇದವಿಲ್ಲದೆ ಎಲ್ಲ ಮಕ
ಸಹಪಂಕ್ತಿ ಭೋಜನ ಮಾಡುವ ಸದವಕಾಶವನ್ನು ಕಲ
ಖಾಸಗೀಕರಣದಿಂದ ಸಾಮಾಜಿಕ ಸಾಮರಸ್ಯದ ಆಶ
ಕೊಡಲಿಪೆಟ್ಟು ಬೀಳುತ್ತದೆ. ಜಾತಿ ಮತ್ತು ವರ್ಗಗ
ಮೀರಿದ ಮನೋಧರ್ಮವನ್ನು ಬೆಳೆಸುವ ಒಂದು ಸಾ
ವಾಗಿಯೂ ಮುಖ್ಯವಾಗಿದ್ದ ‘ಅಕ್ಷರ ದಾಸೋಹ
ಖಾಸಗಿಯವರ ಸಾಧನವಾದರೆ ಆಯಾ ಖಾಸಗಿ
ಮತ್ತು ಮಠಮಾನ್ಯಗಳ ಮನೋಧರ್ಮಕ್ಕೆ ಪೂರಕ
ಬಿಡುತ್ತದೆ.


ಬಿಸಿಯೂಟ ಕಾರ್ಯಯೋಜನೆಯ ಮಾರ್ಗಸೂ
ಯಲ್ಲಿ ಕೇಂದ್ರ ಸರ್ಕಾರವು ಯಾವುದೇ ಜಾತಿ ಹಾ
ಧರ್ಮದ ಪ್ರಚಾರಕ್ಕೆ ಈ ಯೋಜನೆಯು ಬಳಕೆಯ
ಬಾರದೆಂದು ಸ್ಪಷ್ಟವಾಗಿ ಹೇಳಿದೆ. ಇಸ್ಕಾನ್ ಮ
ಮಠಮಾನ್ಯಗಳಿಗೆ ಹಾಗೂ ನಿರ್ದಿಷ್ಟ ಜಾತಿಮತ ಪ್ರ
ಸಂಸ್ಥೆಗಳಿಗೆ ಈ ಯೋಜನೆಯ ನಿರ್ವಹಣೆಯ
ವಹಿಸಿಕೊಟ್ಟರೆ ಏನಾಗುತ್ತದೆ? ನೇರವಾಗಿ ಹೇ
ಇದ್ದಾಗಲೂ ಆಯಾ ಸಂಸ್ಥೆ ಧರ್ಮ, ಜಾತಿ, ಮಠಮಾನ್ಯ
ಪ್ರಚಾರವಾಗುತ್ತದೆ. ಆದ್ದರಿಂದ ಇದು ಮಾರ್ಗಸೂಚಿ
ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಒಂದು ವೇಳೆ ಮಾ
ಸೂಚಿಯಲ್ಲಿ ಈ ಅಂಶ ಇಲ್ಲದಿದ್ದರೂ ನಿರ್ದಿ
ಮತಧರ್ಮ ಮತ್ತು ಪಂಥ ಪ್ರಚಾರಗಳಿಗೆ ಪೂರಕವಾಗ
‘ಅಕ್ಷರ ದಾಸೋಹ’ ಯೋಜನೆಯನ್ನು ಅನುಷ್ಠಾ
ಗೊಳಿಸುವುದು ಸಾಮಾಜಿಕ ಹಾಗೂ ನೈತಿಕ ಜವಾಬ
ಯಾಗಿದೆ. ಆದರೆ ಇದೇ ಮಾರ್ಗಸೂಚಿಯಲ್ಲಿ ಖಾ
ಯವರಿಗೂ ವಹಿಸಬಹುದೆಂಬ ಅಂಶವಿದ್ದು ಅದ
ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಸರ್ಕಾರದ ಒಂ
ಪೈಸೆಯನ್ನೂ ಮುಟ್ಟದೆ ಖಾಸಗಿ ಸಂಸ್ಥೆಗಳು ‘ಅ
ದಾಸೋಹ’ ಯೋಜನೆಯನ್ನು ಜಾತಿ-ಧರ್ಮದೂರವ
ನಿರ್ವಹಿಸಲು ಸಿದ್ಧರಿದ್ದಾರೆಯೇ? ಇಷ್ಟಕ್ಕೂ ಸರ್ಕಾರ
ತನ್ನ ಮಹತ್ವದ ಮಾನವೀಯ ಯೋಜನೆಯ
ಖಾಸಗೀಕರಣಗೊಳಿಸಿ ಅಮಾನವೀಯವಾಗಿಸುವು
ಸರಿಯೆ?

ಎಲ್ಲಕ್ಕೂ ಖಾಸಗೀಕರಣವೇ ಮದ್ದು ಎನ್ನುವುದಾದ
ಜನಪ್ರತಿನಿಧಿಗಳನ್ನು ನಾವ್ಯಾಕೆ ಆರಿಸಬೇಕು? ವಿಧಾನಸ
ಲೋಕಸಭೆ ಯಾಕೆ ಬೇಕು
ಆಡಳಿತ ನಡೆಸಲು ಸರ್ಕಾರ
ರಚನೆ ಯಾಕೆ? ಸರ್ಕಾರ
ಹಣದಲ್ಲಿ ಸಾಕಷ್ಟು ಸಂಬಳಸಾ
ಪಡೆಯುವ ನೌಕರ ವಗ
ವಾದರೂ ಯಾಕಿರಬೇಕು? ಎ
ವನ್ನೂ ಖಾಸಗಿಯವರಿಗೆ ವಹಿ
‘ವ್ಯವಹಾರ’ ನಡೆಸಿ ಸಹಿ ಹಾ
ದರಷ್ಟೇ ಸಾಕಲ್ಲವೆ? ಒಂದ
ಮಹತ್ವದ ಯೋಜನೆಯನ್ನು ಸ
ಯಾಗಿ ನಡೆಸಲು ಸಾಧ್ಯವಾ
ದಷ್ಟು ಅದಕ್ಷತೆಯಿದ್ದರೆ ಆಡಳಿ
ನಡೆಸುವುದೇ ಬೇಡ. ಅಧಿಕಾ
ಬಿಟ್ಟು ಆರಾಮವಾಗಿ ಅಡ್ಡಾ
ಕೊಂಡಿರಲಿ.

ಈ ವಿಷಯದಲ್ಲಿ ಮೃಗ
ತನಕ್ಕೆ ಅವಕಾಶವಿರಬಾರದು. ‘ಕಳ್ಳನಿಗೊಂದು ಪಿಳ್ಳೆ ನೆ
ಎಂಬಂತಾಗಬಾರದು. ಇಲ್ಲಿರುವುದು ಪ್ರಜಾಪ್ರಭುತ್ವ ಪ
ಯೆಯ ಪ್ರಶ್ನೆ; ಮಕ್ಕಳ ಮನೋಧರ್ಮದ ಪ್ರಶ್ನೆ, ಸಾಮಾ
ಸಾಮರಸ್ಯದ ಪ್ರಶ್ನೆ. ಸಾಮುದಾಯಿಕ ಭಾಗವಹಿಸುವಿಕೆ
ಪ್ರಶ್ನೆ. ಜೊತೆಗೆ ಲಕ್ಷಕ್ಕೂ ಊಟ ಬಡಿಸುವ ‘ತಾಯ್ತನ’ವ
ಕಿತ್ತುಕೊಳ್ಳುವ ಪ್ರಶ್ನೆ.

ಹಳ್ಳಿಯ ಹೆಣ್ಣುಮಕ್ಕಳಾಗಲಿ, ಪಟ್ಟಣ
ಹೆಣ್ಣುಮಕ್ಕಳಾಗಲಿ, ಜಾತಿ-ಭೇದವಿಲ್ಲದೆ ಅಡುಗೆ ಮಾ
ಮಕ್ಕಳಿಗೆ ಉಣಬಡಿಸುವ ತಾಯಿಮನಸ್ಸು ಬೇರೆ ಯಾರಿ
ಬಂದೀತು? ಅಮ್ಮಂದಿರು, ಅಕ್ಕಂದಿರು, ಪ್ರೀತಿ ವಾತ್ಸಲ್ಯದಿ
ಉಣಬಡಿಸುವ ಆಹಾರಕ್ಕೆ ಇರುವ ತಾಯ್ತನದ ಆಯಾ
ಇನ್ನೆಲ್ಲಿ ಸಿಕ್ಕೀತು? ಹೀಗೆ ಊರ ಅಮ್ಮಂದಿರು-ಅಕ್ಕಂದಿ
ಬೇಯಿಸಿದ ಭಾವನಾತ್ಮಕ ಅಡುಗೆಯ ಆನಂದ ಮತ್ತೆ
ಉಕ್ಕೀತು? ಈ ಸಾಮಾಜಿಕ ಸಾಮರಸ್ಯಕ್ಕೆ ಬೆಲೆ ಕಟ್ಟ
ಸಾಧ್ಯವೆ? ತಾಯ್ತನದ ಮನೋಧರ್ಮವನ್ನು ಗಟ್ಟಿಗೊಳಿಸ
ನಿಟ್ಟಿನಲ್ಲಿ ‘ಅಕ್ಷರ ದಾಸೋಹ’ವನ್ನು ಸರ್ಕಾರವು ಕಟ್ಟುನಿಟ
ನಿರ್ವಹಿಸಿದರೆ ಆಗುವ ಸಾಮಾಜಿಕ ಲಾಭ ಆರ್ಥಿ
ಲಾಭವನ್ನು ಮೀರಿದ್ದು. ಆದ್ದರಿಂದ ‘ಅಕ್ಷರ ದಾಸೋಹ’ವ
ಹಸಿವು ಮತ್ತು ಅಕ್ಷರದ ಸಂಬಂಧದಲ್ಲಿ ಅರ್ಥಮಾ
ಕೊಳ್ಳುವುದರ ಜೊತೆಗೆ ತಾಯ್ತನದ ನೆಲೆಯಲ್ಲೂ ನಿರ್ವಹಿ
ವುದು ಮುಖ್ಯವೆಂದು ನಾನು ಭಾವಿಸುತ್ತೇನೆ. ಈ
ಕಾರಣಗಳಿಗಾಗಿ ಬಿಸಿಯೂಟ ಖಾಸಗೀಕರಣವನ್ನು ವಿರೋ
ಸುತ್ತೇನೆ. ತಮಿಳುನಾಡಿನಲ್ಲಿ ಅಲ್ಲಿನ ಸರ್ಕಾರಗಳು
ವರ್ಷಗಳಿಂದ ಯಶಸ್ವಿಯಾಗಿ ಬಿಸಿಯೂಟ ಕಾರ್ಯಕ್ರ
ವನ್ನು ಅನುಷ್ಠಾನಗೊಳಿಸುತ್ತಿರುವಾಗ ಕರ್ನಾಟಕ ಸರ್ಕಾ
ಯಾಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸ ಬಯಸುತ್ತೇನೆ.
ಖಾಸಗೀಕರಣ ವಿರೋಧಿಗಳೆಲ್ಲರ ಪ್ರಶ್ನೆ.

...ಮಂಡೇವುದ ರಾಜ್ಯಪಾಲ ಮತ್ತೆ ಮಂತ್ರಿಯಾದನಂತೆ



...ಂದ್ರದಲ್ಲಿ ಮತ್ತೆ ಮನಮೋಹನ ಸಿಂಗನ ಸರ್ಕಾರ ...ಬಂದು, ಕರ್ನಾಟಕದಲ್ಲಿ ಎಡೂರಪ್ಪ ಯಥಾಸ್ಥಿತಿ ...ಮುಂದುವರಿಯುತ್ತ, ಮುಂಗಾರು ಮಳೆ ಹದವಾಗಿ ...ಹೋಗಿ ಈ ಲೋಕವೇ ತಣ್ಣಗಾದಂತೆ ಕಾಳಮಾವನಿಗೆ ...ಅನಿಸತೊಡಗಿತು. ಕೇಂದ್ರ ಮತ್ತು ರಾಜ್ಯದಲ್ಲಾದ ಯಾವ ...ಬದಲಾವಣೆಗಳೂ ಆವನು ಕುಳಿತಿದ್ದ ಜಾಗವನ್ನು ಅಲ್ಲಾಡಿಸ ...ಲಿಲ್ಲ. ಆದರೂ ಎಡೂರಪ್ಪ ರೈತನಿಗೆ ಮೂರು ...ಪರ್ಸೆಂಟ್ ಬಡ್ಡೀದರದಲ್ಲಿ ಸಾಲ ವಿತರಿಸುವ ವಿಷಯವನ್ನು ...ಹೇಳಿದಾಗ ಬ್ಯಾಂಕಿನ ಬಾಗಿಲವರೆಗೂ ಹೋಗಿ ...ಸೀರ,

"...ಯ್ಯೋ, ಅಯ್ಯೋ ಬ್ಯಾಂಕಿನ ಕತಿಯೇನಾಗ್ಯದೆ ಗೊತ್ತೆ? ... ಅಂಗಡಿತ ಎಷ್ಟು ಜನಿದ್ರೊ ಆದಕೂ ಜಾಸ್ತಿ ...ಬ್ಯಾಂಕಿಗೆ ಮುತ್ತಿಗಂಡಿದ್ರು, ಹೋಗತ್ತಗೆ" ಎಂದ.

"...ಯಾವ ಬ್ಯಾಂಕೊ?" ಎಂದ ಉಗ್ರಿ.

"...ಇನ್ಯಾವ ಬ್ಯಾಂಕ್ಲ ಇರದೆ ಒಂದು ಸೇಟ್ ...ಇಲವೆ?"

"...ಅಂತೂ ಸಾಲ ಕೇಳಕ್ಕೆ ಸ್ಟೇಟ್ ಬ್ಯಾಂಕಿನವರೆಗೂ ...ಹೋಗಿದ್ದೆ ಅನ್ನು."

"ಹಿರಿಸ್ಯಾವೆ ಪಟೇಲ್ರ್ಯಾರ್ಲ?" ಎಂದಳು ಜುಮ್ಮಿ.

"ಅವ್ರುನು ಶ್ರೀಕಂಠಯ್ಯಾರ ಅಪ್ಪ ಕಣೆ. ಈ ಸುತ್ತಳ್ಳಿಗ್ಯಲ್ಲ ಸಾಲ ಕೊಟಗಂಡು ಬಡ್ಡಿ ವಸೂಲಿಗೆ ಬರೋನು. ಅವ್ರುನತ್ರ ನಮ್ಮ ಸೀರಮಾವನೂ ಸಾಲ ಮಾಡಿದ್ನ. ಒಂದು ಸತಿಯ ಇತ್ತಗೆ ಬಂದ್ರೆ ಕಾಲು ಮುರಿತಿನಿ ಅಂತ ಹೆದರಿಸಿಬುಟ್ಟ. ಅವತ್ತಿಂದ ಇವ್ರುನು ಹಿರಿಸಾಯದ ಕಡಿಕೋಗಲಿಲ್ಲ ಅವ್ರುನು ಇತ್ತಗೆ ಬರ್ಲಿಲ್ಲ."

"ಅದೂ ಹಿಂಗಾಯ್ತು ಕಂಡ್ಯೇ. ಇಂದ್ರಾಗಾಂಧಿ ಬಂದೂ ಕೊಟ್ರೋರಿಗೆ ಕೊಡುಂಗಿಲ್ಲ ಅಂತ ಕಾನೂನ ಜಾರಿ ಮಾಡಿದ್ಲು. ಆ ಟೇಮಲ್ಲಿ ಏಟೋ ಜನ ಒಡಬಗ್ಗರು ಬಡ್ಡಿಯವಾರದೋರ ಕೈಯಿಂದ ಕಳಚಿಗಂಡ್ರು" ಎಂದ ಕಾಳಮಾವ.

"ಆದಕಿಂತ್ಲೂ ಬ್ಯಾಂಕಿನೋರು ಬಡವರಿಗೆ ಸಾಲ ಕೊಡಬವ್ರುದು ಅಂತ ಪೂಜಾರಿ ಹೇಳಿದ್ಲೂ ಅಲ್ದೆ ಸಾಲನೂ ಕೊಟ್ಟ. ಅಂಗಾಗಿ ಬಡ್ಡಿಯವಾರ ಕಡಿಮಾಯ್ತು."

ಯಲು ಸೀಮೆ

ಕಪ್ಪೆಪುರಾಣ

▶ಬಿ. ಚಂದ್ರೇಗೌಡ

"ಪೂಜಾರಿ ಗೆದ್ನೆ?"

"ಅವ್ರುನೆಲ್ಲಿ ಗೆದ್ಯಾ, ಸೋತೋಗಲಿಲವೆ?"

"ಪೂಜಾರಿ ಸೋಲಬಾರದಿತ್ತು ಕಂಡ್ಯ" ಎಂದ ಸೀರ.

"ಸೋಲಬಾರದಿತ್ತು ಅಂತ ನೀನಂತೀ. ಅಲ್ಲಿ ಜನಗಳ್ಯಲ್ಲ ಸಾಬರ ವಿರುದ್ಧ ಒಟ್ಟಾಗಿಬುಟ್ಟವುರಪ್ಪ, ಅಂತ ಜಾಗದಲ್ಲಿ ಪೂಜಾರಿ ಅಂಥೋನು ಗೆಲ್ಲಕ್ಕಾದತೆ?"

"ಆದ್ರು ಪೂಜಾರಿ ಮದ್ನ ತೂಕ ಉಳಿಸಿಗಂಡಿಲ್ಲ" ಎಂದ ಕಾಳಮಾವ.

"ಏ ತೂಕ ಯಂತೆದೊ, ಅವ್ರುನು ಮದ್ದಿಂದ ಇದ್ದಿದ್ದೇ ಅಂಗಲವೆ. ಈಚಿಗೆ ಒಂದೀಟು ಜಾಸ್ತಿ ಮಾತಾಡತಿದ್ದ ಅಷ್ಟೆಯ. ಅದಕಿಂತ್ಲು ಜನ ಈ ಸತಿ ಬಿಜೆಪಿಗೆ ಓಟು ಮಾಡ್ಯವುರೆ. ಅದ ಒಪ್ಪಿಗಬೇಕು. ಹಿಂದೆ ಇದೇ ದ್ಯಾವೇಗೌಡ್ರು ಲೀಡ್ರಾಗಿದ್ದಾಗ ಬರೋ ಬರಿ ಹದುನೆಂಟು ಸೀಟು ಗೆದ್ದಿದ್ರು. ಇವತ್ತು ಮೂರು ಸೀಟಿಗೆ ನಿಂತೋದ. ಇದಕೇನೇಳ್ತೀ?" ಎಂದ ಉಗ್ರಿ.

"ನಿಜ ಬುಡು, ಜನ ಬದ್ಲಾವಣೆ ತರುವಾಗ ಯಾರು ತಡಿಯಕ್ಕಾದತೂ."

"ಬದ್ಲಾವಣೆ ತರಲಪ್ಪ, ಯಾಕೆ ಬೇಕಾಗಿತ್ತಪ್ಪ ಈ ಬದ್ಲಾವಣೆ ಅನ್ನಂಗಾಗಬಾರದಲ್ಲ. ಆ ಬಳ್ಳಾರಿಲಿ ರೆಡ್ಡಿಗಳ್ಯಲ್ಲ ಸೇರಿಕಂಡು ವಳ್ಳೆ ಮನುಸುನ್ನ ಸೋಲಿಸಿ ಒಂದೆಂಗ್ಸ ಗೆಲ್ಲಿಸಿಗಂಡವುರೆ. ಅದ ಬದ್ಲಾವಣೆ ಅನ್ನಕ್ಕಾದತೇ? ಅಂಗೆ ನೋಡಿದ್ರೆ ಬಿಜೆಪಿಯಿಂದ ಗೆದ್ದಿರೊ ಸುಮಾರು ಜನ ಲಡ್ಡಿಡದು ಕೂತವೆ."

"ಕಾಂಗ್ರೆಸ್ಸಿನಲ್ಲೂ ಅಂತವೆ ಅಲವೇನ್ಲ ಇದ್ದಿದ್ದೂ?"

"ನಿಜ, ಹಿಂದೆ ಶಿವಮೊಗ್ಗದಲ್ಲಬ್ಬ ಖಾದ್ರಿ ಅಂತ ನಿಂತಿದ್ದನಂತೆ. ಅವ್ರುನ್ಯಾರು, ಎಲ್ಲಿಂದ ಬಂದ, ಅಮ್ಯಾಲತ್ತ ಗೋದ ಅಂತ ಯಾರಿಗೂ ಗೊತ್ತಾಗಲಿಲ್ಲ, ಅವ್ರುನಾದ ಮ್ಯಾಲೆ ಚಂದ್ರಶೇಖರಪ್ಪ ಅಂತ ಗೆದ್ದು ಬತ್ತಿದ್ದ, ಅವ್ರುನ್ನೂ ಯಾರೂ ನೋಡಿರಲಿಲ್ಲ, ಅಲ್ಲಿಗಂಟ ಯಾಕೋದಿಯಪ್ಪ ನಮ್ಮ ಮಂಡೇವುದಲ್ಲೇ ಚಿಕ್ಕಲಿಂಗಯ್ಯ ಅಂತ ಗೆಲ್ತಿದ್ದ. ಅವ್ನನ್ನ ಸಾಯಗಂಟ ಯಾರೂ ನೋಡಕ್ಕಾಗಲೇಯಿಲ್ಲ. ಆದ್ರೆ ಕಾಲ ಬದ್ಲಾಗ್ಯದೆ. ಇವತ್ತು ಅಂಗೆ ಗೆಲ್ಲಕ್ಕಾಗದಿಲ್ಲ. ಎಂ.ಪಿ. ಯಲಕ್ಷನ್ನಿಗೂ ಖರ್ಚು ಮಾಡಬೇಕು."

"ಕನಿಷ್ಠ ನೂರು ಕೋಟಿ ಬಂಡವಾಳನಾರ ತರಬೇಕು ಕಣೊ ಉಗ್ರಿ" ಎಂದುಕೊಂಡ ವಾಟಿಸ್ಸೆ ಹಾಜರಾದ.

"ನೂರು ಕೋಟಿ ಎಡೂರಪ್ಪನ ಮಗನಿಗೆ ಮಾತ್ರ ಬೇಕು ಕಣೊ. ಉಳದೋರಿಗೆ ಅಷ್ಟು ಬೇಕಾಗಿಲ್ಲ" ಎಂದ ಉಗ್ರಿ.

"ಸುಳ್ಳು ಕಂಡ್ಯ, ಯಾವನಾರ ನೂರು ಕೋಟಿಯ ಯಲಕ್ಷನ್ನಿಗೆ ಸುರಿಯಕ್ಕೋದನೆ. ಮಾತಾಡಕ್ಕೂ ಒಂದಿದು ಬೇಕು" ಎಂದು ಕಾಳಮಾವ.

"ನಿನ್ನ ಮಾತು ನಿಜ ದ್ವಡಪ್ಪ, ನಿಜವಾಗ್ಲು ಎಡೂರಪ್ಪನ ಮಗ ಅಷ್ಟೊಂದು ದುಡ್ಡ ಖರ್ಚು ಮಾಡಲಿಲ್ಲವಂತೆ. ನಮ್ಮ ಬಂಗಾರಿ ಕಡಿಯೋರು ಹೇಳೊ ಪ್ರಕಾರ ಕೇವಲ ಯಪ್ಪತ್ತು ಕೋಟಿ ಖರ್ಚು ಮಾಡಿದರಂತೆ" ಎಂದ ವಾಟಿಸ್ಸೆ.

"ಅಂಗರೆ ಮುಂದಿನ ಸತಿ ಯಲಕ್ಷನ್ನಿಗೆ ಬಂದಾಗ ಅದಕಿಂತ್ಲೂ ಜಾಸ್ತಿನೇ ತರಬೇಕಪ್ಪ."

"ಎಸ್, ಡ್ಯಪನೆಟ್ಟ ತರಬೇಕು, ಇಲ್ಲ ಅಂದ್ರೆ ಕಷ್ಟ."

"ಹಿಂಗಾದ್ರೆ ಯಲಕ್ಷನ್ ಕತಿಯೇನೂ ಅಂತ?"

"ಏನುವಿಲ್ಲ ದ್ವಡಪ್ಪ, ಯಾರು ದುಡ್ಡು ತಗತ್ತರೊ ಅವ್ರುರು ಮಾತ್ರ ಓಟು ಮಾಡೋತರ ಆಯ್ತದೆ. ಆಗ ಓಟಿನ ಪರಸಂಟೇಜು ಮುವ್ವತ್ತಕೆ ಇಳಿಬವ್ರುದು."

"ಅಂಗಾದ್ರೆ ಕತಿಯೇನೊ?" ಎಂದ ಉಗ್ರಿ.

"ಕತಿಯೇನು, ಗೋವಿಂದ. ಈ ಯಲಕ್ಷನ್ನಲ್ಲೇ ಯಾರ್ಯಾರು ಓಟು ಮಾಡೊದಿಲ್ಲ, ಅಂಥೊರೆಸರು ಓಟರ್ ಲಿಸ್ಟಲ್ಲೇ ಇರಲಿಲ್ಲ, ಇನ್ನು ಕೆಲವು ಸಾಬರ ಕೇರಿಲಿ ಓಟು ಮಾಡೋ ಕಾರ್ಡನೆ ಕೊಂಡಕಂಡ್ರಿದಂತೆ. ಈ ತರ ಯಲಕ್ಷನ್ ಬರೋದೆ ಆದ್ರೆ ನಮಿಗೆ ಬೇಕಾದೋರು ಗೆಲ್ಲದಿಲ್ಲ, ಮಾರಿಕಳೊ ಜನಕೆ ಬೇಕಾದೋರು ಗೆಲ್ತರೆ. ಅಲ್ಲಿಗೆ ಡ್ಯಮಾಕ್ರಸಿ ಕ್ಲಲಾಪ್ಸಾಯ್ತದೆ ಕಣೊ ಉಗ್ರಿ."

"ಆಗ್ಲಿ ಬುಡು, ಯಲ್ಲಾರಿಗೂ ಆದುದ್ದು ನಮಿಗೂ ಆಯ್ತದೆ."

"ಇದೇನೊ, ಏಜಡ್ ಪರಸನ್ ತರ ಮಾತಾಡ್ತೀ. ಯಾವತ್ತು ಸ್ಪಿರಿಟ್ ಕಳಕೋಬಾರ್ದು ಕಣೊ" ಎಂದ ವಾಟಿಸ್ಸೆ.

"ನಿನಿಗೇನಪ್ಪ ಸ್ಪಿರಿಟ್ ಸಿಗತದೆ, ತಗತಿ, ನಮಿಗೇಳು."

"ನಮ್ಮನ್ನ ಚನ್ನಾಗಿ ನೋಡಿಕೊಳೊ ಸಾಕು. ಅಕ್ಕಾ ಜುಮ್ಮಕ್ಕ, ಯಾಕಕ್ಕ ಡಲ್ಲಾಗಿದ್ದಿ? ಅಂಬರೀಸ್‌ನೆ ಆರಾಮೊಗ್ಯವುನೆ, ನೀನ್ಯಾಕಕ್ಕ ಯೋಚನೆ ಮಾಡ್ತೀ? ಅವ್ರುನು ಜೂಜಾಡೋ ಮನ್ಸ, ಯಲಕ್ಷನ್ನ ಅಂಗೆ ತಗಂಡವುನೆ ಗೊತ್ತ? ನೀನು ಗೆಲುವಾಗಿರು."

"ಅಂತ ಮನುಸುನ್ನ ಸೋಲ್ಸಿದರಲ್ಲ, ಸರಿಯೇನ್ಲ?"

"ಸೋಲಿಸಿದೋರು ಕಾಂಗ್ರೆಸ್ಸಿನೋರು ಕಣಕ್ಕ. ಮಂಡೇವುದ ರಾಜ್ಯಪಾಲನ್ನ ತಿರಗ ಮಂತ್ರಿ ಮಾಡಬೇಕು ಅಂತ ಮದ್ದೂರ ಕಡೆ ಕಾಂಗ್ರೆಸ್ಸಿನೋರು ವಳಗಿಂದ್ವಳಗೆ ಕೈಕೊಟ್ರು. ಯಾವತ್ತು ಯಸ್ಸೆಂ ಕಿಸ್ನ ಮಂತ್ರಿಯಾದ್ನೊ ಅವತ್ತೇ ಇದು ಸಾಬೀತಾಯ್ತು ನೋಡು."

"ಅಂಗರೆ ಯಸ್ಸೆಂ ಕಿಸ್ನನ ಕಡಿಯೋರು ಸೋಲಿಸಿದರೇನ್ಲ?"


"ಅಂಗಂತ ಕೇಳ್ತಿಯಲ್ಲಕ್ಕ ನೀನು? ಅಂಬುರೀಸ ಆಗ್ಲೆ ಮಂತ್ರಿಯಾಗಿದ್ದೋನು. ತಿರಗ ನನ್ನ ಮಂತ್ರಿ ಮಾಡಿ ಅಂತ ದುಂಬಾಲು ಬಿದ್ರೆ ಗತಿಯೇನು ಅಂತ ಇದೇ ಮಾಜಿ ರಾಜ್ಯಪಾಲ ಶಿವರಾಮನ್ನ ಬಿಜೆಪಿಗೆ ಕಳಿಸಿ, ಕಾಂಗ್ರೆಸ್ಸಿನೋರು ಕೈ ಕೊಡಂಗೆ ಮಾಡಿ, ಒಂಟಿ ಸಲಗನ್ನ ಕೆಡಗಿಬುಟ್ರು ಕಣಕ್ಕ."

"ಅಂಬುರೀಸ ಲೋಕಸಭೆವಳಿಕೆ ಹೋಗದಿಲ್ಲ ಅಂತ ದೂರಿದ್ರು. ಈಗ ಚಲುವ ಹೋದ್ರೆ ಅವ್ರುನಿಗೇನು ಗೊತ್ತಾದತಪ್ಪ? ನ್ಯಟ್ಟಗೆ ಇಂಗ್ಲೀಸು ಬರದಿಲ್ಲ, ಹಿಂದಿನೂ ಬರದಿಲ್ಲ" ಎಂದ ಉಗ್ರಿ.

"ಹಿಂದಿ ಕಲಿತಯಿದ್ದನಂತೆ ಕಣೊ ಉಗ್ರಿ. ಹಿಂದಿ ಮೇಷ್ಟ್ರು ಮನಿಗೆ ಬಂದು ಪಾಠ ಮಾಡ್ತನಂತೆ. ಆಗ್ಲೆ ಚಲುವ ಯಾರಾರ ಮನಿಗೋದ್ರೆ 'ಸಾರ್, ತುಮ್ಹಾರ ನಾಮ್ ಕ್ಯಾ ಹೈ? ತುಮ್ಹಾರ ಗಾಂವ್ ಕಿದರ್ ಹೈ? ಮೇರಾ ದೇಶ್ ಭಾರತ್' ಅಂತ ಕಲಿತಕುಂತಿದ್ದನಂತೆ" ಎಂದ ವಾಟಿಸ್ಸೆ."

"ನಿಜವೇನ್ಲ?" ಎಂದಳು ಜುಮ್ಮಿ.

"ನಿಜವ್ರೊ, ಸುಳ್ಳೊ ನೀನಂತೂ ನಗಾಡಿದಲ್ಲ ಬುಡ್ಡ!" ■



ನಾ ಕಂಡ ಮನುಷ್ಯ

ಚೆಗೆವೆರಾ ಕುರಿತು ಯೋಚಿಸುತ್ತಿದ್ದಂತೆ ಆತನಂತಹ ವ್ಯಕ್ತಿಯೇ ಆಗಿದ್ದ ನಮ್ಮ ಡಾ. ಲೋಹಿಯಾ ಕುರಿತು ಓದಿದ್ದೆಲ್ಲ ನೆನಪಾಗುತ್ತಿದೆ. ಅಧಿಕಾರಕ್ಕಾಗಿ ಹಿಂಸೆಯ ಮಾರ್ಗವನ್ನು ಬಿಟ್ಟರೆ ಲೋಹಿಯಾ ಅನೇಕ ರೀತಿಯಲ್ಲಿ ಗೆವೆರಾ ತರಹವೇ ಇದ್ದರು.

ಈತ ಹುಟ್ಟು ಕನಸುಗಾರ, ಆದರೆ ಈತನ ಕನಸುಗಳೆಲ್ಲ ಈತ ಕಂಡುಕೊಂಡ ವಾಸ್ತವದಿಂದ ಹೊಮ್ಮುತ್ತಿದ್ದವು. ಈತ ಅತ್ಯಂತ ನೋವಿನ ಗಳಿಗೆಯಲ್ಲೂ ಮುಗುಳ್ನಗುತ್ತಿದ್ದರು. ಎಲ್ಲರೂ ಯಮಗಾಂಭೀರ್ಯದಿಂದ ಆವೇಶ, ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಗಲೇ ರಾಮಮನೋಹರ ಲೋಹಿಯಾ ನಗುತ್ತಿದ್ದರು.



ಡಾ. ಲೋಹಿಯಾರೊಂದಿಗೆ ಗೌಡರು ಮತ್ತು ಜೆ.ಹೆಚ್. ಪಟೇಲ್

ಯಮಗಾಂಭೀರ್ಯದ ಜೀವವಿರೋಧಿ ಗುಣ, ಐತಿಹಾಸಿಕ ಚಳವಳಿಯ ಹಾಸ್ಯಾಸ್ಪದ ಮುಖ ಅವರಿಗೆ ಕಾಣುತ್ತಿತ್ತು. ನೆಹರೂ ಗಾಂಧೀಜಿಯನ್ನು ತಮ್ಮ ರಾಜಕೀಯದ ಮೂಲಕ ಹಂತಹಂತವಾಗಿ ಮುಗಿಸುತ್ತಿದ್ದಾಗ, ಇಡೀ ಭಾರತ ಗಾಂಧೀಜಿಯನ್ನು ಅರುಳುಮರುಳು ಮುದುಕನೆಂಬಂತೆ ಕಾಣಲು ಆರಂಭಿಸಿದ್ದಾಗ ಲೋಹಿಯಾ ಗಾಂಧೀಜಿಯ ಅರ್ಥಪೂರ್ಣತೆಯನ್ನು ಧ್ಯಾನಿಸುತ್ತಾ, ಬದುಕುತ್ತಾ ಹೋದರು. ಲೋಹಿಯಾರನ್ನು ಗಾಂಧಿ "ನಾನು ಬಲ್ಲ ಅತ್ಯಂತ ಧೈರ್ಯವಂತನಾದ ನೇರ ನೀತಿಯ ಮನುಷ್ಯ" ಎಂದು ಕರೆದರು. ಮುತ್ಸದ್ದಿತನ ಕಂಡರೆ ಲೋಹಿಯಾ ಅವರಿಗೆ ಆಗುತ್ತಿರಲಿಲ್ಲ. ಒಮ್ಮೆ ಪ್ರಶ್ನಿಸಿದರು "ಯಾಕೆ ಈ ಕಮ್ಯುನಿಸ್ಟರು ಲೆನಿನ್ ಬಗ್ಗೆ ಮೂಢನಿಷ್ಠೆಯಿಂದ ವರ್ತಿಸುತ್ತಾರೆ?"

ಅವರೇ ಉತ್ತರಿಸಿದರು, "ನನಗೆ ಬಾಪು ಬಗ್ಗೆ ಇರುವ ವಿಶ್ವಾಸ ನೋಡಿಕೊಂಡರೆ ಇದೇನೂ ಆಶ್ಚರ್ಯಕರವಲ್ಲ."

ಒಮ್ಮೆ ಹ್ಯಾರಿಸ್ ಊಫೋರ್ಡ್ ಎಂಬ ವ್ಯಕ್ತಿ ಲೋಹಿಯಾ ಬಗ್ಗೆ ಬರೆಯುತ್ತಾ ನೆನೆದರು: "ಲೋಹಿಯಾ ಒಮ್ಮೆ ಹೀಗೆ ಬರೆದರು: ಜೀವನದ ಉದ್ದೇಶ ದೇವರು ಮತ್ತು ಹೆಣ್ಣನ್ನು ಪಡೆಯುವುದು. ನಾನು ದೇವರನ್ನು ಸಾಧಿಸಲಾಗಲಿಲ್ಲ, ಹೆಣ್ಣು ನನಗೆ ದಕ್ಕಲೇ ಇಲ್ಲ, ಆದರೆ ನಾನು ಕಂಡ ಒಬ್ಬನೇ ಒಬ್ಬ ಮನುಷ್ಯನ ನೆನಪು ಮಾತ್ರ ದಾರಿಯನ್ನು ಬೆಳಗುತ್ತಿದೆ...

"ಲೋಹಿಯಾ ಮನಸ್ಸಿನಲ್ಲಿದ್ದುದು ಗಾಂಧಿ. ನನ್ನ ಮನಸ್ಸಿನಲ್ಲಿರುವುದು ಲೋಹಿಯಾ."


-ಫೆಬ್ರವರಿ 7, 1988

ವೃದ್ಧ ಪತಿವ್ರತೆಯ ಸೋಗಿನ ಅಡ್ವಾಣಿಯನ್ನು ತಿಪ್ಪೆಗೆಸೆದ ಜನತೆ

ಒಂದು ಪತ್ರ

ಮೇ 13, 2009ರ ಸಂಚಿಕೆಯಲ್ಲಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಅಡ್ವಾಣಿ ಅದೆಷ್ಟು 'ಸಮರ್ಥ' ನಾಯಕ ಎಂಬುದನ್ನು ಗೌರಿಯವರು ಉದಾಹರಣೆಗಳ ಸಮೇತ ವಿವರಿಸಿದ್ದಾರೆ. ಇಂತಹ 'ಸಮರ್ಥ'ನನ್ನ ದೇಶದ ಪ್ರಜ್ಞಾವಂತ ಮತದಾರರು ಸಮರ್ಥಿಸಲು ಹೋಗದೇ ಆತನನ್ನು ಮನೆಗಟ್ಟಿದ್ದನ್ನು ನೋಡಿ ಸಹೃದಯರೆಲ್ಲ ದೇಶವನ್ನು ಈ ಅಭಿನವ ಹಿಟ್ಲರ್‌ನ ಕೈಗಳಿಂದ ತಪ್ಪಿಸಿದ್ದಕ್ಕಾಗಿ ನಿಟ್ಟುಸಿರು ಬಿಡುತ್ತಿದ್ದಾರೆ.

ಮೇಲ್ನೋಟಕ್ಕೆ ಪುಕ್ಕಲರ ಸಿದ್ಧಾಂತವೆಂದೇ ತೋರುವ ಸಹನೆ-ಸಂಯಮಗಳಿಗೆ ಅಪಾರವಾದ ಶಕ್ತಿ ಇದೆ ಎಂಬುದನ್ನು ಜಗತ್ತಿಗೆ ಸಾರಿದ ಬುದ್ಧ-ಗಾಂಧಿಯವರ ನಾಡಿದು. ಆದರೆ ಅಡ್ವಾಣಿ, ಅವರ ಪಟಾಲಂ ಹಾಗೂ ಬಿಜೆಪಿ ಪರ ಮಾಧ್ಯಮಗಳು ಸಜ್ಜನ ಪ್ರಧಾನಿ ಮನಮೋಹನ ಸಿಂಗರನ್ನು ದುರ್ಬಲ, ಅಪ್ರಯೋಜಕ, ಚರ್ಚೆಗೆ ಹೆದರುವ ಮನುಷ್ಯ ಎಂದೆಲ್ಲ ಕಾಲು ಕೆರೆದು ಜಗಳ ಕಾಯಲು ನೋಡಿದ್ದರು. ಆದರೆ ಸಿಂಗ್ ಅವರು ಅಡ್ವಾಣಿಯವರ ಮಟ್ಟಕ್ಕಿಳಿಯದೆ ಬಹುತೇಕ (ಒಂದೆರಡು ಬಾರಿ ಛಾಟಿಯೇಟಿನ ಪ್ರತ್ಯುತ್ತರ ನೀಡಿದ್ದನ್ನು ಬಿಟ್ಟರೆ) ಸಂಯಮದಿಂದಲೇ ವರ್ತಿಸಿದ್ದರು. ಈಗ ದೇಶದ ಜನತೆಯೇ ಅಡ್ವಾಣಿ ಗ್ಯಾಂಗ್‌ನ ಪ್ರಶ್ನೆಗಳಿಗೆಲ್ಲ ತಕ್ಕ ಉತ್ತರವನ್ನು ನೀಡಿ ಯಾರು ದುರ್ಬಲ, ಯಾರು ಅಪ್ರಯೋಜಕವೆಂದು ತೀರ್ಮಾನಿಸಿದ್ದಾರೆ. ಇದನ್ನು ಅಡ್ವಾಣಿ ಗ್ಯಾಂಗ್‌ಗೆ ಅರಗಿಸಿಕೊಳ್ಳಲಾಗುತ್ತಿಲ್ಲ. ಹೀಗಾಗಿ ಫಲಿತಾಂಶ ಪ್ರಕಟಗೊಂಡ ದಿನದಿಂದ 'ದುರ್ಬಲ' ಪ್ರಧಾನಿಗೆ ಮುಖ ತೋರಿಸಲೂ ಹೆದರಿ ರಾಜಕೀಯ ಸನ್ಯಾಸತ್ವದ ಬಗ್ಗೆ ಮಾತನ್ನಾಡುತ್ತಿದ್ದಾರೆ ಸ್ವಯಂ ಘೋಷಿತ ಲೋಕ (ತಗಡು) ಪುರುಷ ಅಡ್ವಾಣಿ.



ಚುನಾವಣೆಗೆ ಮುನ್ನ ಗಂಧದೊಡನೆ ಗುದ್ದಾಡಿ ಗಂಧದ ಪರಿಮಳದ ಲಾಭವಾದರೂ ಸಿಗಲಿ ಎಂದು ಪ್ರಧಾನಿ ಸಿಂಗರನ್ನು ಟೀಕಿಸುತ್ತಿದ್ದ ಅಡ್ವಾಣಿಗೆ ಈಗ ಸದನದಲ್ಲಿ ಸರ್ಕಾರವನ್ನು ಟೀಕಿಸುವ ಅವಕಾಶ ಇರುವ ವಿರೋಧ ಪಕ್ಷದ ನಾಯಕನ ಸ್ಥಾನವೂ ಅಪಥ್ಯವಾಗಿ ಕಾಣಿಸುತ್ತಿರುವಂತಿದೆ. ಅಧಿಕಾರ ಸಿಗದೇ ವೈರಾಗ್ಯವನ್ನು ಅನುಭವಿಸುತ್ತಿದ್ದಾರೆ ಅಡ್ವಾಣಿ.

ಬಿಜೆಪಿಯ ದೃಷ್ಟಿಯಲ್ಲಿ ಅಡ್ವಾಣಿ ಪ್ರಧಾನಿಯಾಗುವುದರಲ್ಲಿ ತಪ್ಪೇನಿಲ್ಲ. ಯಾಕೆಂದರೆ ತನ್ನ ಕುಖ್ಯಾತ ರಥಯಾತ್ರೆ ಮತ್ತು ಕೋಮು ಪ್ರಚೋದಕ ಉಗ್ರ ಭಾಷಣಗಳ ಮೂಲಕ ನೆಲೆಯೇ ಇಲ್ಲದ ಬಿಜೆಪಿ ದೇಶದ ಆಡಳಿತದ ಚುಕ್ಕಾಣಿ ಹಿಡಿಯುವಂತೆ ಮಾಡಿದ್ದು ಇದ್ದೇ ಅಡ್ವಾಣಿ. ಆದರೆ ಅಂದು ಅಡ್ವಾಣಿ ಶ್ರಮ ಪಟ್ಟಿದ್ದರೂ ಅಧಿಕಾರ ಉಂಡಿದ್ದು ಮಾತ್ರ ವಾಜಪೇಯಿ. ತನ್ನ 82ರ ಪ್ರಾಯದಲ್ಲಾದರೂ ಪ್ರಧಾನಿಯಾಗೋಣವೆಂದು ಕನಸು ಕಂಡರೆ ಜನತೆಯೇ ಅದಕ್ಕೆ ಅಡ್ಡಗಾಲು ಹಾಕಬೇಕೆ? ಅವತ್ತು ಹಿಟ್ಲರ್‌ನ ಖಾಸಾ ಸೋದರನಂತೆ ಅಯೋಧ್ಯೆಯ ಹೆಸರಲ್ಲಿ ಜನಾಂಗ ದ್ವೇಷ ಬಿತ್ತಿ ತನ್ನ ಬೇಳೆ ಬೇಯಿಸಿಕೊಂಡಿದ್ದ ಅಡ್ವಾಣಿ ಈಗ "ವೃದ್ಧನಾರೀ ಪತಿವ್ರತ" ತರಹ ಸಜ್ಜನಿಕೆಯ ಪೋಸು ಕೊಡುತ್ತಿದ್ದಾರೆ.

ಪ್ರಧಾನಿ ಅಭ್ಯರ್ಥಿಯೆಂದು ಬಿಂಬಿತವಾದ ಅಡ್ವಾಣಿ ದೇಶಕ್ಕೆ ಕೊಟ್ಟ ಕೊಡುಗೆಯೇನಾದರೂ ಏನು ಎಂದು ಹುಡುಕಹೊರಟರೆ ಬರೀ ಮನೆಹಾಳ ಕಾರ್ಯಗಳೇ ಕಾಣಿಸುತ್ತವೆಯೇ ವಿನಃ ನೆಟ್ಟಗಿನ ಒಂದು ಕೆಲಸವೂ ಕಾಣಸಿಗದು. ಇಂತಹ ವ್ಯಕ್ತಿ ಪ್ರಧಾನಿ ಆಗುತ್ತಾರೆಂದರೆ ಯಾರು ತಾನೇ ಆ ಪಕ್ಷವನ್ನು ಬೆಂಬಲಿಸಿಯಾರು? 'ಮೈ ಲೈಫ್, ಮೈ ಕಂಟ್ರಿ' ಎಂಬ ಬೊಗಳೆ ಪುಸ್ತಕ ಬರೆದು ಅಂದರಿಕಿ ಮಂಚಿವಾಡು ಆಗಲು ಹೊರಟ ಅಡ್ವಾಣಿಯನ್ನು ಜನರೇ ಒದ್ದೋಡಿಸಿದ್ದಾರೆ.

ಈತನ ಕುಖ್ಯಾತ ರಥಯಾತ್ರೆ-ಬಾಬ್ರಿ ಮಸೀದಿಯ ಧ್ವಂಸದಂತಹ ಪ್ರಕ್ರಿಯೆಗಳಿಂದಲೇ ಹಿಂದೂ-ಮುಸ್ಲಿಮರ ನಡುವೆ ಬಹುದೊಡ್ಡ ಕಂದರ ಸೃಷ್ಟಿಯಾಗಿ ಕೆಲವರು ಅಭದ್ರತೆಯಲ್ಲಿ ಬದುಕಬೇಕಾಗಿದೆ. ಆದರೂ ಈತ ಭಯೋತ್ಪಾದನೆಯನ್ನು ತಡೆಯುವ ಬಗ್ಗೆ ಮಾತಾಡುತ್ತಾನೆ. ಯಡಿಯೂರಪ್ಪನ ಸರ್ಕಾರ ವಿದ್ಯಾರ್ಥಿಗಳ ನಡುವೆಯೂ ಭಯೋತ್ಪಾದನಾ ಭಾವನೆ ಹೆಚ್ಚಿಸುವಂತಹ ಸಮಾವೇಶವನ್ನು ಆಯೋಜಿಸಿದಾಗ ಅದನ್ನು ಉದ್ಘಾಟಿಸಲು ಈತ ಬೆಂಗಳೂರಿಗೆ ಬರುತ್ತಾನೆ. ಹಾವು ಕಪ್ಪೆಯನ್ನು ಮುದ್ದಿಸಿದಂತೆ ತನ್ನ ಆತ್ಮಕತೆಯಲ್ಲಿ ಬಾಬ್ರಿ ಮಸೀದಿ ಧ್ವಂಸಗೊಂಡಾಗ ಬಿಕ್ಕಿಬಿಕ್ಕಿ ಅತ್ತನೆಂದು ಹೇಳಿಕೊಳ್ಳುತ್ತಾನೆ; ಯಾರೂ ಅಪೇಕ್ಷಿಸದಿದ್ದರೂ ಜಿನ್ನಾರನ್ನ ವಾಚಾಮಗೋಚರವಾಗಿ ಹೊಗಳಿ ಬರುತ್ತಾನೆ; ಇಂತಹ ಗೋಸುಂಬೆಯನ್ನು ಜನ ತಿರಸ್ಕರಿಸದೇ ಇನ್ನೇನು ಮಾಡುತ್ತಾರೆ?

ಕಳೆದ ಬಾರಿ ಸೋನಿಯಾ ಗಾಂಧಿಯವರ ವಿದೇಶಿ ಮೂಲವನ್ನು ಹಿಡಿದು ಬಿಜೆಪಿಗಳು ರಂಪಾಟ ಮಾಡಿದ್ದರಿಂದಲೇ ಇಂದು ಸೋನಿಯಾರ ಚರಿಷ್ಮಾ ಹೆಚ್ಚಾಗಿದೆ. ಇದು ತಮ್ಮಿಂದಲೇ ಆಗಿದ್ದರಿಂದ ಇಂದು ಬಿಜೆಪಿಗಳ ಮಟ್ಟಿಗೆ ಸೋನಿಯಾ ಭಾರತೀಯರೇ ಆಗಿರುವುದು ಸೋಜಿಗವಾಗಿದೆ.


-ರವಿ ಪುತ್ತೂರ, ದಕ್ಷಿಣ ಕನ್ನಡ

'ಸರ್ವಾಧಿಕಾರಿ'ಯ ಆತ್ಮಾವಲೋಕನ



ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ 'ಕಾಡ ತೊರೆಯ ಜಾಡು' ಎಂಬ ಆತ್ಮಕಥನದಲ್ಲಿ ಕಡಿದಾಳು ಶಾಮಣ್ಣನವರ ಮನದಾಳದ ಮಾತುಗಳನ್ನು ಅಕ್ಷರರೂಪಕ್ಕೆ ಇಳಿಸುತ್ತಿರುವ ಅಕ್ಷತಾ ಕೆ.ರವರ 'ರೈತ ಸಂಘ ರಾಜ್ಯ ಸಮಿತಿಯಿಂದ ಉಚ್ಚಾಟನೆ' ಅಂಕಣಕ್ಕೆ ನನ್ನ ಪ್ರತಿಕ್ರಿಯೆ.

ಸದರಿ ಅಂಕಣದಲ್ಲಿ ಶಾಮಣ್ಣನವರು ಅಂದುಕೊಂಡಂತೆ, ಸೂಚಿಸಿರುವಂತೆ ರೈತ ಸಂಘ ಚುನಾವಣೆಗೆ ನುಗ್ಗುವುದರ ಕುರಿತು ಪ್ರಸ್ತಾವನೆ ಬರುತ್ತದೆ. ಅದರಲ್ಲಿ ಚುನಾವಣೆಯಿಂದ ದೂರವಿರುವುದು ಬೇಡವೆಂದು ಎಲ್ಲೂ ಶಾಮಣ್ಣ ಹೇಳುವುದಿಲ್ಲ, ಬದಲಾಗಿ ನೇರವಾಗಿ ಲೋಕಸಭಾ ಚುನಾವಣೆ ಬೇಡಾ ಎಂಬ ಸೂಕ್ತ ಸಲಹೆ ಅವರದು. ನಂತರ ತಮ್ಮ 'ಉಚ್ಚಾಟನೆ' ಸಂದರ್ಭದಲ್ಲಾದ ಚಕಮಕಿಯನ್ನು ಅವರು ವಿವರಿಸಿದ್ದಾರೆ. ಆದರೆ ಅದನ್ನು ಓದಿದಾಗ ರೈತ ಸಂಘದ ನಾಯಕ ದಿ. ಪ್ರೊ. ನಂಜುಂಡಸ್ವಾಮಿಯವರು 'ಸರ್ವಾಧಿಕಾರಿ'ಯಂತೆ ಭಾಸವಾದರು.




ಆದ್ದರಿಂದ ನಾನು ಕಂಡ ಒಂದು ಘಟನೆಯನ್ನು ಇಲ್ಲಿ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಹಿಂದೊಮ್ಮೆ ರಾಜ್ಯ ಬಂಡಾಯ ಸಂಘಟನೆಯ ಕಾರ್ಯಕ್ರಮವೊಂದು ಗದಗ ಜಿಲ್ಲೆ ಮುಂಡರಗಿಯಲ್ಲಿ ಜರುಗಿತು. ಅಂದು ವೇದಿಕೆ ಮೇಲಿದ್ದ ಪ್ರೊ.ನಂಜುಂಡಸ್ವಾಮಿ ಮಾತಾಡುತ್ತಾ "ಆತ್ಮಾವಲೋಕನ"ವೆಂಬ ಶಬ್ದ ಪ್ರಯೋಗಿಸಿ ರೈತಸಂಘ ನಡೆದು ಬಂದ ದಾರಿ, ಎಡವಿದ್ದು ಎಲ್ಲಿ ಎಂದೆಲ್ಲ ಮಾತನಾಡಿದ್ದರು. ಅವರು ಪ್ರೊಫೆಸರ್ ಅವರು "ರೈತಸಂಘ ರಾಜಕೀಯಕ್ಕೆ ಇಳಿಯಬಾರದಿತ್ತು" ಎಂದು ಸ್ಪಷ್ಟವಾಗಿ ಹೇಳುವ ಮೂಲಕ ತಮ್ಮ ಮಾತನ್ನು ಆರಂಭಿಸಿ, ಅದರಿಂದ ರೈತ ಸಂಘಕ್ಕೆ ಆದ ಹಿನ್ನಡೆ ಕುರಿತು ವಿಷಾದದ ಮಾತುಗಳನ್ನಾಡಿದ್ದರು. ಮಾತ್ರವಲ್ಲ, "ಚುನಾವಣೆಯಿಂದ ದೂರವಿದ್ದರೇ ರೈತ ಸಂಘ ಗಟ್ಟಿಗೊಳ್ಳುತ್ತಿತ್ತು" ಎಂದೂ ತಮ್ಮ ಮನದಾಳ ಮಾತುಗಳನ್ನು ಆಡಿದ್ದರು. ಆದರೆ ಮಾಧ್ಯಮಗಳು ಎಲ್ಲೂ ಇದನ್ನು ದಾಖಲಿಸಲಿಲ್ಲ!

ಪ್ರೊಫೆಸರ್ ಅವರ ಈ ಆತ್ಮಾವಲೋಕನದ ಮಾತಿಗೆ ಶಾಮಣ್ಣನವರು ಅಂದು ಆಡಿದ ಮಾತು ಪ್ರೇರಣ ಪಥವಾಗಿರಬೇಕಲ್ಲವೇ? ಒಬ್ಬ ಸರ್ವಾಧಿಕಾರಿಯಿಂದ ಈ ತರಹದ ಆತ್ಮಾವಲೋಕನ ಸಾಧ್ಯವೇ?

ಸದರಿ ಅಂಕಣ ಚನ್ನಾಗಿ ಮೂಡಿಬರುತ್ತಿದೆ.


-ವಿಜಯಾ ಅಮೃತರಾಜ್, ವಕೀಲರು, ಕೊಪ್ಪಳ

ಸೈಲೆಂಟ್ ಬರ್ತ್‌ಡೇ




ಮುಂದಿನ ವಾರ ಕನ್ನಡ ಚಿತ್ರರಂಗದ ಇಬ್ಬರು ಮಹಾನ್ ನಟರುಗಳ ಬರ್ತ್‌ಡೇ ಸಮಾರಂಭವಿದೆ. ಕ್ರೇಜಿಸ್ಟಾರ್ ರವಿಚಂದ್ರನ್ ಮತ್ತು ರೆಬೆಲ್ ಸ್ಟಾರ್ ಅಂಬರೀಷ್ ಅನಾದಿಕಾಲದಿಂದಲೂ ವಿಜೃಂಭಣೆಯಿಂದ ತಮ್ಮ ಬರ್ತ್‌ಡೇ ಆಚರಿಸಿಕೊಂಡು ಬಂದಿದ್ದಾರೆ. ಆದರೆ ಈ ಬಾರಿ ಈ ಸಂಪ್ರದಾಯ ಮುರಿಯುವ ಸಾಧ್ಯತೆ ಇದೆ. ಕಾರಣವಿಷ್ಟೇ: ಸಿನಿಮಾ ಜನ ಗೆದ್ದಾಗ, ಚಿತ್ರ ಹಿಟ್ ಆದಾಗ ಬರ್ತ್‌ಡೇಯನ್ನೂ ಜಾತ್ರೆ ತರಹ ಆಚರಿಸುತ್ತಾರೆ. ಇಲ್ಲದಿದ್ದರೆ ಅಭಿಮಾನಿಗಳನ್ನು ಎದುರಿಸಲಾಗದೆ ಅವರು ಗುಟ್ಟಾಗಿ ದೇವಸ್ಥಾನಗಳಲ್ಲಿ ಸಿಂಪಲ್ ಆಗಿ ತಮ್ಮ ಹುಟ್ಟುಹಬ್ಬ ಆಚರಿಸುತ್ತಾರೆ.

ಈ ವರ್ಷ ಕದ್ದುಮುಚ್ಚಿ ಬರ್ತ್‌ಡೇ ಆಚರಿಸುವಂತಹ ಪರಿಸ್ಥಿತಿ ಕ್ರೇಜಿಸ್ಟಾರ್‌ಗೂ, ರೆಬೆಲ್‌ಸ್ಟಾರ್‌ಗೂ ಬಂದಿದೆ. ಯಾಕೆಂದರೆ ಇನ್ನೊಂದೆಡೆ ಈ ವರ್ಷ ರವಿಚಂದ್ರನ್ ಚಿತ್ರಗಳೇ ಬಿಡುಗಡೆಯಾಗಿಲ್ಲ, ಮತ್ತೊಂದೆಡೆ ಅಂಬಿ ಮೊನ್ನೆ ಮೊನ್ನೆ ಮಂಡ್ಯದಲ್ಲಿ ಸೋಲು ಕಂಡಿದ್ದಾರೆ. ಹೀಗಾಗಿ ಇಬ್ಬರ ಮೂಡ್ ಅಷ್ಟೇನೂ ಚೇತೋಹಾರಿಯಾಗಿಲ್ಲ, ಅದೇನೇ ಇರಲಿ, ಕನ್ನಡ ಚಿತ್ರರಂಗ ಕಂಡ ಸ್ನೇಹಜೀವಿಗಳಾದ ರವಿ ಮತ್ತು ಅಂಬಿಗೆ ನಮ್ಮ ಅಡ್ವಾನ್ಸ್ ಬರ್ತ್‌ಡೇ ಶುಭಾಶಯಗಳು.



ಬೆಟ್ಟ ಕಡಿದ ಕೂಡ್ಲುಗೆ ದಕ್ಕಿದ್ದೇನು?


ಸದಾ ಎನ್ನಾರೈಗಳನ್ನು ಹಿಡಿದು ಅವರಿಂದ ಚಿತ್ರ ನಿರ್ಮಿಸುವ ಕೂಡ್ಲು ರಾಮಕೃಷ್ಣ ಈ ಬಾರಿ ಕಾಸು ಮಾಡಲು ಆಯ್ದುಕೊಂಡಿದ್ದು ಮಕ್ಕಳ ಚಿತ್ರವನ್ನು. ನಾ.ಡಿಸೋಜರ 'ಬೆಟ್ಟದ ಪುರದ ದಿಟ್ಟ ಮಕ್ಕಳು' ಕಾದಂಬರಿಯನ್ನೇ ಚಿತ್ರವಾಗಿಸಿರುವ ಕೂಡ್ಲು ಹೆಚ್ಚು ಖರ್ಚು ಮಾಡದೆ ಕೇವಲ ಹತ್ತನ್ನೆರಡು ಲಕ್ಷಗಳಲ್ಲೇ ಸಿನಿಮಾ ಮುಗಿಸಿದ್ದಾರೆ. ಆದರೆ ಮಕ್ಕಳ ಚಿತ್ರಕ್ಕೆ ಸಿಗುವ 25 ಲಕ್ಷಗಳ ಸಬ್ಸಿಡಿಯ ಲೆಕ್ಕಾಚಾರದಲ್ಲಿದ್ದ ಕೂಡ್ಲುಗೆ ಸೆನ್ಸಾರ್ ಮಂಡಳಿ ಬರೆಯನ್ನು ಹಾಕಿದೆ.



ಇದು ಮಕ್ಕಳ ಚಿತ್ರವೇ ಅಲ್ಲ ಎಂದು ಹೇಳಿ ಸೆನ್ಸಾರ್‌ನವರು 'ಯು' ಸರ್ಟಿಫಿಕೇಟ್ ನೀಡಿರುವುದರಿಂದ ಕೂಡ್ಲು 'ಬೆಟ್ಟ ಕಡಿದರೂ' ಏನೂ ದಕ್ಕದಂತಾಗಿದೆ.

ವಾಣಿಜ್ಯಮಂಡಳಿಯ 'ಸಮಯ'ದ ಅವಾಂತರ

ಏನು ಆಗಬಾರದಿತ್ತೋ ಅದೇ ಆಗಿಹೋಗಿದೆ. ಚಲನಚಿತ್ರ ವಾಣಿಜ್ಯ ಮಂಡಳಿ ಮತ್ತು ನಿರ್ಮಾಪಕರ ಸಂಘದ ಕಾರ್ಯವೈಖರಿ ಮಹಮ್ಮದ್ ಬಿನ್ ತೊಘಲಕ್‌ನ ದರ್ಬಾರ್ ನೆನಪಿಸುತ್ತಿದೆ.




ಕಳೆದ ವಾರವಷ್ಟೇ ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನದ ಸಮಯ ಬದಲಾವಣೆ ಮಾಡಿದ ಚೇಂಬರ್ ಕ್ರಮದ ಬಗ್ಗೆ ಒಂದು ಪುಟ್ಟ ಟಿಪ್ಪಣಿ ಬರೆದಿದ್ದೆವು. ರಾತ್ರಿ 9 ಗಂಟೆಗೆ ಕೊನೆಯ ಪ್ರದರ್ಶನ ಇದ್ದಲ್ಲಿ ಜನ ಮುಗಿಬಿದ್ದು ಕನ್ನಡ ಚಿತ್ರ ನೋಡಲು ಬರುತ್ತಾರೆ ಎಂಬುದು ಜಯಮಾಲಾ, ಕೆ.ಸಿ.ಎನ್.ಚಂದ್ರು ಅವರಿಂದಿಡಿದು ಬಹುತೇಕ ಎಲ್ಲಾ ನಿರ್ಮಾಪಕರು ಭಾವಿಸಿದ್ದರು. ಅವರ ಈ ನಿಲುವನ್ನು ರಾಜೇಂದ್ರ ಸಿಂಗ್ ಬಾಬು, ಕೊಬ್ಬರಿ ಮಂಜು, ರಾಕ್‌ಲೈನ್ ವೆಂಕಟೇಶ್ ಮೊದಲಾದ ನಿರ್ಮಾಪಕರು ಅನುಮೋದಿಸಿದ್ದರು.


ಆದರೆ ಈ ಹೊಸ ವೇಳಾಪಟ್ಟಿಗೆ ಬೆಂಗಳೂರು ಸಿಟಿ ಪೊಲೀಸ್ ಕಮೀಷನರ್ ಶಂಕರ್ ಬಿದರಿ ವಿರೋಧ ವ್ಯಕ್ತಪಡಿಸಿದ್ದರು. "ಇದರಿಂದಾಗಿ ರಾತ್ರಿ 2 ಗಂಟೆ ತನಕ ಪೊಲೀಸ್ 'ನಾಖಾ ಬಂಧಿ'ಯನ್ನು ಮಾಡಬೇಕಾಗುತ್ತದೆ. ಇನ್ನೂ ಹಲವಾರು ತೊಂದರೆಗಳಾಗುತ್ತವೆ" ಎಂದು ಬಿದರಿ ಹೇಳಿದ್ದರು. ಆದರೆ ಅದನ್ನು ಕೇಳದ ಜಯಮಾಲಾ ಮತ್ತವರ ತಂಡ ನೇರವಾಗಿ ಗೃಹಮಂತ್ರಿ ವಿ.ಎಸ್.ಆಚಾರ್ಯರವರನ್ನು ಭೇಟಿಯಾಗಿ ರಾಜಕೀಯ ಒತ್ತಡ ತಂದು ತಮ್ಮ ಹೊಸ ವೇಳಾಪಟ್ಟಿಗೆ ಅನುಮತಿ ಪಡೆದಿದ್ದರು. ಅಷ್ಟೇ ಅಲ್ಲ, ಇದರಿಂದಾಗಿ ಹೊಟೇಲ್‌ಗಳು ಕೂಡಾ 12 ಗಂಟೆಯವರೆಗೆ ವ್ಯಾಪಾರ ಮಾಡಬಹುದು ಎಂದು ಸರ್ಕಾರ ಹೊಸ ಆದೇಶ ಹೊರಡಿಸಿತ್ತು.



ಈ ಆದೇಶ ಹೊರಬಿದ್ದ ನಂತರ ಎರಡು ಚಿತ್ರಗಳು ತೆರೆಕಂಡಿವೆ. ಉಪೇಂದ್ರ ನಟಿಸಿರುವ 'ದುಬಾಯ್ ಬಾಬು' ಮತ್ತು ವಿಜಯ್ ನಟಿಸಿರುವ 'ತಾಕತ್'ಗಳನ್ನು ನೋಡಲು ರಾತ್ರಿ ಒಂಬತ್ತು ಗಂಟೆಗೆ ಜನ ಥಿಯೇಟರ್ ಮುಂದೆ ಕ್ಯೂ ನಿಲ್ಲುತ್ತಾರೆಂದೇ ಗಾಂಧಿನಗರದವರು ಭಾವಿಸಿದ್ದರು. ಆದರೆ ಉದ್ಯಮದವರ ನಿರೀಕ್ಷೆ ಹುಸಿಯಾಗಿದೆ. ಒಂಬತ್ತು ಗಂಟೆಯ ದೇಖಾವೆಗೆ ಜನ ಸ್ಪಂದಿಸಲೇ ಇಲ್ಲ. ಇದನ್ನು ಕಂಡು "ನಮ್ಮ ಚಿತ್ರದ ಗಳಿಕೆ ಸುಮಾರಾಗಲು ಈ ಹೊಸ ವೇಳಾಪಟ್ಟಿಯೇ ಕಾರಣ" ಎಂದು 'ದುಬಾಯ್ ಬಾಬು' ಮತ್ತು 'ತಾಕತ್' ಸಿನಿಮಾದ ನಿರ್ಮಾಪಕರು ಈಗ ಅಪಸ್ವರ ಹಾಡುತ್ತಿದ್ದಾರೆ.



ಇವೆರಡು ಚಿತ್ರಗಳ ಗಳಿಕೆ ನೋಡಿ ಶಾಕ್ ಆಗಿರುವ ನಿರ್ಮಾಪಕರು ಮತ್ತೆ ಹಳೆ ವೇಳಾಪಟ್ಟಿಯನ್ನೇ ಜಾರಿಗೆ ತನ್ನಿ ಎಂದು ಚೇಂಬರ್ ಅಧ್ಯಕ್ಷೆ ಜಯಮಾಲಾ ಅವರನ್ನು ಒತ್ತಾಯಿಸುತ್ತಿದ್ದಾರೆ. "ಹೊಸ ವೇಳಾಪಟ್ಟಿಯಿಂದ ನಮ್ಮ ಚಿತ್ರದ ಗಳಿಕೆ ಶೇಕಡಾ 30ರಷ್ಟು ಹೆಚ್ಚುತ್ತದೆ" ಎಂದು ಒಂದು ವಾರದ ಹಿಂದೆ ಆತ್ಮವಿಶ್ವಾಸದಿಂದ ಬೀಗುತ್ತಿದ್ದ ನಿರ್ಮಾಪಕರುಗಳೇ ಈಗ ತಮ್ಮ ರಾಗ ಬದಲಾಯಿಸಿ "ಹಳೆ ವೇಳಾಪಟ್ಟಿಯನ್ನು ಅನುಷ್ಠಾನಕ್ಕೆ ತಂದರೆ ಮಾತ್ರ ಚಿತ್ರೋದ್ಯಮ ಉಸಿರಾಡಲು ಸಾಧ್ಯ" ಎಂದು ಪ್ಲೇಟ್ ಬದಲಾಯಿಸಿದ್ದಾರೆ. ಇದೆಲ್ಲ ಒಂದು ತಮಾಷೆ ಪ್ರಸಂಗದ ತರಹ ನಿಮಗೆ ಕಾಣಿಸುವುದಿಲ್ಲವೇ?



ನಿರ್ಮಾಪಕರ ಪ್ರಸ್ತುತ ಒತ್ತಡವನ್ನು ತಾಳಲಾರದೆ ಚೇಂಬರ್‌ನಿಂದ ಮತ್ತೊಮ್ಮೆ ನಿಯೋಗ ಸರ್ಕಾರವನ್ನು ಭೇಟಿ ಮಾಡಿ "ನಮಗೆ ಹಳೆ ವೇಳಾಪಟ್ಟಿ ಸಾಕು. ಅದಕ್ಕೆ ಅವಕಾಶ ಕೊಡಿ" ಎಂದು ವಿನಂತಿಸಿಕೊಂಡಿದ್ದಾರೆ. ವಾರಕ್ಕೊಮ್ಮೆ ಬದಲಾಗುವ ಸಿನಿಮಾದವರ ವರ್ತನೆ ನೋಡಿ ಸರ್ಕಾರದ ಅಧಿಕಾರಿಗಳು ನಗುತ್ತಿದ್ದಾರೆ. ಅಷ್ಟೇ ಅಲ್ಲ, "ಸರ್ಕಾರ ಒಂದು ಆದೇಶವನ್ನು ಹೊರಡಿಸಿದರೆ ಅದು ಕನಿಷ್ಠ ಆರು ತಿಂಗಳ ಕಾಲ ಜಾರಿಯಲ್ಲಿರಬೇಕು. ಅನಂತರವಷ್ಟೇ ಅದನ್ನು ಬದಲಾಯಿಸಬಹುದು. ಹೀಗಾಗಿ ನೀವು ಆರು ತಿಂಗಳು ಕಾಯಲೇ ಬೇಕು" ಎಂದು ಕಿವಿಮಾತು ಹೇಳಿ ಕಳುಹಿಸಿದ್ದಾರೆ. ಕೊನೆಗೆ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ನಿಯೋಗದವರು ಖಾಲಿ ಕೈಯಲ್ಲೇ ವಾಪಸ್ಸಾಗಿದ್ದಾರೆ.

ಹೀಗಾಗಿ ಹೊಸ ವೇಳಾಪಟ್ಟಿಯಿಂದ ಚಿತ್ರಮಂದಿರಗಳು ಖಾಲಿ ಹೊಡೆಯುತ್ತಿದ್ದರೂ ಹೋಟೆಲ್ ಮಾಲೀಕರಿಗಂತೂ ಲಾಭವಾಗಿದೆ. ಯಾಕೆಂದರೆ ಹೋಟೆಲ್‌ಗಳು ರಾತ್ರಿ 12 ಗಂಟೆ ತನಕ ಜನರಿಂದ ತುಂಬ ತುಳುಕುತ್ತಿವೆ, ಭರ್ಜರಿ ವ್ಯಾಪಾರ ಮಾಡುತ್ತಿವೆ!

ಅಂತೂ ಚಲನಚಿತ್ರ ವಾಣಿಜ್ಯ ಮಂಡಳಿಯ ನಾಯಕರುಗಳು ಹಾಸ್ಯಾಸ್ಪದರಾಗಿದ್ದಾರೆ. ಕನ್ನಡ ಚಿತ್ರರಂಗದ ಸಮಸ್ಯೆಗಳಿಗೆ ಮೂಲಭೂತ ಕಾರಣಗಳನ್ನು ಹುಡುಕುವ ಬದಲು ಇನ್ನಷ್ಟು ಸಮಸ್ಯೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಚಿತ್ರರಂಗದ ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರವೆಂದರೆ ಅತ್ಯುತ್ತಮ ಗುಣಮಟ್ಟದ, ಹೊಸತನದ ಸಿನಿಮಾ ಎಂಬ ಸಿಂಪಲ್ ವಿಷಯ ಇವರಿಗೆ ಇನ್ನೂ ಗೊತ್ತಾಗದಿರುವುದು ಪ್ರಪಂಚದ ಎಂಟನೇ ಅದ್ಭುತ!



ಬರಕತ್ತಾಗದ 'ಬಾಬು'

ಕನ್ನಡ ಚಿತ್ರರಂಗದಲ್ಲಿ ಒಂದು ಕೋಟಿ ರೂ. ಸಂಭಾವನೆ ಪಡೆಯುವ 'ಪಂಚ ಕೋಟಿ' ನಟರುಗಳಲ್ಲಿ ರಿಯಲ್ ಸ್ಟಾರ್ ಉಪೇಂದ್ರ ಕೂಡಾ ಒಬ್ಬರು. ಅವರ ಅಭಿನಯದ 'ದುಬಾಯ್ ಬಾಬು' ಚಿತ್ರ ರಿಲೀಸ್ ಆದ ನಂತರ ಕೋಟಿ ಕೋಟಿ ಲಾಭ ಬರಬಹುದು ಎಂದು ನಿರ್ಮಾಪಕ ಶೈಲೇಂದ್ರ ಬಾಬು ಕನಸು ಕಂಡಿದ್ದರು. ಆದರೆ ಸಿನಿಮಾ ಈಗ ಫ್ಲಾಪ್ ಲಿಸ್ಟ್‌ಗೆ ಸೇರಿದೆ. ಇದರಿಂದಾಗಿ ನಿರ್ಮಾಪಕ ಶೈಲೇಂದ್ರ ಬಾಬುಗೆ ನಷ್ಟವಾಗಿರುವುದು ಮಾತ್ರವಲ್ಲ, ಉಪೇಂದ್ರನ ತಾರಾ ವರ್ಚಸ್ಸಿಗೂ ಧಕ್ಕೆಯಾಗಿದೆ.

'ದುಬಾಯ್ ಬಾಬು' ಸಿನಿಮಾ ನೋಡುವುದು ದೊಡ್ಡ ಹಿಂಸೆ ಎಂಬುದೇ ಬಹುತೇಕ ಪ್ರೇಕ್ಷಕರ ಅಭಿಪ್ರಾಯ. ಈ ಚಿತ್ರಕ್ಕೆ ಬಂದ ಕಟುವಾದ ವಿಮರ್ಶೆಗಳನ್ನು ನೋಡಿ ಹೌಹಾರಿದ ನಿರ್ದೇಶಕ ಚಿಕ್ಕಣ್ಣ ಈಗ ಮೌನವಾಗಿದ್ದಾರೆ. ಉಪ್ಪಿ ಅಭಿಮಾನಿಗಳು ಕೂಡಾ 'ದುಬಾಯ್ ಬಾಬು'ವನ್ನು ಮೆಚ್ಚಿಲ್ಲ. ಇದನ್ನೆಲ್ಲ ನೋಡಿದರೆ ಉಪ್ಪಿ ಮತ್ತೆ ಗ್ರೌಂಡ್ ಜೀರೋ ಲೆವೆಲ್‌ಗೆ ತಲುಪಿದಂತೆ ಕಾಣಿಸುತ್ತಿದ್ದಾರೆ.

So what next ಉಪ್ಪಿ?

ಅರ್ಜುನ ಮಂಥನ

...ಮೊನ್ನೆ ತಮಿಳು ಚಿತ್ರರಂಗದ ದೊಡ್ಡ ನಟ ...ರ್ಜುನ್ ಸರ್ಜಾ ಸಿನಿಮಾ ಪತ್ರಕರ್ತರ ಜೊತೆ ...ಾರು ಒಂದು ಗಂಟೆಗಳ ಕಾಲ ಮನ ಬಿಚ್ಚಿ ...ತನಾಡಿದರು. ಇದಕ್ಕೆ ಅನುವು ಮಾಡಿಕೊಟ್ಟದ್ದು ...ಮಾ ಪತ್ರಕರ್ತರ 'ಅಮೃತ-ಮಾತು-ಮಂಥನ' ...ರ್ಯಕ್ರಮ.


...ಸರಳ ಮಾತು ಮತ್ತು ಸಹಜ ವ್ಯಕ್ತಿತ್ವದ ಅರ್ಜುನ್ ... ಅಂದು ತಮ್ಮ ಜೀವನ ಚರಿತ್ರೆಯನ್ನು ಬಿಡಿಸುತ್ತಾ ...ದರು.

"ನಾನು ... ...ನದಲ್ಲಿ ...ವುದನ್ನೂ ... ...ಡಿದವನಲ್ಲ. ...ಕವಾಗಿ ...ರಂಗಕ್ಕೆ ...ದೆ. ನನ್ನ ...ಯವರಿಗೆ ... ...ಮಕ್ಕೆ ...ಬೇಕೆಂಬ ಆಶೆಯಿರಲಿಲ್ಲ. ...ಕ್ಕೆ ಮುಖ್ಯ ಕಾರಣ ...ು ಪಟ್ಟ ಕಷ್ಟ-ನಷ್ಟ-...ವುಗಳನ್ನು ನಾವು ಅನು...ಪಟಾರದು ಎಂಬುದಾ... ನಾನು ಪೊಲೀಸ್ ...ಪೆಕ್ಟರ್ ಆಗಬೇಕೆಂಬು...ದೇ ಅವರ ಮಹದಾಸೆಯಾಗಿತ್ತು. ಆದರೆ ನಾನು ...ದೀಕ್ಷಿತವಾಗಿ ಇಲ್ಲಿ ಕಾಲಿಟ್ಟೆ; ಬೆಳೆದೆ.

...ಬಾಲನಟನಾದ ನಂತರ ಅತ್ತ ಮಿಸ್ಟರ್, ಇತ್ತ ...ಸ್ಟರ್ ಅಲ್ಲದ ಯೌವನದ ದಿನಗಳಲ್ಲಿ ನಾಯಕನಾಗಿ ...ಾ' ಚಿತ್ರದಲ್ಲಿ ಕಾಣಿಸಿಕೊಂಡೆ. ಅನಂತರ ...ಕಾಶಗಳೇ ಸಿಗದೆ ನಿರುದ್ಯೋಗ ಅನುಭವಿಸಿದೆ. ...ಸಂದರ್ಭದಲ್ಲೇ ನನ್ನ ಗಟ್ಟಿಮುಟ್ಟಾದ ಪರ್ಸನಾಲಿಟಿ ...ಯಿಂದಾಗಿ ತಮಿಳು ಚಿತ್ರವೊಂದರಲ್ಲಿ ನಾಯಕನಾದೆ. ...ಚಿತ್ರ ಬಿಡುಗಡೆಯಾದ ದಿನದಂದೇ ಎಂಟು ಹೊಸ ...ಗಳಿಗೆ ಸಹಿ ಹಾಕಿದೆ. ಅಲ್ಲಿಂದಾಚೆಗೆ ನಾನು ...ರುದ್ಯೋಗಿ'ಯಾಗಿ ಕುಳಿತುಕೊಂಡಿದ್ದೇ ಇಲ್ಲ" ಎಂದು ...ರ್ಜುನ ಸರ್ಜಾ ಕಣ್ಣಿಗೆ ಕಟ್ಟುವಂತೆ ತಮ್ಮ ಆ ...ದಿನಗಳ ನೋವು-ನಲಿವುಗಳನ್ನು ಹಂಚಿಕೊಂಡರು. ...ಅದೇ ಸಂದರ್ಭದಲ್ಲಿ ಅವರು ಮೊದಲ ಬಾರಿ ... ನಿರ್ದೇಶನ ಕೈಗೆತ್ತಿಕೊಂಡ ಸಂದರ್ಭವನ್ನು ...ದಯಕಲಕುವಂತೆ ಹೇಳಿದರು. "ಆ ಚಿತ್ರದ ಹೆಸರು ...ಜಗನ್'. ಅದನ್ನು ನಿರ್ಮಿಸಲು ಯಾರೂ ಮುಂದೆ ...ಬರದಿದ್ದಾಗ ನನ್ನ ಜೀವಮಾನದ ಆದಾಯವನ್ನೆಲ್ಲ ...ಕ್ಕೆ ಸುರಿದೆ. ಕೈತುಂಬಾ ಸಾಲ ಮಾಡಿಕೊಂಡು ...ಚಿತ್ರವನ್ನು ಸಂಪೂರ್ಣ ಮಾಡಿದೆ. ಅಂತೂಇಂತೂ ...ಗೋ ಚಿತ್ರ ಮುಗಿಸಿದ ನಂತರ ಮತ್ತೊಂದು ...ಸ್ಯೆ ಎದುರಾಯಿತು. ಹಂಚಿಕೆದಾರರಿಗಾಗಿಯೇ ...ನೂರು ನೂರಕ್ಕೂ ಹೆಚ್ಚು ಫೋನ್‌ಗಳನ್ನು ಹಾಕಿದರೂ ... ತಮಿಳುನಾಡಿನಲ್ಲಿ ಈ ಚಿತ್ರವನ್ನು ಖರೀದಿಸಲು ...ಕ್ಕೆ ಒಬ್ಬ ಹಂಚಿಕೆದಾರ ... ಬರಲಿಲ್ಲ. ಕೊನೆಗೆ ... ಮಾಡಿ ಮತ್ತೆ ಸಾಲ ಪಡೆದು ಚಿತ್ರವನ್ನು ...ಡುಗಡೆ ಮಾಡಿದೆ. ಆ ಚಿತ್ರ ತಮಿಳುನಾಡಿನಾದ್ಯಂತ ಜಯ...ಭೇರಿ ಬಾರಿಸಿ ಒಂದು ಹೊಸ ಇತಿಹಾಸವನ್ನೇ ...ಸೃಷ್ಟಿಸಿತು" ಎಂದರು.

"ತಮಿಳಿನಲ್ಲಿ ರಜನೀಕಾಂತ್ ಮತ್ತು ಕಮಲ ...ಹಾಸನ್, ಮಲೆಯಾಳಂನಲ್ಲಿ ಮೋಹನ್ ಲಾಲ್, ಹಿಂದಿ ...ಯಲ್ಲಿ ನಾನಾ ಪಟೇಕರ್ ಮೊದಲಾದ ಅತಿರಥ ಮಹಾ...ರಥರುಗಳೊಡನೆ ನಟಿಸಿ ಎಲ್ಲಾ ಭಾಷೆಯ ಪ್ರೇಕ್ಷಕರ ...ಮನಸ್ಸನ್ನು ಗೆದ್ದಿದ್ದರೂ ನೀವು ಕನ್ನಡದಲ್ಲಿ ಮಾತ್ರ ಬಾಕ್ಸಾಫೀಸ್ ಕಿಂಗ್ ಆಗಿ ಮೆರೆಯಲಿಲ್ಲವಲ್ಲಾ?" ಎಂದು ಪ್ರಶ್ನಿಸಿದರೆ "ಕನ್ನಡದ ಪ್ರೇಕ್ಷಕರ ಹೃದಯವನ್ನು ಗೆಲ್ಲುವ ಚಿತ್ರವನ್ನು ನಾನಿನ್ನು ಮಾಡಿಲ್ಲ" ಎಂದು ಅತ್ಯಂತ ನಮ್ರವಾಗಿ"ಉತ್ತರಿಸಿದರು.

ಕಾವೇರಿ ವಿವಾದದ ಬಗ್ಗೆ ಪ್ರಸ್ತಾಪಿಸಿದಾಗ ಸರ್ಜಾ ತುಂಬಾ ಜಾಣತನದಿಂದ ಉತ್ತರಿಸಿದರು. "ಅಲ್ಲಿರುವ ಕನ್ನಡಿಗರಾದ ನಮಗೆ ಅದೊಂದು ಧರ್ಮಸಂಕಟ. ಹಾಗಾಗಿ ಬಹುತೇಕ ಸಂದರ್ಭಗಳಲ್ಲಿ ಏನೂ ಹೇಳಲು ಹೋಗದೇ ನಾವು ನ್ಯೂಟ್ರಲ್ ಆಗಿರುತ್ತೇವೆ. 'ನೀವು ನಮ್ಮ ನಾಡಿನಲ್ಲಿದ್ದೀರಿ; ನಿಮ್ಮನ್ನು ಬೆಳೆಸಿದ್ದು ನಮ್ಮ ತಮಿಳು ಪ್ರೇಕ್ಷಕರಲ್ಲವೇ? ಹೀಗಾಗಿ ನೀವು ನಮಗೆ ಬೆಂಬಲ ನೀಡಬೇಕು' ಎಂದು ತಮಿಳರು ಹೇಳುತ್ತಾರೆ. ಆದರೆ 'ನೀವು ಹುಟ್ಟಿದ್ದು ಕರ್ನಾಟಕದಲ್ಲಿ, ಕಲಿತದ್ದು ಕರ್ನಾಟಕದಲ್ಲಿ. ಆದುದರಿಂದ ನೀವು ಕರ್ನಾಟಕಕ್ಕೆ ಬೆಂಬಲಿಸಬೇಕು' ಎಂದು ಕನ್ನಡಿಗರು ಹೇಳುತ್ತಾರೆ. ಅವರು ಹೇಳುವುದೂ ಸರಿ, ಇವರು ಹೇಳುವುದೂ ಸರಿ. ಆದರೆ ನಾನೀಗ ಯಾರನ್ನು ಬೆಂಬಲಿಸಬೇಕೆಂದೇ ಅರ್ಥವಾಗುತ್ತಿಲ್ಲ, ನೀವೇ ಹೇಳಿ" ಎಂದು ನಕ್ಕುಬಿಟ್ಟರು. "ಮೂಲಭೂತವಾಗಿ ಇಂತಹ ಸಮಸ್ಯೆಗಳನ್ನು ಪರಿಹರಿಸುವ ಕಾರಣಕ್ಕಾಗಿಯೇ ಜನಪ್ರತಿನಿಧಿಗಳನ್ನು ನಾವು ಆಯ್ಕೆ ಮಾಡುವುದು. ಇದನ್ನೆಲ್ಲ ಅವರೇ ಪರಿಹರಿಸಬೇಕು. ಅದರ ಬದಲಿಗೆ ಆ ಜವಾಬ್ದಾರಿಯನ್ನು ನಮ್ಮಂತಹವರ ಕಡೆಗೆ ವರ್ಗಾಯಿಸುತ್ತಾರೆ" ಎಂದು ರಾಜಕಾರಣಿಗಳ ಬಗ್ಗೆ ಸರ್ಜಾ ಅಸಮಾಧಾನ ವ್ಯಕ್ತಪಡಿಸಿದರು.



"ಸದ್ಯದಲ್ಲೇ ಒಂದು ಹಿಂದಿ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿ ಅದರಲ್ಲಿ ನಾಯಕನಟನಾಗಿ ನಟಿಸಲಿದ್ದೇನೆ. ಅದರಲ್ಲಿನ ನನ್ನ ಪಾತ್ರಕ್ಕೆ ನಾನೇ ಕಂಠದಾನವನ್ನೂ ಮಾಡುತ್ತೇನೆ" ಎಂಬ ವಿಷಯವನ್ನು ಅವರು ಬಹಿರಂಗಪಡಿಸಿದರು.

"ನೀವು ಕನ್ನಡದ ಚಿತ್ರಗಳಲ್ಲಿ ಯಾಕೆ ಹೆಚ್ಚು ಕಾಣಿಸಿಕೊಳ್ಳುತ್ತಿಲ್ಲ?" ಎಂಬ ಪ್ರಶ್ನೆಗೆ "ಸದ್ಯದಲ್ಲೇ ರಾಮು ನಿರ್ಮಾಣದ ಚಿತ್ರವೊಂದರಲ್ಲಿ ನಟಿಸಲಿದ್ದೇನೆ" ಎಂದು ಹೇಳಿದರು. ಅಷ್ಟೇ ಅಲ್ಲ, "ನನ್ನ ಪ್ರಾಶಸ್ತ್ಯ ಕನ್ನಡಕ್ಕೆ. ಆ ಕಾರಣಕ್ಕಾಗಿಯೇ ನನ್ನ ಸಹೋದರಿಯ ಮಗನಿಗೆ ತೆಲುಗು ಮತ್ತು ತಮಿಳಿನಲ್ಲಿ ಅವಕಾಶವಿದ್ದರೂ 'ವಾಯುಪುತ್ರ' ಎಂಬ ಕನ್ನಡ ಚಿತ್ರದ ಮುಖಾಂತರ ಪರಿಚಯಿಸುತ್ತಿದ್ದೇನೆ. ಕಳೆದ ಒಂದು ವರ್ಷದಿಂದ ದೇಶ-ವಿದೇಶಗಳಲ್ಲಿ ಅದರ ಚಿತ್ರೀಕರಣ ನಡೆಯುತ್ತಿದೆ" ಎಂದರು.

"ನಿಮಗೆ ಕನ್ನಡದಲ್ಲಿ ಯಾವ ತರಹದ ಪಾತ್ರ ಮಾಡುವ ಆಸೆ ಇದೆ?" ಎಂದಾಕ್ಷಣ ಅರ್ಜುನ್ ಸರ್ಜಾ "ದೇಶಪ್ರೇಮದ ಕಥಾವಸ್ತು" ಎಂದರು. "ದೇಶ ಪ್ರೇಮವೆಂದರೆ ಅದು ಹಿಸ್ಟಾರಿಕಲ್ ಅಲ್ಲ; ಡಾ ರಾಜ್ ಅಭಿನಯಿಸಿದ ಮಯೂರ, ಬಬ್ರುವಾಹನ ತರಹದ ಚಿತ್ರ ಮತ್ತು ಅದನ್ನು ಈಗಿನ ಸಂದರ್ಭಕ್ಕೆ ಮಾರ್ಪಡಿಸಿ ಪ್ರೇಕ್ಷಕರಲ್ಲಿ ದೇಶಾಭಿಮಾನ ಮೂಡಿಸುವ ಚಿತ್ರ" ಎಂದು ಸ್ಪಷ್ಟಪಡಿಸಿದರು. ಒಟ್ಟಾರೆಯಾಗಿ ಅರ್ಜುನ್ ಸರ್ಜಾ ಅವರಿಗೆ ತಮ್ಮ ಶ್ರಮ ಮತ್ತು ಪ್ರತಿಭೆ ಮೇಲೆ ನಂಬಿಕೆ. ಹಾಗೆಯೇ ಯಾವುದೋ ಒಂದು **Divine Force** ತಮ್ಮನ್ನು ಪ್ರೋತ್ಸಾಹಿಸುತ್ತಾ ಇಲ್ಲಿಯತನಕ ಕೈ ಹಿಡಿದುಕೊಂಡು ಬಂದಿದೆ ಎಂಬುದು ಸರ್ಜಾ ಅವರ ಅಭಿಪ್ರಾಯ.

● ಶೆಣೈ

ನಿಂತ ರಘುವೀರನ 'ಪ್ರೀತಿ..'



ರಘುವೀರ್, ಸ್ವಾತಿ


ಕೆಲಸಿ, ಮಿದ್ದಿಟ್ಟ ಚಪಾತಿ ಹಿಟ್ಟಿನಂತಿರುವ ಮಾಜಿ ನಟ ರಘುವೀರ್‌ನ 'ಈ ಪ್ರೀತಿ ಯಾರಿಗಾಗಿ' ಎಂಬ ಸಿನಿಮಾ ಆರಂಭವಾಗುವುದಕ್ಕೆ ಮುನ್ನವೇ ಅಂತ್ಯಗೊಂಡಿದೆ!

ಕಳೆದ ವಾರವಷ್ಟೇ ಪತ್ರಿಕಾಗೋಷ್ಠಿ ಕರೆದು ಚಿತ್ರದ ಬಗ್ಗೆ ಪುಂಖಾನುಪುಂಖವಾಗಿ ಹೇಳಿಕೊಂಡಿದ್ದ ರಘುವೀರ್. ಆದರೆ ಅದಾಗಿ ಎರಡೇ ದಿನಕ್ಕೆ ಚಿತ್ರಕ್ಕೆ ಬಂಡವಾಳ ಹೂಡಬೇಕಿದ್ದ ನಿರ್ಮಾಪಕನೇ 'ಸಾಕಪ್ಪಾ ಸಾಕು ನಿನ್ನ ಸಹವಾಸ' ಎಂದು ಕೈಯೆತ್ತಿ ಈತನಿಂದ ದೂರ ಓಡಿದ್ದಾನೆ.

ಕುಡಿಯೋದೇ ನನ್ನ ಬಿಜಿನೆಸ್ಸು!

'ಈ ಪ್ರೀತಿ ಯಾರಿಗಾಗಿ' ಚಿತ್ರದ ಅಕಾಲಿಕ ಮರಣಕ್ಕೆ ಕಾರಣ ರಘುವೀರನ ಕುಡಿತ. ಹಗಲೆಲ್ಲಾ ಎಲ್ಲರೊಂದಿಗೂ ಸ್ನೇಹಮಯವಾಗೇ ಕಳೆಯುವ ಈತ ಕತ್ತಲು ಕವಿಯುತ್ತಿದ್ದಂತೇ ಅಕ್ಷರಶಃ ಹುಚ್ಚನಾಗಿಬಿಡುತ್ತಾನೆ. ಕಂಠಮಟ್ಟ ಕುಡಿದು ಚಿತ್ತಾಗುವ ಈತನಿಗೆ ಯಾರಾದರೂ ಸಂಜೆಯಾದ ಮೇಲೆ ಫೋನು ಮಾಡಿದರಂತೂ ಅವರ ಕತೆ ಮುಗಿದಂತೆಯೇ.

"ನನಗೆ ಬಾಬಾನನ್ನು ನೋಡಬೇಕು ಅನ್ನಿಸಿಬಿಟ್ಟಿದೆ. ಅದಕ್ಕೇ ನಾನು ಶಿರಡಿಗೆ ಹೋಗ್ತಾ ಇದ್ದೀನಿ" ಎಂದು ಶುರು ಮಾಡುವ ಈತ 'ಬಾಬಾ' ಬಗ್ಗೆ ಬಡಬಡಾಯಿಸುವ ಪೂರ್ತಾ ಹರಿಕಥೆಯನ್ನು ಮುಗಿಸುವತನಕ ಈ ಕಡೆಯಿರುವವರು ಫೋನಿಡುವ ಹಾಗಿಲ್ಲ. ಹಾಗೊಮ್ಮೆ ಲೈನ್ ಕಟ್ ಮಾಡಿದರೆ ಫಿನಿಷ್! ಮತ್ತೆ ಫೋನು ಮಾಡಿ ಕೆಟ್ಟ ಕೊಳಕ ಮಾತುಗಳನ್ನಾಡುತ್ತಾರೆ.



ರಾಜರೆಡ್ಡಿ

ಈತನ ಅಸಾಧ್ಯ ಕುಡಿತ ಹಾಗೂ ವಿಲಕ್ಷಣ ನಡವಳಿಕೆಗೆ ಹೆದರಿಕೊಂಡೇ ಈತನ ಮೊದಲ ಪತ್ನಿ ಸಿಂಧೂ ಈತನ ಸಹವಾಸಕ್ಕೆ ನಮಸ್ಕಾರ ಹೇಳಿ ತನ್ನ ಮಗಳೊಂದಿಗೆ ಚೆನ್ನೈಗೆ ಹೋಗಿ ನೆಲೆಸಿದ್ದಳು. ಅಲ್ಲಿ ತಮಿಳು ಧಾರಾವಾಹಿಗಳಲ್ಲಿ ನಟಿಸುತ್ತಾ ಬದುಕು ಸಾಗಿಸುತ್ತಿದ್ದ ಆಕೆ 'ಸುನಾಮಿ ರಿಲೀಫ್ ಫಂಡ್'ಗಾಗಿ ಹಣ ಸಂಗ್ರಹಿಸುವ ವೇಳೆ ಕಾರು ಮುಗ್ಗರಿಸಿ ಸಾವನ್ನಪ್ಪಿದಳು. ತಾನು ಪ್ರೀತಿಸಿ, ಹಲವಾರು ವಿರೋಧಗಳ ಮಧ್ಯೆಯೂ ಮದುವೆಯಾದ ಸಿಂಧು ಸತ್ತಾಗ ರಘುವೀರ್ ತಾನೋರ್ವ ದೂರದ ಸಂಬಂಧಿಯೆಂಬಂತೆ ಆಕೆಯ ಮೃತ ದೇಹದ ಮೇಲೆ ಹೂವಿಟ್ಟು ಎರಡು ನಿಮಿಷಕ್ಕೇ ವಾಪಾಸ್ಸು ಬಂದುಬಿಟ್ಟಿದ್ದ.

ಇವತ್ತಿಗೂ ಸಿಂಧೂಗೆ ಜನಿಸಿದ ಮಗಳು ಹತ್ತನೇ ಕ್ಲಾಸು ಓದುತ್ತಾ ಚೆನ್ನೈನ ತನ್ನ ಅಜ್ಜಿ ಮನೆಯಲ್ಲೇ ಇದ್ದಾಳೆ.

ಸಿಂಧು ಸತ್ತ ನಂತರ ರಘುವೀರ್‌ನ ಮನೆಯವರು ಮಾವನ ಮಗಳನ್ನೇ ಈತನಿಗೆ ಕಟ್ಟಿದ್ದಾರೆ; ಆಕೆಗೂ ಒಂದು ಹೆಣ್ಣು ಮಗುವಿದೆ. ಈತನಿಗೆ ಶ್ರೀಮಂತನ ಮನೆತನದ ಹಿನ್ನೆಲೆಯೂ ಇದೆ. ಈತ ಸುಮಾರು 19 ಚಿತ್ರಗಳಲ್ಲಿ ನಟಿಸಿ, ಕೆಲ ಚಿತ್ರಗಳನ್ನು ನಿರ್ಮಿಸಿದ್ದಾನಾದರೂ, 'ಚೈತ್ರದ ಪ್ರೇಮಾಂಜಲಿ', 'ಶೃಂಗಾರ ಕಾವ್ಯ' ಬಿಟ್ಟರೆ ಬೇರಾವ ಚಿತ್ರಗಳೂ ಗೆಲ್ಲಲಿಲ್ಲ. ಸಿನಿಮಾದಿಂದ ಈತ ಗಳಿಸಿದ್ದಕ್ಕಿಂತ ಕಳಕೊಂಡಿದ್ದೇ ಹೆಚ್ಚು.

ಯಾವಾಗ ಈತ ಸಿನಿಮಾ ನಂಬಿ ಬದುಕುವುದು ಸಾಧ್ಯವಿಲ್ಲ ಎಂಬುದು ಗೊತ್ತಾಯಿತೋ ಆಗ ರಘುವೀರನ ತಂದೆ ಸರಿಸುಮಾರು ಎರಡು ಲಕ್ಷ ರೂಪಾಯಿಗಳ ಬಾಡಿಗೆ ಬರುವ ಕಟ್ಟಡಗಳನ್ನು ಈತನ ಪಾಲಿಗೆ ನೀಡಿದರು. ಬಿಟಿಎಂ ಲೇಔಟಿನಲ್ಲಿ ಇಪ್ಪತ್ತು ಸಾವಿರ ರೂಪಾಯಿಯ ಬಾಡಿಗೆ ಮನೆಯಲ್ಲಿರುವ ರಘುವೀರ್ ಮಿಕ್ಕಷ್ಟೂ ಹಣವನ್ನು ಕುಡಿತ, ಮೋಜುಗಳಿಗೆ ಖರ್ಚು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ಮಹಾನ್ ಸುಳ್ಳ!

""ಈ ಪ್ರೀತಿ ಯಾರಿಗಾಗಿ' ಚಿತ್ರದ ಕಥೆ ನನ್ನದೇ. ನನ್ನ ಜೀವನದಲ್ಲಿ ನಡೆದ ಕಥೆಗೇ ಸಿನಿಮಾ ರೂಪ ಕೊಡುತ್ತಿದ್ದೀನಿ. ಮ್ಯೂಜಿಕ್ಕನ್ನೂ ನಾನೇ ಮಾಡುತ್ತಿದೀನಿ"ಎಂದೆಲ್ಲಾ ರಘುವೀರ್ ಹೇಳಿದ್ದ. ಆದರೆ ಅಸಲಿಗೆ ಈ ಚಿತ್ರದ ಕಥೆಯನ್ನು ಪೂರಿ ಜಗನ್ನಾಥ್ ಬಳಿ ಅಸೋಸಿಯೇಟ್ ಆಗಿರುವ ಶ್ರಾವಣ್‌ರಾಜ್ ಎಂಬಾತನಿಂದ ತಂದಿರುವುದು. ಇಷ್ಟು ಮಾತ್ರವಲ್ಲದೇ ಚಿತ್ರದ ಎಲ್ಲ ವಿಷಯಗಳಲ್ಲೂ ಮೂಗು ತೂರಿಸುವ ಈತ ನಿರ್ದೇಶಕ ರಾಜಾರೆಡ್ಡಿಯ ಅನುಮತಿಯೇ ಇಲ್ಲದೆ ಸ್ವಾತಿ ಎಂಬ ಹುಡುಗಿಯನ್ನು ಆಯ್ಕೆ ಮಾಡಿ ಈಕೆಯೇ ಚಿತ್ರದ ನಾಯಕಿ ಎಂದೂ ಘೋಷಿಸಿದ್ದ.


ಹೊತ್ತಲ್ಲದ ಹೊತ್ತಿನಲ್ಲಿ ಕುಡಿದು ಟೈಟಾಗುವುದನ್ನೇ ಕಾಯಕ ಮಾಡಿಕೊಂಡಿರುವ ರಘುವೀರ್ ಮೊನ್ನೆ ಕೂಡ ಹೀಗೇ ಮಾಡಿದ್ದಾನೆ. ಟೈಟಾಗಿ 'ಈ ಪ್ರೀತಿ ಯಾರಿಗಾಗಿ' ಚಿತ್ರಕ್ಕೆ ಹಣ ಸುರಿಯಲು ಬಂದಿದ್ದ ನಿರ್ಮಾಪಕ ಉದ್ಯಮಿ ನವೀನ್ ಕುಮಾರ್‌ಗೆ ಫೋನು ಮಾಡಿ ಅಸಭ್ಯವಾಗಿ ಮಾತನಾಡಿದ್ದಾನೆ. ಕುಮಾರ್ ಅವರು ರಘುವೀರನ ಹೇಸಿಗೆ ಹುಟ್ಟಿಸುವ ಮಾತುಗಳನ್ನು ಕೇಳಿ ಬೆಚ್ಚಿಬಿದ್ದಿದ್ದಾರೆ. "ಈತನನ್ನು ನಂಬಿ ಸಿನಿಮಾ ಮಾಡಿದರೆ ನಾನು ಬರ್ಬಾದ್‌ರಾಗುವುದು ಗ್ಯಾರೆಂಟಿ" ಎಂದು ತೀರ್ಮಾನಿಸಿ ರಘುವೀರನಿಗೆ ಅಡ್ಡಡ್ಡ ನಮಸ್ಕರಿಸಿ ಕೈತೊಳೆದುಕೊಂಡಿದ್ದಾರೆ.

ಇಷ್ಟು ಸಾಲದೆಂಬಂತೆ ರಘುವೀರನ ಆಪ್ತ ಗೆಳೆಯನೂ ಆಗಿರುವ ನಿರ್ದೇಶಕ ರಾಜಾರೆಡ್ಡಿಯೂ "ಬೇಕಿದ್ದರೆ ನನ್ನ ಹೆಸರಿನಲ್ಲಿರುವ ಚಿತ್ರದ ಎಲ್ಲಾ ಹಕ್ಕನ್ನೂ ಬರೆದುಕೊಟ್ಟುಬಿಡುತ್ತೀನಿ. ನಿನ್ನ ಸಹವಾಸ ಮಾತ್ರ ಬೇಡ" ಎಂದು ನಿರ್ದೇಶನದ ಜವಾಬ್ದಾರಿಯಿಂದ ಕಳಚಿಕೊಂಡು ಹೊರನಡೆದಿದ್ದಾನೆ.

ಹೀಗಾಗಿ ರಘುವೀರನ 'ಈ ಪ್ರೀತಿ ಯಾರಿಗಾಗಿ?' ಎಂಬ ಚಿತ್ರ ಯಾರಿಗೂ ಬೇಡವಾಗಿದೆ!

● ಅರುಣ್.ಜಿ

ಯಾವನ್ರೀ ನಾರಾಯಣ!



'ನಿಮ್ಮ ಗುರು ನಾರಾಯಣ್‌ರೊಂದಿಗೆ ನಿಮ್ಮ ನಂಟು ಹೇಗಿದೆ' ಎಂದು ಪತ್ರಕರ್ತರೊಬ್ಬರು ಪ್ರಶ್ನೆ ಕೇಳಿದಕೂಡಲೇ ಮೈಮೇಲೆ ದೆವ್ವ ಪಕ್ಕರಿಸಿದವನಂತೆ 'ಯಾವನ್ರೀ ಅವ್ನು ನಾರಾಯಣ? ನನಗೆ ಅವನು ಗುರು ಅಲ್ಲ; ನಾನೇ ಅವನಿಗೆ ಗುರು! ನಾನು ಕರೆದು 'ಚೈತ್ರದ ಪ್ರೇಮಾಂಜಲಿ'ಯಲ್ಲಿ ಅವಕಾಶ ಕೊಡದೇ ಇದ್ದಿದ್ದರೆ ಅವನನ್ನು ಯಾರೂ ಮೂಸುತ್ತಿರಲಿಲ್ಲ' ಎಂದು ಎಷ್ಟಾಗಿ ಹೆಸರೇಳಿದ ಕೂಡಲೇ ರಘುವೀರನ ಎಗರಾಟ ಶುರುವಾಗುತ್ತದೆ.

ಹೀಗಾಗಿ ಈ ಗುರುಶಿಷ್ಯರಲ್ಲಿ ಚೋರ ಯಾರು? ಚಾಂಡಾಳನಾರು ಎಂದು ಚೀರ್ಮಾನಿಸುವುದು ಸ್ವಲ್ಪ ಕಷ್ಟ!

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 10-06-2009 RNI No. KARKAN2005/14

ಲಾಂಗು ಮಚ್ಚು ಹುಚ್ಚು ನೀ ಬಿಡೂ ಶಿವಾ!




ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಜಮಾನಾ ಮುಗಿದುಹೋಗುತ್ತಿದೆಯಾ? ಅವರನ್ನು ಆರಾಧಿಸುತ್ತಿದ್ದ ಅಭಿಮಾನಿಗಳೂ ಯಾಕೆ ಶಿವಣ್ಣನ ಚಿತ್ರವೆಂದರೆ ಮೂಗು ಮುರಿಯುತ್ತಿದ್ದಾರೆ? ಅವರು ಮತ್ತೆ ಮತ್ತೆ ಒಂದೇ ಜಾಗದಲ್ಲಿ ಎಡವುತ್ತಿರುವುದಾದರೂ ಯಾಕೆ ಮತ್ತು ಹೇಗೆ? ಶಿವಣ್ಣನಂಥ ಪ್ರಬುದ್ಧ ನಟನ ಪಾಡೇ ಹೀಗಾದರೆ ಹೊಸಬರ ಕಥೆಯೇನು? ಶಿವರಾಜ್ ಕುಮಾರ್ ಅವರ ನಿರಂತರ ಸೋಲಿಗೆ ಕಾರಣ ಹುಡುಕುವ ಒಂದು ಪುಟ್ಟ ಅವಲೋಕನ ಇಲ್ಲಿದೆ....

■ ಅರುಣ್ ಕುಮಾರ್.ಜಿ







ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್‌ರ ವೃತ್ತಿಬದುಕು ಈಗ ಡೇಂಜರ್ ಜೋನ್‌ನಲ್ಲಿದೆ!

ಎರಡು ವಾರಗಳ ಹಿಂದಷ್ಟೇ ಬಿಡುಗಡೆಯಾದ 'ಹ್ಯಾಟ್ರಿಕ್ ಹೊಡಿ ಮಗ' ಚಿತ್ರಕ್ಕೆ ಪ್ರೇಕ್ಷಕ ಈಗಾಗಲೇ 'ಥಿಯೇಟರ್‌ನಿಂದ ಹೊರನಡಿ ಮಗ' ಎಂದು ಆಶೀರ್ವಾದ ಮಾಡಿ ಹೊರದಬ್ಬಿಸಿದ್ದಾನೆ. ಪದೇ ಪದೇ ಶಿವಣ್ಣನ ಚಿತ್ರಗಳು ಹೀಗೆ ಹೆಸರು ಕೆಡಿಸಿಕೊಳ್ಳುತ್ತಿರುವುದರಿಂದ 'ಮಿನಿಮಮ್ ಗ್ಯಾರಂಟಿ ನಟ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಶಿವರಾಜ್‌ಕುಮಾರ್‌ರ ಚಿತ್ರಗಳ ಕಡೆಗೆ ಸ್ವತಃ ಅವರ ಅಭಿಮಾನಿಗಳೇ ಅಸಡ್ಡೆಯಿಂದ ನೋಡುವಂತಾಗಿದೆ. ಎಲ್ಲ ಚಿತ್ರಗಳಲ್ಲೂ ಒಂದೇ ತೆರನಾದ ಕತೆ, ನಟನೆಗೆ ಅವಕಾಶವೇ ಇಲ್ಲದ ಹೊಡಿಬಡಿ ದೃಶ್ಯಗಳು. ಏಕತಾನತೆಯ ಬಾಡಿ ಲಾಂಗ್ವೇಜು, ಡೈಲಾಗುಗಳಂತೂ ನೋಡುಗರ ತಲೆ ಚಿಟ್ಟುಹಿಡಿಸಿವೆ.

ಹಿಂದೆಲ್ಲಾ ಶಿವರಾಜ್‌ಕುಮಾರ್ ಅಭಿನಯದ ಚಿತ್ರಗಳು ಬಿಡುಗಡೆಯಾಗುತ್ತವೆಂದರೆ ಜನ ಹಗಲುರಾತ್ರಿ ಕಾದು ಥಿಯೇಟರಿಗೆ ಮುಗಿಬೀಳುತ್ತಿದ್ದರು. ಹೀಗಿದ್ದ ಶಿವಣ್ಣನ ಕ್ರೇಜ್ ಇದ್ದಕ್ಕಿದ್ದಂತೆ ಈ ಪರಿ ಕುಸಿದು ಬೀಳಲು ಮುಖ್ಯ ಕಾರಣ ಅವರ ಚಿತ್ರಗಳ ಆಯ್ಕೆಯಲ್ಲಿನ ದೋಷ. ಶಿವರಾಜ್‌ಕುಮಾರ್ ಕೇವಲ ದುಡ್ಡಿಗಾಗಿ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಾರಾ? ಎನ್ನುವಷ್ಟರ ಮಟ್ಟಿಗೆ ಸಿಕ್ಕಸಿಕ್ಕ ಸಿನಿಮಾಗಳನ್ನೆಲ್ಲಾ ಒಪ್ಪಿಕೊಂಡದ್ದರಿಂದಲೋ ಏನೋ ಕಳೆದ ಮೂರೂವರೆ ವರ್ಷಗಳಿಂದ ಶಿವರಾಜ್ ಕುಮಾರ್ ಅಭಿನಯದ ಒಂದೇ ಒಂದು ಚಿತ್ರವೂ ಹಿಟ್ ಆಗಿಲ್ಲ.


ನಂಬಿ ಕೆಟ್ಟಿರಲ್ಲಾ ಶಿವಣ್ಣ!

ಶಿವರಾಜ್‌ಕುಮಾರ್ ಈ ಪರಿ ಸೋತಿದ್ದರೆ ಅದಕ್ಕೆ ಕಾರಣವಾದರೂ ಏನು? ಅವರು ನಂಬಿದ ನಿರ್ದೇಶಕರಾದರೂ ಯಾರು? ಎಂದು ಒಮ್ಮೆ ತಿರುಗಿ ನೋಡಿದರೆ ಕಾಣಸಿಗುವುದು ಬರೀ ಪಡಪೋಸಿ ನಿರ್ದೇಶಕರುಗಳೇ. ರವಿ ಶ್ರೀವತ್ಸ, ಪಿ.ಎನ್.ಸತ್ಯಾರಂಥ ಹಾರಿಬಲ್ ನಿರ್ದೇಶಕರಿಂದ ಹಿಡಿದು ಸಾಯಿಪ್ರಕಾಶ್‌ರಂಥ ಔಟ್ ಡೇಟೆಡ್ ಡೈರೆಕ್ಟರುಗಳ ತನಕ ಶಿವಣ್ಣ ನಂಬಿದ ಬಹುತೇಕ ಎಲ್ಲ ನಿರ್ದೇಶಕರೂ ಅತಿ ಭಯಂಕರರೇ. ಹೀಗಿರುವಾಗ ಅವರು ನಿರ್ದೇಶಿಸಿದ ಚಿತ್ರಗಳಾದರೂ ನೆಟ್ಟಗಿರಲು ಹೇಗೆ ಸಾಧ್ಯ?



ಕೋಟಿಗಳಿಗೆ ಬೆಲೆಯಿಲ್ಲದಂತೆ ಖರ್ಚು ಮಾಡಿದರೂ ಶ್ರೀವತ್ಸನ 'ಮಾದೇಶ' ಮಣ್ಣು ಮುಕ್ಕುವುದನ್ನು ತಪ್ಪಿಸಲಾಗಲಿಲ್ಲ. ಸಂತೆ ವೇಳೆಗೆ ಮೂರು ಮೊಳ ನೇಯುವ ಅನಂತ ರಾಜು ನಿರ್ದೇಶಿಸಿದ್ದ 'ನಂದ' ಅನ್ನೋ ಚಿತ್ರ ಯಾವಾಗ ಥಿಯೇಟರಿಗೆ ಬಂದು ಹೋಯಿತು ಎಂದು ಯಾರಿಗೂ ಗೊತ್ತಾಗಲಿಲ್ಲ. ಕುಖ್ಯಾತ ರೌಡಿ ಮಾಹಿನ್‌ನಂಥ ನಟೋರಿಯಸ್ ವ್ಯಕ್ತಿಗಳು ಕಥೆ, ಚಿತ್ರಕತೆ ಬರೆಯಲು ಹೋದರೆ ಇನ್ನೇನು ತಾನೆ ಆಗಲು ಸಾಧ್ಯ? ಮಾಹಿನ್ ತರಹದವರು ಸಿನಿಮಾ ಕತೆ ಬರೆದು, ತಾವೇ ನಿರ್ಮಿಸಿ ಅದರಲ್ಲಿ ನಟಿಸಲೂ ಮುಂದಾಗಿ ತವ್ಮು ತೆವಲು ತೀರಿಸಿಕೊಳ್ಳಲು ಹೋದಾಗ ಅದಕ್ಕೆ ಶಿವಣ್ಣನಂಥ ಪ್ರಬುದ್ಧ ನಟನ ಇಮೇಜು ಬಲಿಯಾಗಬೇಕಾಗಿದ್ದು ದುರಂತ. ಇನ್ನು ಮೆಜೆಸ್ಟಿಕ್, ದಾಸ, ಗೂಳಿಯಂಥ ಸಿನಿಮಾಗಳನ್ನು ನಿರ್ದೇಶಿಸಿದ್ದ ಪಿ.ಎನ್ ಸತ್ಯಾನನ್ನು ನೆಚ್ಚಿದರೆ 'ಹೊಡಿಮಗ'ದಂಥ ಕೆಟ್ಟ ಸಿನಿಮಾವಲ್ಲದೇ ಮತ್ತೇನು ಬರಲು ಸಾಧ್ಯ?

ಈ ಎಲ್ಲ ನಿರ್ದೇಶಕರು ಶಿವಣ್ಣನ ಕೂದಲ ಕ್ರಾಪು, ಹೇರ್ ಸ್ಟೈಲುಗಳನ್ನು ಇತ್ತಿಂದತ್ತ, ಅತ್ತಿಂದಿತ್ತ ತಿರುಗಿಸಿದರೇ ಹೊರತು ಶಿವಣ್ಣನ ಘನತೆಗೆ, ಪ್ರತಿಭೆಗೆ ಮತ್ತವರ ವೃತ್ತಿಬದುಕಿಗೆ ತಿರುವು ನೀಡುವಂಥ ಒಂದು ಪಾತ್ರವನ್ನೂ ಸೃಷ್ಟಿಸಲಿಲ್ಲ.



ಸಹೋದರರ ಮಧ್ಯೆ ವೈರುಧ್ಯ

ಪುನೀತ್ ಶಿವಣ್ಣನ ಸಹೋದರನಾದರೂ ಸಿನಿಮಾ ಮತ್ತು ಅದರ ಆಯ್ಕೆಯ ವಿಚಾರದಲ್ಲಿ ಇಬ್ಬರ ನಡುವೆ ಸಾಕಷ್ಟು ಭಿನ್ನತೆಯಿದೆ. ಪುನೀತ್ ಚಿತ್ರರಂಗಕ್ಕೆ ಬಂದು ಎಂಟು ವರ್ಷಗಳೇ ಕಳೆದರೂ ಇವತ್ತಿಗೂ 'ವರ್ಷಕ್ಕೊಂದು ಸಿನಿಮಾ' ಸಿದ್ಧಾಂತದಿಂದ ಹೊರಬಂದಿಲ್ಲ. ಹೀಗಾಗಿ ಪುನೀತ್ ನಟಿಸಿದ ಸಿನಿಮಾಗಳ ಸಂಖ್ಯೆ ಕಡಿಮೆಯಾದರೂ ಅವುಗಳಲ್ಲಿ ಗೆದ್ದ ಸಿನಿಮಾಗಳೇ ಹೆಚ್ಚು. ಡಿ. ಬಾಬು ನಿರ್ದೇಶನದ 'ಬಂದಾಸ್' ಚಿತ್ರವೊಂದನ್ನು ಹೊರತುಪಡಿಸಿದರೆ ಪುನೀತ್ ಅಭಿನಯಿಸಿದ ಮಿಕ್ಕೆಲ್ಲ ಚಿತ್ರಗಳೂ ಶತದಿನೋತ್ಸವವನ್ನು ಕಂಡಿವೆ. ತನ್ನ ಪಾತ್ರ ಮತ್ತು ನಿರ್ದೇಶಕರ ಬಗ್ಗೆ ಅಪ್ಪು ತುಂಬಾ ಚ್ಯೂಸಿಯಾಗಿರುವುದೇ ಅವರ ಗೆಲುವಿನ ಗುಟ್ಟು ಎಂಬುದು ಬಹಿರಂಗ ಸತ್ಯ. ಆದರೆ ಸಿನಿಮಾಗಳ ಕುರಿತಾಗಿ ಶಿವರಾಜ್‌ಕುಮಾರ್ ಅವರ ನಿಲುವು ಸಹೋದರ ಅಪ್ಪುಗಿಂತ ತದ್ವಿರುದ್ಧವಾಗಿದೆ. ಹೀಗಾಗಿ ಕಳೆದ ಒಂದು ದಶಕದಲ್ಲಿ ಶಿವರಾಜ್‌ಕುಮಾರ್ ಅಭಿನಯಿಸಿದ ಬಹುತೇಕ ಸಿನಿಮಾಗಳು ಹೊಡಿ, ಬಡಿ, ಕಡಿಗಳೇ. ಇದನ್ನು ಬಿಟ್ಟರೆ ಸಾಯಿಪ್ರಕಾಶರ ಕರ್ಚೀಫು ತೋಯಿಸುವ 'ತಂಗಿ' ಬ್ರಾಂಡ್‌ನ ಹಳಸಲು ಕಥೆಯ ಚಿತ್ರಗಳೇ.

ಕಳೆದ ಒಂದು ವರ್ಷದಲ್ಲಿ ಬಿಡುಗಡೆಗೊಂಡ ಶಿವಣ್ಣ ಅಭಿನಯದ 'ಸತ್ಯ ಇನ್ ಲವ್', 'ಮಾದೇಶ', 'ಬಂಧುಬಳಗ', 'ಪರಮೇಶ ಪಾನ್‌ವಾಲಾ', 'ನಂದ' ಹಾಗೂ 'ಹೊಡಿಮಗ' ಎಂಬ ಅರ್ಧ ಡಜನ್ ಚಿತ್ರಗಳು ನೆಲಕಚ್ಚಿವೆ. ಇಷ್ಟಾದರೂ ಮತ್ತದೇ ಸಾಯಿ ಸಹವಾಸ ಮಾಡಿ 'ಭಾಗ್ಯದ ಬಳೆಗಾರ' ಚಿತ್ರವನ್ನು ಮುಗಿಸಿರುವ ಶಿವಣ್ಣ ಈಗಷ್ಟೇ ಆರಂಭವಾಗಿರುವ 'ದೇವರು ಕೊಟ್ಟ ತಂಗಿ' ಎಂಬ ಮತ್ತೊಂದು ಸಿಸ್ಟರ್ ಸೆಂಟಿಮೆಂಟ್ ಚಿತ್ರದಲ್ಲಿ ತೊಡಗಿಸಿಕೊಂಡಿದ್ದಾರೆ.

ಎವರ್‌ಗ್ರೀನ್ ಹೀರೋ

ವಯಸ್ಸು ಐವತ್ತಕ್ಕೆ ಹತ್ತಿರಾದರೂ ಇಂದಿಗೂ ಕಾಲೇಜ್ ಸ್ಟೂಡೆಂಟ್ ಆಗಿ, ಹದಿನಾರರ ನಟಿಯರೊಂದಿಗೆ ನಲಿವ ಲವರ್ ಬಾಯ್‌ಆಗಿ ಕಾಣಿಸಿಕೊಳ್ಳುವ ಶಿವರಾಜ್‌ಕುಮಾರ್ ಎವರ್ ಗ್ರೀನ್ ಹೀರೋ. ಎಂಥದ್ದೇ ಸಂಗೀತವಿರಲಿ ಅದರ ರಿದಮ್ಮಿಗೆ ಸರಿಯಾಗಿ ಚಿಗರೆಯಂತೆ ಕುಣಿಯುತ್ತಾರೆ. ವಿಷ್ಣು ಅಂಬರೀಶ್‌ರಂಥ ನಟರಿಗೆ ಈ ವಯಸ್ಸಿಗೇ ಮುಖ-ಕುತ್ತಿಗೆಯಲ್ಲಿ ನೆರಿಗೆ ಶುರುವಾಗಿತ್ತು. ಆದರೆ ಶಿವರಾಜ್‌ಕುಮಾರ್ ತನ್ನ ದೇಹ ಮತ್ತು ಮುಖಕಾಂತಿಯನ್ನು ಒಂದೇ ರೀತಿ ಮೇಂಟೇನ್ ಮಾಡಿಕೊಂಡಿದ್ದಾರೆ.


'ಆನಂದ್' ಚಿತ್ರದಿಂದ ನಾಯಕನಾಗಿ, 'ಜನುಮದ ಜೋಡಿ', 'ಚಿಗುರಿದ ಕನಸು' ಥರದ ಸದಭಿರುಚಿಯ ಚಿತ್ರ ಗಳಲ್ಲಿ; 'ದೊರೆ', 'ಹಗಲುವೇಶ'ದಂಥ ಕಲಾತ್ಮಕ ಚಿತ್ರಗಳಲ್ಲೂ ಕಾಣಿಸಿಕೊಂಡ ಶಿವರಾಜ್ ಕುಮಾರ್ ಇನ್ನಾದರೂ ತಮ್ಮ ಪಾತ್ರಗಳ ಬಗ್ಗೆ ನಿಗಾ ವಹಿಸಲಿ. 'ಲಾಂಗಾದರೇನು ಶಿವಾ? ಮಚ್ಚಾದರೇನು ಶಿವಾ' ಎಂಬ ಪರಿಪಾಠವನ್ನು ಅಂತ್ಯಮಾಡಲಿ. ಯಾಕೆಂದರೆ, ಇದು ಬದಲಾವಣೆಯ ಪರ್ವಕಾಲ! ■



ಮತ್ತೊಮ್ಮೆ ರಗಳೆ

ನಿರ್ಮಾಪಕ ರಮೇಶ್ ಯಾದವ್ ಮತ್ತು ನಾಯಕನಟ ಸುದೀಪ್ ನಡುವೆ ಕಿಚ್ಚು ಹತ್ತಿಕೊಂಡಿದೆ.

ಯಾರದೇ ಚಿತ್ರ ಹಿಟ್ ಆಗಲಿ ಅವರ ಕೈಗೊಂದಿಷ್ಟು ಅಡ್ವಾನ್ಸ್ ನೀಡಿ ಬುಕ್ ಮಾಡುವುದು ರಮೇಶ್ ಯಾದವ್ ಸಂಪ್ರದಾಯ. ಅದೇ ರೀತಿ ವರ್ಷದ ಹಿಂದೆ ರಮೇಶ್ ಯಾದವ್ ಕಿಚ್ಚ ಸುದೀಪ್ ಕೈಗೆ ಇಪ್ಪತ್ತು ಲಕ್ಷ ಅಡ್ವಾನ್ಸ್ ನೀಡಿದ್ದರು. ಆದರೆ ಈಗ "ಸುದೀಪ್ ನನಗೆ ಡೇಟ್ಸ್ ಕೊಡದೇ ಒಂದು ವರ್ಷದಿಂದ ಸತಾಯಿಸುತ್ತಾ ಬಂದಿದ್ದಾರೆ. ಆ ಇಪ್ಪತ್ತು ಲಕ್ಷವನ್ನು ಹಿಂದಕ್ಕೆ ಕೊಡಿಸಿ" ಎಂದು ಸುದೀಪ್



ಮೇಲೆ ಗೂಬೆ ಕೂರಿಸಿ ಯಾದವ್ ಚೇಂಬರ್ ಮೆಟ್ಟಿಲನ್ನು ಹತ್ತಿದ್ದಾರೆ.

ಆದರೆ ಸುದೀಪ್ ಇದಕ್ಕೆ ಬೇರೆ ತರಹ ಪ್ರತಿಕ್ರಿಯಿಸುತ್ತಾರೆ. "ಅಡ್ವಾನ್ಸ್ ಕೊಟ್ಟದ್ದು ನಿಜ. ಆದರೆ ಕತೆ ಹೇಳಿದ್ದಾರಾ? ನಿರ್ದೇಶಕರನ್ನು ಕರೆದುಕೊಂಡು ಬಂದಿದ್ದಾರಾ? ಅಥವಾ ನನ್ನ ಬಳಿ ಫೋನ್‌ನಲ್ಲಿ ಯಾವತ್ತಾದರೂ ಇದರ ಬಗ್ಗೆ ಚರ್ಚೆ ಮಾಡಿದ್ದಾರಾ? ನನಗೊಪ್ಪುವ, ಇಷ್ಟವಾಗುವ ಕತೆ ತಂದರೆ ನಾನು ಈಗಲೂ ಡೇಟ್ಸ್ ಕೊಡಲು ತಯಾರಿದ್ದೇನೆ. ಅದು ಬಿಟ್ಟು, ಅಡ್ವಾನ್ಸ್‌ಗೆ ಬಡ್ಡಿ ಸೇರಿಸಿ ಹಣ ನೀಡಿ ಎಂದರೆ, ನಾನೇನು ಬಡ್ಡಿ ವ್ಯಾಪಾರೀನಾ?" ಎಂದು ಸುದೀಪ್ ಪ್ರಶ್ನೆಗಳ ಸುರಿಮಳೆಯನ್ನೇ ಉತ್ತರವಾಗಿ ಸುರಿಸುತ್ತಾರೆ.

ಇವರಿಬ್ಬರನ್ನು ಒಂದು ಮಾಡಲು ಉದ್ಯಮದ ಹಲವಾರು ಮಿತ್ರರು ಹಲವು ಸುತ್ತಿನ ಮಾತುಕತೆ ನಡೆಸಿದರೂ ಅದು ಫಲಪ್ರದವಾಗಲಿಲ್ಲ. ಇಬ್ಬರೂ ಹಠವಾದಿಗಳು. ಹೀಗಾಗಿ ಈಗ ಈ ವ್ಯಾಜ್ಯ ಚೇಂಬರ್ ಮೆಟ್ಟಿಲೇರಿದೆ. ಈ ಚೇಂಬರ್ ಎಂಬ ಪಂಚಾಯತಿ ಕಟ್ಟೆ ಏನು ತೀರ್ಪು ಕೊಡುತ್ತೋ? ನೋಡಬೇಕು. ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44